ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 05, 2012 ಪುಟ 20 ರೂ. 14/-



ಜಗತ್ತಿನ ಅತಿ ಬಡವ ಅಧ್ಯಕ್ಷ






ಧರ್ಮಸ್ಥಳ ಸೌಜನ್ಯಳ ರೇಪ್ & ಮರ್ಡರ್

ಯಾರ ಕೈವಾಡ?

ಜಾಪುರ: ಎಂ.ಎಲ್.ಉಸ್ತಾದ್ ಮಗನಿಗೆ ಪ್ರಾಣ ಬೆದರಿಕೆ

ಶ್ವನೀಡಂ:ಗಾಂಧೀಜಿ ಹೆಸರಲ್ಲಿ ಭೂಲೂಟಿ





ಯಾರದ್ದಾದರೂ ಆಗಲಿ ಸಾವು ಸೂತಕವೇ?

ಕೊಲೆಗಡುಕನ ಸಾವು



ಆದರ ಕೇಂದ್ರ ಪ್ರೇರಣೆ ಬಂದೀಗೌಡರಾಗಿದ್ದರು. ಆ ನಂತರದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರವೇ ಬಂದಿತು. ರಾಮಚಂದ್ರಗೌಡ ಎಂಬ ಸಂಘಪರಿವಾರದ ಕಟ್ಟಾಳು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವನಾಗಿ ಶ್ರೀರಂಗಪಟ್ಟಣದಲ್ಲಿ ಕಾರ್ಯಕ್ರಮವೊಂದನ್ನು ಉದ್ಘಾಟನೆ ಮಾಡಿದಾಗ ಬಂದೀಗೌಡರು ವೇದಿಕೆಯ ಮೇಲೆ ಇದ್ದರು. ಸ್ವಾತಂತ್ರ್ಯ ಹೋರಾಟದ ಕುರಿತ ಆ ಕಾರ್ಯಕ್ರಮದ ಉದ್ಘಾಟನಾ ಭಾಷಣದಲ್ಲಿ, ಅದೇ ನೆಲದ ಮಹಾನ್ ವ್ಯಕ್ತಿ ಟಿಪ್ಪುಸುಲ್ತಾನ್‌ರ ಪ್ರಸ್ತಾಪವೇ ಇರಲಿಲ್ಲ, ಆದರೆ ನಂತರ ಮಾತನಾಡಿದ ಬಂದೀಗೌಡರು ತಮ್ಮ ಎಂದಿನ ಸ್ಪಷ್ಟ ನುಡಿಗಳಲ್ಲಿ 'ನಾವಿಂದು ಇರುವುದು ಟಿಪ್ಪು ಸುಲ್ತಾನರು ಓಡಾಡಿದ, ಹೋರಾಡಿದ ಪುಣ್ಯ ನೆಲದಲ್ಲಿ, ಇಲ್ಲೆಲ್ಲಾ ಅವರ

ಕೋಮುವಾದಗಳ ವಿರುದ್ಧ ಯಾವ ನಿಲುವು ತೆಗೆದುಕೊಳ್ಳುತ್ತಾರೆಂಬುದು ಕಳೆದೆರಡು ದಶಕಗಳಲ್ಲಿ ಪ್ರಜ್ಞಾವಂತರಿಗೊಂದು ಲಿಟ್ಮಸ್ ಟೆಸ್ಟ್ ಎಂಬುದಾದರೆ, ತಮ್ಮ ಇಳಿವಯಸ್ಸಿನಲ್ಲಿ ಬಂದೀಗೌಡರು ಈ ಪರೀಕ್ಷೆಯಲ್ಲಿ ಪಾಸಾದರು. ಬಿಎಂಐಸಿ ಯೋಜನೆಯ ವಿರುದ್ಧ ಸ್ಪಷ್ಟ ನಿಲುವಿನೊಂದಿಗೆ ಅವರು ಬೀದಿ ಹೋರಾಟದಲ್ಲಿ ಪಾಲ್ಗೊಂಡರು. ಯುವ ಕಾರ್ಯಕರ್ತರೊಡನೆ ಹಳ್ಳಿಗಳನ್ನು ಸುತ್ತಿದರು.

ಮಂಡ್ಯ ಜಿಲ್ಲೆಯ ಹಳ್ಳಿಗಳಲ್ಲಿ ಜಾತಿ ಸಂಘರ್ಷವಾದಾಗ ಅಥವಾ ಮಂಡ್ಯ ನಗರದಲ್ಲಿ ಸ್ಲಂ ಜನರಿಗೂ ಮತ್ತು ನಗರದ ಬಲಾಢ್ಯ ಅಧಿಕಾರಸ್ಥರಿಗೂ ನಡುವೆ ವೈರುಧ್ಯವಿದ್ದಾಗ

ಕರೆಯಲಾಗಿತ್ತು, ಆ ಸಭೆಗೆ ಮುಂಚೆ ಮತ್ತು ಸಭೆ ಅವರಿಗೊಂದು ಮುಖ್ಯ ಪಾತ್ರವಿತ್ತು, ಅ ಮುಗಿಸಿಕೊಂಡು ದೊಡ್ಡಬಳ್ಳಾಪುರಕ್ಕೆ ಬಂದವರೇ, ಸಂಗತಿಗಳನ್ನು ಮಾತಾಡಲು ನನ್ನನ್ನು ಕರೆಸಿಕೊಂ ರೈಲ್ವೇ ಸ್ಟೇಷನ್ ಹತ್ತಿರದ ಹೋಟೆಲ್‌ನಲ್ಲಿ ತಿಂಡಿ ಮಾತಾಡಿದ ನಂತರ ಹತ್ತಿರದ ಹಳ್ಳಿಯೊಂದಕ್ಕೆ ಹೊರ ಶಿರಾದ ಸಭೆ, ಪ್ರಯಾಣ, ತಮ್ಮ 'ಪುಟ್ಟಾಸ್ಪತ್ರೆ' ಹಲವಾರು ರೋಗಿಗಳಿಗೆ ಚಿಕಿತ್ಸೆ, ನನ್ನೊಂದಿಗೆ ಎಲ್ಲವನ್ನೂ ಮುಗಿಸಿ ಅದೇ ಉಸಿರಿನಲ್ಲಿ ಯಾವು ಮೂಲೆಯ ಹಳ್ಳಿಗೆ ಏಕೆ ಹೊರಟಿದ್ದರು ಗೊತ್ತೆ? 'ಅವ ಬೇವರ್ಸಿ ಇದ್ದಾನೆ ಅಲ್ಲಿ, ಪಾಪ ಬಲೇ ವಳ್ಳೇನು ಅವ್ನೂನು ಒಂದು ವುಡುಗೀನು ಇಷ್ಟ ಪಟ್ಟವ್ರೆ. ಆ ವ

ಕನ್ನಡನಾಡು ನೆನಪಿಟ್ಟುಕೊಳ್ಳಬೇಕಾದ ಮೂರು ಜೀವಗಳ

ಐದು ದಿನಗಳ ಕೆಳಗೆ (18.11.2012) ತೀರಿಕೊಂಡ ಡಾ.ಸಿ.ಬಂದೀಗೌಡರಿಗೆ 96 ವರ್ಷ ವಯಸ್ಸಾಗಿತ್ತು, ವಯಸ್ಸು ಹಾಗೂ ಹೃದ್ರೋಗದ ಕಾರಣದಿಂದ ಅವರಿಗೆ ಹೆಚ್ಚು ಓಡಾಡಲಾಗುತ್ತಿರಲಿಲ್ಲ, ತುಂಬು ಜೀವನವನ್ನು ನಡೆಸಿ, ಒಬ್ಬ ವ್ಯಕ್ತಿಯಾಗಿ ಕುಟುಂಬಕ್ಕೆ, ಸಮಾಜಕ್ಕೆ ಏನೇನು ಮಾಡಬಹುದೋ ಅದನ್ನು ಸಾಧ್ಯವಿದ್ದಷ್ಟು ಬಂದೀಗೌಡರು ಮಾಡಿದ್ದರು. ಆದರೂ ನಮ್ಮಂತಹವರಿಗೆ ಅದು ಒಂದು ನಷ್ಟವೇ. ಏಕೆಂದರೆ ಸಮಾಜಕ್ಕೆ ಏನಾದರೂ ಮಾಡಬೇಕೆಂದು ಬಯಸುವ ಯಾವುದೇ ಕಾರ್ಯಕರ್ತನಿಗೆ ಒಂದು ವೇಳೆ ಉತ್ಸಾಹ ಕಡಿಮೆಯಾಗಿದ್ದರೆ ಆತ ಬಂದೀಗೌಡರನ್ನು ಒಮ್ಮೆ ಭೇಟಿ ಮಾಡಿದರೆ ಸಾಕಾಗಿತ್ತು. ಮತ್ತೆ ಚೈತನ್ಯ ತುಂಬಿಕೊಳ್ಳುವಂತೆ ಆಗುತ್ತಿತ್ತು. ಅವರ ಆಶಾವಾದ, ಸಾಮಾಜಿಕ ಬದಲಾವಣೆಯ ಕುರಿತು ಸಕಾರಾತ್ಮಕ ದೃಷ್ಟಿಕೋನ ಹಾಗೂ 'ನೀವು ಇದನ್ನು ಸಾಧಿಸಿಯೇ ತೀರುತ್ತೀರಿ' ಎಂದು ಧೈರ್ಯ ನೀಡುತ್ತಿದ್ದ ರೀತಿಯ ನೆನಪು ಮಾತ್ರ ಈಗ ನಮ್ಮೊಂದಿಗಿದೆ.


2002ರ ಡಿಸೆಂಬರ್ 29ರಂದು ಚಿಕ್ಕಮಗಳೂರಿನ ಆಜಾದ್ ಪಾರ್ಕ್‌ನಲ್ಲಿ ನಡೆದ 'ಬಾಬಾಬುಡನ್‌ಗಿರಿ ಸೌಹಾರ್ದ ಸಮಾವೇಶ'ಕ್ಕೆ ಬಂದೀಗೌಡರಿಗೆ ವಿಶೇಷ ಆಹ್ವಾನವನ್ನೇನೂ ನೀಡಿರಲಿಲ್ಲ, ಎಲ್ಲರಿಗೂ ಕಳಿಸಿದಂತೆ ಅವರಿಗೂ ಕರಪತ್ರ ಮತ್ತು ಮನವಿಪತ್ರವಷ್ಟೇ ತಲುಪಿದ್ದವು. ಆದರೆ ಗುಜರಾತ್ ಹತ್ಯಾಕಾಂಡದ ಭೀಕರತೆ ಹಾಗೂ ಎಲ್ಲೆಡೆ ಆವರಿಸುತ್ತಿದ್ದ ಕೋಮುವಾದದ ನಂಜನ್ನು ಸೂಕ್ಷ್ಮವಾಗಿ ಗಮನಿಸಿದ್ದ ಅವರು, ತಮ್ಮ ಸ್ನೇಹಿತ ಪಾಂಡವಪುರದ ಮಾಜಿ ಶಾಸಕ ಹಲಗೇಗೌಡರ ಜೊತೆ ಕಾರು ಹತ್ತಿ ಬಂದುಬಿಟ್ಟದ್ದರು. ಆಗಲೇ 86 ವರ್ಷದವರಾಗಿದ್ದ ಬಂದೀಗೌಡರಿಗೆ ಕಿವಿ ಕೇಳಿಸುತ್ತಿರಲಿಲ್ಲ, ನಡಿಗೆಯೂ ನಿಧಾನವಾಗಿತ್ತು. ವೇದಿಕೆ ಹತ್ತಿ ಬಂದು ಸ್ಪಷ್ಟವಾಗಿ ತನಗನ್ನಿಸಿದ್ದನ್ನು ಮೈಕ್‌ನಲ್ಲಿ ಹೇಳಿದರು. ಕರ್ನಾಟಕದ ಸಮಸ್ತ ಪ್ರಗತಿಪರರ ಅಪರೂಪದ ಜಾತ್ರೆಯಾಗಿದ್ದ ಆ ದಿನದ ಕಾರ್ಯಕ್ರಮದಲ್ಲಿ ಅದೂ ಒಂದು ವಿಶೇಷವಾಗಿತ್ತು.


ವೇದಿಕೆಯಿಂದ ಕೆಳಗೆ ಇಳಿದ ಸ್ವಲ್ಪ ಹೊತ್ತಿನಲ್ಲೇ ಇನ್ನೊಂದು ಪ್ರಮುಖ ಕಾರ್ಯಕ್ರಮ ರೂಪುಗೊಂಡು ಬಿಟ್ಟಿತು. ಹಲಗೇಗೌಡರು ಮತ್ತು ಪ್ರೊ. ಎಚ್.ಎಲ್.ಕೇಶವಮೂರ್ತಿಯವರ ಜೊತೆ ಚರ್ಚಿಸಿ ಬಂದೀಗೌಡರು ಮುಂದಿನ ಮೇ 4ಕ್ಕೆ ಟಿಪ್ಪುಸುಲ್ತಾನ್ ನೆನಪಿನಲ್ಲಿ ಶ್ರೀರಂಗಪಟ್ಟಣದಲ್ಲಿ ಇಂತಹುದ್ದೇ ಕಾರ್ಯಕ್ರಮ ಮಾಡಬೇಕೆಂದು ನಿಗದಿಪಡಿಸಿದ್ದರು!

ಸೀಮಿತ ಸಂಪನ್ಮೂಲ ಹಾಗೂ ಅಗಾಧ ಸವಾಲಿನ ಎದುರು ಕೆಲಸ ಮಾಡುತ್ತಿರುವ ಕೋಮುಸೌಹಾರ್ದ ವೇದಿಕೆಯ ಹೆಚ್ಚಿನ ಕಾರ್ಯಕ್ರಮಗಳು, ಕೋಮುವಾದಿಗಳ ಕುಕೃತ್ಯಗಳಿಗೆ ಪ್ರತಿಕ್ರಿಯೆಯಾಗಿ ನಡೆಯುವ ಪ್ರತಿರೋಧದ ಕಾರ್ಯಕ್ರಮಗಳು. ಆದರೆ ಶ್ರೀರಂಗಪಟ್ಟಣದಲ್ಲಿ ನಡೆದ ಸಮಾವೇಶವು, ತಾನೇ ಮುಂದಾಗಿ (ಪ್ರೊಆಕ್ಟಿವ್) ಯೋಜಿಸಿದ ವಿಶಿಷ್ಟ ಸಮಾರಂಭವಾಗಿತ್ತು, ನಿಸ್ಸಂದೇಹವಾಗಿ

ಸ್ಫೂರ್ತಿ ನಮಗೆ ಕಾಣಿಸಬೇಕು. ಅದು ಈ ದೇಶವನ್ನು ಕಟ್ಟಲು ಪ್ರೇರಣೆಯಾಗಬೇಕು' ಎಂದು ಹೇಳಿದರು. ಟಿಪ್ಪುವಿನ ಕುರಿತಂತೆ ಮಾತ್ರ ನಾಲ್ಕಾರು ಮಾತಾಡಿ ಕುಳಿತರು. ರಾಮಚಂದ್ರಗೌಡರ ಭಾಷಣದ ಪ್ರಸ್ತಾಪವೇ ಇಲ್ಲದೇ, ಏನು ಮಾಡಬೇಕೋ ಅದನ್ನು ಬಂದೀಗೌಡರು ಮಾಡಿದ್ದರು.

ಬ್ರಿಟಿಷರು ಆಳುತ್ತಿದ್ದ ಸಂದರ್ಭದಲ್ಲಿ ಬಂದೀಗೌಡರು ಮೈಸೂರು ಮೆಡಿಕಲ್ ಕಾಲೇಜು ವಿದ್ಯಾರ್ಥಿ. ಕಾಲೇಜಿನ ಪ್ರಿನ್ಸಿಪಾಲರು ಸ್ವಾತಂತ್ರ್ಯ ಹೋರಾಟದ ಕುರಿತು ಮತ್ತು ಗಾಂಧಿಯವರ ಕುರಿತು ತಪ್ಪಾಗಿ ಮಾತಾಡಿದಾಗ 'ನಿಮ್ಮ ಮಾತು ವಾಪಸ್ಸು ತೆಗೆದುಕೊಳ್ಳಬೇಕು' ಎಂದು ನಿಷ್ಠುರವಾಗಿ ಬಂದೀಗೌಡರು ಅವರಿಗೆ ಹೇಳಿದರು. ಕಾಲೇಜಿನಿಂದ ವಿದ್ಯಾರ್ಥಿಗಳನ್ನು ಕರೆದುಕೊಂಡು ಮೆರವಣಿಗೆ ಮಾಡಿದ್ದಷ್ಟೇ ಅಲ್ಲದೇ, ಕೆಲವು ಕಾಲ ಕಾಲೇಜನ್ನೂ ಬಿಟ್ಟುಬಿಟ್ಟರು. ಕ್ವಿಟ್ ಇಂಡಿಯಾ ಚಳವಳಿಯ ಕಾವು ಕಡಿಮೆಯಾದ ಮೇಲೆ ವೈದ್ಯಕೀಯ ವಿದ್ಯಾಭ್ಯಾಸವನ್ನು ಮುಗಿಸಿ, 1944ರಲ್ಲಿ ಪಾಂಡವಪುರದಲ್ಲೊಂದು ಕ್ಲಿನಿಕ್ ತೆಗೆದರು. ನಂತರ


ಬಂದೀಗೌಡರು


ಡಾ.ವೆಂಕಟರೆಡ್ಡಿ


ರಮೇಶ್ ಗಡದನ್ನನವರ್

ಶ್ರೀರಂಗಪಟ್ಟಣದಲ್ಲಿ ಅದನ್ನು ಮುಂದುವರೆಸಿದವರು 1996ರವರೆಗೂ ಆ ಭಾಗದ ಅತ್ಯಂತ ಸಾಮಾನ್ಯ ಜನರ ವೈದ್ಯರಾಗಿ ಕೆಲಸ ಮಾಡಿದರು. ದಶಕಗಳ ಕಾಲ ಒಂದಾಣೆ ಡಾಕ್ಟರಾಗಿದ್ದವರು, ನಂತರ ಎರಡು ರೂಪಾಯಿ ಡಾಕ್ಟರಾದರು.

ಕಾಂಗ್ರೆಸ್ ಪಕ್ಷದಲ್ಲಿ ಅತ್ಯಂತ ಪ್ರಾಮಾಣಿಕತೆ, ನಿಷ್ಠುರತೆಗಳಿಂದ ಕೆಲಸ ಮಾಡುತ್ತಾ, ಒಮ್ಮೆ ಮೈಸೂರಿನ ಬಸವಯ್ಯನವರನ್ನು ಸೋಲಿಸಿ ವಿಧಾನಪರಿಷತ್ ಸದಸ್ಯರಾಗಿದ್ದರು. ಇನ್ನೊಮ್ಮೆ ಎಸ್.ಎಂ.ಕೃಷ್ಣ ಅವರ ವಿರುದ್ಧ ಲೋಕಸಭಾ ಚುನಾವಣೆಯಲ್ಲಿ ಸೋತರು. ತುರ್ತು ಪರಿಸ್ಥಿತಿಯ ನಂತರ ಕಾಂಗ್ರೆಸ್‌ನಲ್ಲಿ ಮುಂದುವರೆಯುವುದು ಸಾಧ್ಯವಿಲ್ಲವೆಂದು ತೀರ್ಮಾನಿಸಿದವರು, ಆ ನಂತರ ಈ ರಾಜಕಾರಣವೇ ತನಗಲ್ಲ ಎಂದು ಹೊರಗುಳಿದರು. 'ನನ್ನ ಬಗ್ಗೆ ಜನರಿಗೆ ಒಂದು ಮಟ್ಟದ ಗೌರವ ಇರಬಹುದು, ಆದರೆ ನಾನು ಇಂದು ಚುನಾವಣೆಗೆ ನಿಂತರೆ ಡಿಪಾಸಿಟ್ಟೂ ಬರಲ್ಲ' ಎಂದು ನಗುತ್ತಾ ಹೇಳುತ್ತಿದ್ದರು. ತಮ್ಮ ಇಡೀ ಜೀವನದುದ್ದಕ್ಕೂ ಭ್ರಷ್ಟಾಚಾರದ ವಿಚಾರದಲ್ಲಿ ಬಂದೀಗೌಡರು ಅತ್ಯಂತ ನಿಷ್ಠುರ ವ್ಯಕ್ತಿ. ಜಾಗತೀಕರಣ ಹಾಗೂ

ಯಾವ ಹಿಂಜರಿಕೆಯೂ ಇಲ್ಲದೇ ಶೋಷಿತರ ಪರ ನಿಂತರು. ಕೆಂಗಲ್ ಹನುಮಂತಯ್ಯನವರೂ ಸೇರಿದಂತೆ ಹಳೆಯ ಕಾಂಗ್ರೆಸ್‌ನ ದೊಡ್ಡ ನಾಯಕರೆಲ್ಲರನ್ನೂ ಹತ್ತಿರದಿಂದ ಬಲ್ಲವರಾಗಿದ್ದ ಬಂದೀಗೌಡರು, ಕಡೆಯವರೆಗೂ ಅವ್ಯಾವನ್ನೂ ತಮ್ಮ ಅಥವಾ ತಮ್ಮ ಕುಟುಂಬದ ಲಾಭಕ್ಕೆ ಬಳಸಲಿಲ್ಲ. ರಾಜಕಾರಣದ ಎಲ್ಲ ಕೊಳಕುಗಳ ಬಗ್ಗೆ ಅಪಾರ ಸಿಟ್ಟಿದ್ದರೂ ಸಿನಿಕರಾಗಲಿಲ್ಲ, ಒಂದಲ್ಲ ಒಂದು ದಿನ ಜನರು ಇದನ್ನು ಅರ್ಥಮಾಡಿಕೊಂಡೇ ಮಾಡಿಕೊಳ್ಳುತ್ತಾರೆ, ನಿಮ್ಮ ಪ್ರಯತ್ನ ಯಶಸ್ವಿ ಆಗೇ ಆಗುತ್ತದೆ ಎಂದು ಬಹಳ ಖಚಿತ ದನಿಯಲ್ಲಿ ಹೇಳುತ್ತಿದ್ದರು. 40-50 ವಯಸ್ಸು ದಾಟುತ್ತಿರುವಾಗಲೇ 'ಅಯ್ಯೋ, ಏನೂ ಆಗಲ್ಲ ನಮ್ಮ ದೇಶದಲ್ಲಿ' ಎಂಬ ನಿವೃತ್ತ ಭಾವ ತಳೆಯುವವರೇ ಹೆಚ್ಚುತ್ತಿರುವಾಗ, ಬಂದೀಗೌಡರು ಯುವ ಕಾರ್ಯಕರ್ತರಲ್ಲಿ ಆಶಾವಾದ ಮೂಡಿಸುತ್ತಿದ್ದರು. ಅಂತಹ ಒಬ್ಬ ವ್ಯಕ್ತಿಯನ್ನು ನಾಡು ಕಳೆದುಕೊಂಡಿದೆ.

ಕಳೆದ ತಿಂಗಳಷ್ಟೇ ತೀರಿಕೊಂಡ ಇನ್ನೊಬ್ಬ ವೈದ್ಯ ಹೋರಾಟಗಾರ ಡಾ.ವೆಂಕಟರೆಡ್ಡಿಯವರ ಕುರಿತು ಪತ್ರಿಕೆಯಲ್ಲಿ ಲೇಖನ ಬಂದಿತ್ತು, ಬಳ್ಳಾರಿಯಲ್ಲಿ ಹುಟ್ಟಿ ಬೆಳೆದು ದೊಡ್ಡಬಳ್ಳಾಪುರದಲ್ಲಿ ನೆಲೆನಿಂತು ಅಲ್ಲೇ ತೀರಿಕೊಂಡ ಡಾ.ರೆಡ್ಡಿಯವರು, ಮನುಷ್ಯ ಮಾತ್ರನೊಬ್ಬ ತನ್ನ ಜೀವಿತಕಾಲದಲ್ಲಿ ಮಾಡಲು ಸಾಧ್ಯವಾಗದ 3-4 ಪಾತ್ರಗಳನ್ನು ಒಟ್ಟೊಟ್ಟಿಗೇ ಸಾರ್ಥಕವಾಗಿ ನಿಭಾಯಿಸಿದ್ದರು. ದಶಕಗಳ ಕಾಲ ರೋಗಿಗಳ ಸೇವೆ ಸಲ್ಲಿಸಿದ ಡಾಕ್ಟ್ರು, ಹೃದಯವಂತ ಮನುಷ್ಯ, ಇಡೀ ತಾಲೂಕಿನ ಪ್ರತೀ ಹಳ್ಳಿಯ ಕಾಲು ಭಾಗದಷ್ಟು ಜನರನ್ನಾದರೂ ತಲುಪಿದ್ದ ಮನೆಯ ಹಿರಿಯ, ತನ್ನ ಊರಿಗೂ ಇಡೀ ನಾಡಿಗೂ ಏಕಕಾಲದಲ್ಲಿ ಬೇಕಾದ ಚಿಂತನೆ ಹಾಗೂ ಹೋರಾಟವನ್ನು ನಡೆಸುತ್ತಿದ್ದ ಸಾಮಾಜಿಕ ಕಾರ್ಯಕರ್ತ ಎಲ್ಲವೂ ಆಗಿದ್ದ ಸಾರ್ಥಕಜೀವ ರೆಡ್ಡಿ ಡಾಕ್ಟ್ರು.

ಅವರ ಕಡೆಯ ಕಾಲದಲ್ಲಿ ಅವರು ತೀವ್ರವಾಗಿ ಹಚ್ಚಿಕೊಂಡಿದ್ದ ಸಂಗತಿಗಳು ಎರಡು. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಯೋಜನೆಗಳು ಸಾಕಾರಗೊಳ್ಳಬೇಕು ಮತ್ತು ರೈತಸಂಘ ಯಾವ ಕಾರಣಕ್ಕೂ ಮತ್ತೆ ಎರಡಾಗದೇ ಬಲಿಷ್ಠ ಬೇರುಮಟ್ಟದ ಚಳವಳಿಯಾಗಿ ಬೆಳೆಯಬೇಕು. ಅವರ ಪ್ರಯತ್ನ ಹಾಗೂ ನಿರೀಕ್ಷೆಗಳಿಗೆ ವಿರುದ್ಧವಾಗಿ ರೈತಸಂಘ ಎರಡಾದಾಗ ತಾನು ಯಾವ ನಿಲುವನ್ನು ತೆಗೆದುಕೊಳ್ಳಬೇಕೆಂಬುದರ ಕುರಿತು ಅತೀವ ಗೊಂದಲಕ್ಕೊಳಗಾದರು. ಅದರಿಂದ ಚೇತರಿಸಿಕೊಳ್ಳುವ ಮುನ್ನ ಇಲ್ಲವಾದರು. ಅವರು ಕಾಲವಾದ ಈ ಸಂದರ್ಭದಲ್ಲೇ ಬರಪೀಡಿತ ಜಿಲ್ಲೆಗಳ ಶಾಶ್ವತ ನೀರಾವರಿ ಹೋರಾಟ ಬಲ ಪಡೆದುಕೊಳ್ಳುತ್ತಿದೆ ಮತ್ತು ವಿಚಿತ್ರವಾದ ರಾಜಕೀಯ ತಿರುವನ್ನೂ ಪಡೆದುಕೊಳ್ಳುತ್ತಿದೆ. ಎರಡರಲ್ಲೂ 'ಬ್ಯಾಲೆನ್ಸ್ ಫ್ಯಾಕ್ಟರ್' ಆಗಿರಬಹುದಾಗಿದ್ದ ರೆಡ್ಡಿಯವರು ಇಲ್ಲವಾಗಿದ್ದಾರೆ.

ಇಷ್ಟು ದೊಡ್ಡ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡಿರುತ್ತಿದ್ದ ಡಾ.ರೆಡ್ಡಿ ತಮಗೆ ಪರಿಚಯವಿರುವ ಪ್ರತೀ ಮನುಷ್ಯರ ಬದುಕಿನ ಸಮಸ್ಯೆಗಳಿಗೂ ಜಾಗ ಇಟ್ಟುಕೊಂಡಿರುತ್ತಿದ್ದರು. ಬಹುಶಃ ಒಂದು ವರ್ಷಕ್ಕೂ ಹಿಂದೆ ಶಿರಾದಲ್ಲಿ ರೈತಸಂಘದ ಒಳಗಿನ ಜಗಳಗಳನ್ನು ಸರಿಮಾಡಿಕೊಳ್ಳಲು ಪ್ರಮುಖವಾದ ಸಭೆಯೊಂದನ್ನು

ವಿಧವೆ. ಎಲ್ರೂ ಮನೇವ್ರ ಅತ್ಲಾನೂ ಮಾತಾಗಿತ್ತು, ಬಂದು ನಾನು ಶಿರಾಗೆ ವೋಗೋಕೆ ಮುಂಚೆ ರಿ ಮದ್ವೆ ಆಗ್ಬೇಕಿತ್ತು, ನಾವ್ ಕಾಯ್ತಾ ಕೂತಿದ್ದೀವಿ ಬರ್ಲೇ ಇಲ್ಲ, ಬಹುಶಃ ಜಾತಿಕಾರಣಕ್ಕೆ ಹುಡುಗನ ಮ ತೊಂದ್ರೆ ಕೊಟ್ಟಿರ್ತಾರೆ. ಅದ್ಕೇ ಆ ಬೇವರ್ಸಿಗೆ ಹೇಳಿ ತಿರ್ಗಾ ರಿಜಿಸ್ಟರ್ ಮಾಡಿಸ್ಬೇಕು ಅದ್ಕೇ ವೋಗ್ತೀರಿ ಹೀಗಿದ್ದರು ಡಾ.ರೆಡ್ಡಿ.

ಮುಂದಿನ ಸಾರಿ ಸಿಕ್ಕಾಗ ಆ ಜೋಡಿ ಕಥೆ ಏನ ಅಂತ ಕೇಳಿದಾಗ 'ಅವತ್ತು ಅವ್ನು ಸಿಗಲಿಲ್ಲ, ತಿರ್ಗಾ ಬಿಡಲಿಲ್ಲ, ಅವರ್ದು ಮದ್ವೆ ಆಯ್ತು' ಅಂದರು ಜೋಡಿಯಿಂದ ಮತ್ತೆ ತಮಗೇನೋ ಆಗಬೇಕು, ಅ ಕೃತಜ್ಞರಾಗಿರಬೇಕು ಎಂತಲೂ ಬಯಸಲಿಲ್ಲ. ರೆಡ್ಡಿ ಒಡನಾಡಿಗಳಾಗಿದ್ದವರೆಲ್ಲಾ ಸೇರಿಕೊಂಡು, ಅವರೊ ಮಾಡುತ್ತಿದ್ದ ಕೆಲಸವನ್ನು ನಿಭಾಯಿಸುವ ಜವಾ ಹೊತ್ತುಕೊಳ್ಳಬೇಕಿದೆ.

ರೆಡ್ಡಿಯವರು ತೀರಿಕೊಂಡ ತಿಂಗಳೊಳಗೇ ಇಲ ಮತ್ತೊಬ್ಬರು ಮುಧೋಳ ತಾಲೂಕಿನ ರವ ಗಡದನ್ನನವರ್. ಅವರೂ 62ರ ವಯಸ್ಸಿಗೇ ತೀರಿಕೊ ತೀಕ್ಷ್ಣವಾಗಿ ಭಾಷಣ ಮಾಡುತ್ತಿದ್ದ ರೈತ ಚಳವ ನಿಷ್ಠುರ ಕಾರ್ಯಕರ್ತರಲ್ಲೊಬ್ಬರು ಅವರು. ಒಮ್ಮೆ ಪಂಚಾಯ್ತಿ ಸದಸ್ಯರೂ ಆಗಿದ್ದ ಅವರು ಆ ಭಾ ಸಾಮಾನ್ಯ ರೈತರಿಗೆ ಪ್ರಿಯವಾಗಿದ್ದ ರೈತನಾಯಕರು. ಚ ಬಂದು ಅಪಾರ ಜನರ ಪ್ರೀತಿ ಗಳಿಸಿಕೊಂಡಿದ್ದರು. ಕುಟುಂಬ ಬಡತನದತ್ತ ಸಾಗಿತ್ತು. 2006ರಲ್ಲಿ ಬಿ ಮತ್ತು ಬಾಗಲಕೋಟೆ ಜಿಲ್ಲೆಗಳ ಕಬ್ಬು ಬೆಳೆಗಾ ನ್ಯಾಯಯುತ ಬೆಲೆ ದೊರಕಿಸಿಕೊಡಲು ರೈತಸಂಘ ಬ ಹಮ್ಮಿಕೊಂಡಿತ್ತು, ಆಗ ತಮ್ಮ ಆರೋಗ್ಯವನ್ನು ಲ ಸುತ್ತಿದ ಗಡದನ್ನನವರ್ ಅನಾರೋಗ್ಯಕ್ಕೀಡಾದರು. ಹೊಟ್ಟೆನೋವಿನಿಂದ ಆಸ್ಪತ್ರೆಗೆ ಸೇರಿ, ಶಸ್ತ್ರಚಿ ಒಳಗಾದರು. ಆ ಸಂದರ್ಭದಲ್ಲಿ ಜೊತೆಯ ಕಾರ್ಯಕರ್ತರು ಗಡದನ್ನನವರ್ ಅವರ ಮನೆಯ ಬಂದು ಹೇಳಿದ ಮಾತನ್ನು ಕೇಳಿ ದಂಗಾದರು. ಕೊ ತಾಳಿಯನ್ನು ತೋರಿ 'ನನಗೆ ಅವರು ಉಳಿಸಿರು ಇದೊಂದನ್ನೇ, ಅದನ್ನಾದರೂ ಉಳಿಸ್ತಾರೋ ಇಲ್ಲ ಆ ಕುರಿತು ಗಡದನ್ನನವರ್ ಹೇಳಿದ್ದೇನೆಂದರೆ ಜನರ ಮನುಷ್ಯ. ಅದಕ್ಕಾಗಿ ಏನನ್ನು ಕಳೆದುಕೊ ತಯಾರಿದ್ದೀನಿ'. ಕನಿಷ್ಠ ಆರು ತಿಂಗಳಾದರೂ ವಿ ತೆಗೆದುಕೊಳ್ಳಬೇಕೆಂಬ ವೈದ್ಯರ ಸಲಹೆಯನ್ನು ಮತ್ತೆ ಊರೂರು ಸುತ್ತಲು ಹೊರಟರು.


ಚಳವಳಿಗಳೇ ಇಲ್ಲವೆಂಬ ಹಳಹಳ ಎ ವ್ಯಕ್ತವಾಗುತ್ತಿರುವಾಗ ಇಂತಹ ಪ್ರಾಮಾಣಿಕ ಕಾರ್ಯ ಮತ್ತು ನಾಯಕರುಗಳು ಇನ್ನೂ ನಾಡಿನ ವಿವಿಧೆ ಹೋರಾಟದ ಪಸೆಯನ್ನು ಕಾಯ್ದುಕೊಳ್ಳುತ್ತಿರುವ ಮರೆಯಬಾರದು ಅಲ್ಲವೇ? ಮೇಲೆ ಹೆಸರಿ ಮೂವರಲ್ಲೂ ಅವಗುಣಗಳು ಇರಲೇ ಇಲ್ಲ ಎಂ ಅಲ್ಲ, ಅವರನ್ನು ಹತ್ತಿರದಿಂದ ಬಲ್ಲವರು ಸಾಕಷ್ಟನ್ನು ಮಾಡಬಹುದೇನೋ? ಆದರೆ ಇವರೆಲ್ಲರೂ ಕಡೆಯ ಜನಪರ ಕಾಳಜಿಯನ್ನು ಜೊತೆಗಿಟ್ಟುಕೊಂಡೇ ಇ

ಇವರೆಲ್ಲರೂ ತೀರಿಕೊಂಡಾಗ ಸಾವಿರಗಟ್ಟಲೆ ಸಾಮಾನ್ಯ ಜನರು, ಬಡವರು, ಕೂಲಿಕಾರರು, ವೃದ್ಧ ಮಹಿಳೆಯರು ಬಂದು ಸೇರಿದ್ದರು. ಕಣ್ಣೀರು ಹಾ ಈ ವಯಸ್ಸಿನಲ್ಲಿ ಸಾಯಬಹುದೆಂಬ ನಿರೀಕ್ಷೆಯೇ ವೆಂಕಟರೆಡ್ಡಿ ಮತ್ತು ಗಡದನ್ನನವರ್ ಅವರು ಇಲ್ಲ ಸುತ್ತಲಿದ್ದ ಎಲ್ಲರಲ್ಲೂ ಅನಾಥಭಾವ ತುಂಬಿಕೊಂ

ಬಾಳಾ ಠಾಕ್ರೆ ಸತ್ತದ್ದಕ್ಕೆ ಸೇರಿದ್ದ ಶಿವಸೈನಿಕರ ಸಂ ಮಾಧ್ಯಮಗಳು ಮನುಷ್ಯಕುಲದ ಸಾಗರವೇ ಅಲ್ಲಿ ಎಂದು ಕೂಗಿಕೊಳ್ಳುತ್ತಿವೆ. ಹುಲಿಯ ಗರ್ಜನೆ ಎಂದು ಬಣ್ಣಿಸಿವೆ. ಮನುಷ್ಯತ್ವದ ಮೂಲಭೂತ ಅ ಕಾಣೆಯಾಗಿದ್ದ, ಮತೀಯ ನಂಜು ಮತ್ತು ದುರಭಿಮಾನದ ಪ್ರತೀಕವಾಗಿದ್ದ ಠಾಕ್ರೆಗೆ ಮಾಧ್ಯಮಗಳು ನೀಡಿದ ಗೌರವ ಈ ವಾರದ ದುರ ಇತಿಹಾಸದಲ್ಲಿ ನಿಂತಿರುತ್ತದೆ.

ರಾಜಕೀಯ ಮಸಲತ್ತಿಗೆ ಕಸಬ್ ಗಲ್ಲಿಗೇರಿದ

ಪಾಕಿಸ್ತಾನದ ಭಯೋತ್ಪಾದಕ ಕಸಬ್‌ನನ್ನು ಗಲ್ಲಿಗೇರಿಸಿದ ಸುದ್ದಿ ಕೇಳಿ ಭಾರತದ ಬಹಳಷ್ಟು ಮಂದಿ ಸಂಭ್ರಮಾಚರಿಸಿದರು. ಇಂಟರ್‌ನೆಟ್‌ನಲ್ಲಿ ಹೇರಳವಾಗಿರುವ ದೇಶಭಕ್ತ ಹಿಂದೂ ವೀರರು (ಅವರಲ್ಲಿ ಬಹಳಷ್ಟು ಮಂದಿ ಅನಿವಾಸಿ ಭಾರತೀಯರಾಗಿದ್ದರೂ) ಸಿಹಿ ತಿಂದಷ್ಟು ಸಂತೋಷಪಟ್ಟರು. ತನ್ನನ್ನು ಬುದ್ಧಿಜೀವಿ ಎಂದು ಕರೆದುಕೊಳ್ಳುವ ಕನ್ನಡದ ಟಿವಿ ನಟಿಯೊಬ್ಬಳಂತೂ ಎಲ್ಲಾ ಸೂಕ್ಷ್ಮತೆಯನ್ನು ತೊರೆದು 'ಯಾರ ಬಳಿಯಾದರೂ ಕಸಬ್‌ನನ್ನು ಗಲ್ಲಿಗೇರಿಸಿದ ವಿಡಿಯೋ ಇದೆಯಾ? ಅದನ್ನು ನೋಡುವ ಆಶೆ ನನಗೆ' ಎಂದಳು. ಒಬ್ಬನ ಸಾವನ್ನು - ಆತ ಪರಮ



ದುಷ್ಟನೇ ಆಗಿದ್ದರೂ - ಹೀಗೆ ಸಂಭ್ರಮಿಸಿದ್ದನ್ನು ಕಂಡು ಬಹಳಷ್ಟು ಜನರಿಗೆ ದಿಗ್ಭ್ರಮೆ ಆಗಿದ್ದೂ ನಿಜ. 'ಕೊಲೆ ಮಾಡುವುದು ತಪ್ಪೆಂದು ತೋರಿಸಲು ಕೊಲೆ ಮಾಡಿದ್ದ ಒಬ್ಬನನ್ನು ಕೊಲ್ಲುವುದು ಎಷ್ಟು ಸರಿ' ಎಂದು ಪ್ರಶ್ನಿಸಿದವರೂ ಇದ್ದರು.

ಮರಣದಂಡನೆ ವಿರುದ್ಧದ ನಮ್ಮ ತಂಡದ ನಿಲುವನ್ನು ಈಗಾಗಲೇ ಹಲವಾರು ಬಾರಿ ಸ್ಪಷ್ಟಪಡಿಸಿಯಾಗಿದೆ. ಆದರೆ ಕಸಬ್ ಎಂಬ ಭಯೋತ್ಪಾದಕನನ್ನೇ ಕುರಿತು ಹೇಳುವುದಾದರೆ: ಈತ ಮುಂಬೈ ದಾಳಿಯಲ್ಲಿ ಭಾಗವಹಿಸಲು ಬಂದಾಗಲೇ ಪ್ರಾಣದ ಹಂಗನ್ನು ತೊರೆದುಬಂದಿದ್ದ. ಅಷ್ಟೇ ಅಲ್ಲ ಮುಂದೆಯೂ ಇವನಂಥವರು ಜೀವ ಉಳಿಸಿಕೊಳ್ಳುವ ಯಾವ ಚಿಂತೆಯೂ ಇರದೆ ಬರುತ್ತಾರೆ. ಅಂಥವರನ್ನು ಗಲ್ಲಿಗೇರಿಸುತ್ತೇವೆ ಎಂದು ಬೆದರಿಸಿದರೆ ಅದಕ್ಕೆ ಅವರು ಹೆದರುತ್ತಾರೆಯೇ? ಆ ಮೂಲಕ ಭಯೋತ್ಪಾದನೆಯನ್ನು ನಿಗ್ರಹಿಸಲಾಗುತ್ತದೆಯೇ?

ಇಂತಹ ಪ್ರಶ್ನೆಗಳನ್ನು ನಾವು ಮಾತ್ರ ಎತ್ತುತ್ತಿಲ್ಲ. ಪ್ರತಿಷ್ಠಿತ ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಒಂದಾದ 'ದಿ ಹಿಂದೂ' ಕೂಡ ನಮ್ಮ ತರಹದ ನಿಲುವನ್ನೇ ಹೊಂದಿದೆ. ಕಸಬ್‌ನನ್ನು ಕುರಿತು 'ದಿ ಹಿಂದೂ' ಪತ್ರಿಕೆಯ ಸಂಪಾದಕೀಯವನ್ನು ಇದೇ ಪುಟದಲ್ಲಿ ಪ್ರಕಟಿಸಿದ್ದೇವೆ. ಇಂಗ್ಲಿಷ್ ಪತ್ರಿಕೆಯನ್ನು ಓದದವರು ಇದರಲ್ಲಿ ಎತ್ತಲಾಗಿರುವ ಪ್ರಶ್ನೆಗಳ ಬಗ್ಗೆ ಯೋಚಿಸಬೇಕಿದೆ.

ಇನ್ನು ಕಸಬ್‌ನನ್ನು ಗಲ್ಲಿಗೇರಿಸಿದ್ದರ ಹಿಂದೆ ನಮ್ಮ ರಾಜಕೀಯ ಪಕ್ಷಗಳ ಚುನಾವಣಾ ತಂತ್ರ ಅಡಗಿರುವುದಂತೂ ವಿಷಾದನೀಯ. ಈಗ ನಮ್ಮ ಹಲವಾರು ಜೈಲುಗಳಲ್ಲಿ ಮರಣದಂಡನೆಗೆ ಗುರಿಯಾಗಿರುವವರು ಬಹಳಷ್ಟು ಮಂದಿ ಇದ್ದಾರೆ. ಅವರ್‍ಯಾರನ್ನೂ ಗಲ್ಲಿಗೇರಿಸದ ಸರ್ಕಾರ ಕಸಬ್‌ನನ್ನು ಗುಟ್ಟಾಗಿ, ತರಾತುರಿಯಲ್ಲಿ ಗಲ್ಲಿಗೇರಿಸಿದ್ದು ಯಾತಕ್ಕೆ? ಯಾಕೆಂದರೆ ಇವತ್ತು - ಗುರುವಾರ - ಸಂಸತ್ತಿನ ಅಧಿವೇಶನ ಪ್ರಾರಂಭವಾಗಿದೆ. ಈಗಾಗಲೇ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಹಲವಾರು ಹಗರಣಗಳಲ್ಲಿ ಮುಳುಗಿದೆಯಲ್ಲದೆ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಹೂಡಿಕೆ ಕುರಿತಂತೆ ಅಪಾರ ವಿರೋಧವನ್ನು ಎದುರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕಸಬ್‌ನನ್ನು ಗಲ್ಲಿಗೇರಿಸುವ ಮೂಲಕ ತಾನು ಅದ್ಭುತ ಸಾಧನೆಯನ್ನು ಮಾಡಿದ್ದೇನೆ ಎಂದು ತೋರಿಸಲೆಂದೇ ಕೇಂದ್ರ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿರುವುದರಲ್ಲಿ ಅನುಮಾನವೇ ಇಲ್ಲ.

ಇದರೊಂದಿಗೆ ಇನ್ನೊಂದು ಮುಖ್ಯ ಕಾರಣವೂ ಇದೆ. ಸದ್ಯದಲ್ಲೇ ಗುಜರಾತಿನಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಆ ರಾಜ್ಯವನ್ನು ಕಳೆದ ಹತ್ತು ವರ್ಷಗಳ ಕಾಲ ಸರ್ವಾಧಿಕಾರಿಯಂತೆ ಆಳಿರುವ ನರಹಂತಕ ನರೇಂದ್ರ ಮೋದಿಯನ್ನು ಅಧಿಕಾರದಿಂದ ಉರುಳಿಸಲು ಕಾಂಗ್ರೆಸ್ ಹತ್ತಿರ ಯಾವ ಅಸ್ತ್ರವೂ ಇಲ್ಲ. ಆದ್ದರಿಂದ ಕಸಬ್‌ನನ್ನು ಗಲ್ಲಿಗೇರಿಸುವ ಮೂಲಕ ಕಾಂಗ್ರೆಸ್ ಪಕ್ಷ ಭಯೋತ್ಪಾದಕರ ವಿರುದ್ಧ ಕಠಿಣಕ್ರಮ ತೆಗೆದುಕೊಳ್ಳುವಷ್ಟು ದಿಟ್ಟತನ ಹೊಂದಿಗೆ ಎಂದು ತೋರಿಸುವ ಸಂಚೂ ಇದರ ಹಿಂದಿದೆ ಮತ್ತು ಕಸಬ್‌ನನ್ನು ಗಲ್ಲಿಗೇರಿಸುವುದೇ ದೇಶದ ಮುಂದಿರುವ ದೊಡ್ಡ ಕರ್ತವ್ಯ ಎಂಬಂತೆ ಕೂಗಾಡುತ್ತಿದ್ದ ಬಿಜೆಪಿಯ ಬಾಯಿ ಮುಚ್ಚಿಸಿದಂತೆಯೂ ಆಗಿದೆ.

ಕಸಬ್ ಮತ್ತು ಆತನ ದುಷ್ಟ ಸಂಗಡಿಗರು ಮುಂಬೈ ಮೇಲೆ ದಾಳಿ ಮಾಡಿದ್ದು ನಾಲ್ಕು ವರ್ಷಗಳ ಹಿಂದೆ. ಆದರೆ ರಾಜೀವ್ ಗಾಂಧಿಯನ್ನು 21 ವರ್ಷಗಳ ಹಿಂದೆ ಕೊಂದಿದ್ದವರು ಇನ್ನೂ ಜೈಲಿನಲ್ಲಿ ಜೀವಂತವಾಗಿದ್ದಾರೆ. ಹಾಗೆಯೇ ಪಂಜಾಬ್‌ನ ಮುಖ್ಯಮಂತ್ರಿ ಆಗಿದ್ದ ಬಿಯಾಂತ್ ಸಿಂಗ್ ಅವರನ್ನು 17 ವರ್ಷಗಳ ಹಿಂದೆ ಕೊಲೆ ಮಾಡಿದ್ದ ಬಲ್ವಂತ್ ಸಿಂಗ್ ರಾಜೋಣಾ ಕೂಡ ಮರಣದಂಡನೆಗೆ ಗುರಿಯಾಗಿ ಜೈಲಿನಲ್ಲೇ ಇದ್ದಾನೆ. ಆದರೆ ಇವರ್‍ಯಾರನ್ನೂ ಗಲ್ಲಿಗೇರಿಸಬೇಕು ಎಂದು ಯಾವ ರಾಜಕೀಯ ಪಕ್ಷಗಳೂ ಒತ್ತಾಯ ಮಾಡುತ್ತಿಲ್ಲ, ಅದಕ್ಕಿಂತ ಮುಖ್ಯವಾಗಿ ರಾಜೀವ್ ಗಾಂಧಿ ಹಂತಕರಿಗೆ ಕ್ಷಮಾದಾನ ಕೊಡಬೇಕೆಂದು ತಮಿಳುನಾಡಿದ ವಿಧಾನಸಭೆ ನಿರ್ಣಯವನ್ನು ತೆಗೆದುಕೊಂಡಿತ್ತು, ಹಾಗೆಯೇ ರಾಜೋಣಾ ಅವರನ್ನು ಗಲ್ಲಿಗೇರಿಸಕೂಡದೆಂದು ಸಿಖ್ಖರ ಧಾರ್ಮಿಕ ಸಂಸ್ಥೆಯಾದ ಶಿರೋಮಣಿ ಗುರುದ್ವಾರ ಪ್ರಬಂಧಕ್ ಸಮಿತಿಯು ಮನವಿ ಸಲ್ಲಿಸಿತ್ತು, ಅಷ್ಟೇ ಅಲ್ಲ ಬಿಜೆಪಿಯು ಭಾಗವಾಗಿರುವ ಪಂಜಾಬ್ ಸರ್ಕಾರ ಕೂಡ ಆತನನ್ನು ಗಲ್ಲಿಗೇರಿಸಬಾರದೆಂದು ಒತ್ತಡ ಹೇರಿತ್ತು. ಇದೆಲ್ಲದರ ಅರ್ಥ ಏನು? ತಮಿಳರನ್ನು



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್

ಸಂತೈಸಲು ರಾಜೀವ್ ಗಾಂಧಿ ಹಂತಕರಿಗೆ ಕಾಲಾವಕಾಶ. ಪಂಜಾಬಿನ ಜನರನ್ನು ಸಂತುಷ್ಟಗೊಳಿಸಲು ಬಿಯಾಂತ್ ಸಿಂಗ್‌ರ ಕೊಲೆಗಡುಕನಿಕೆ ಪ್ರಾಣ ದೀಕ್ಷೆ. ಆದರೆ ಪಾಕಿಸ್ತಾನದವನಾಗಿದ್ದ, ಇಲ್ಲಿ ಕ್ಯಾರೆ ಎನ್ನುವವರೇ ಇಲ್ಲದಿದ್ದ ಕಸಬ್‌ಗೆ ಮಾತ್ರ ಮರಣದಂಡನೆ.

ಈಗ ಕಸಬ್‌ನನ್ನು ಗಲ್ಲಿಗೇರಿಸಿ ಆಗಿದೆ. ಆದರೆ ಕಸಬ್‌ನಂತೆ ಪಾಕಿಸ್ತಾನದಲ್ಲಿ ಭಯೋತ್ಪಾದಕ ಕೃತ್ಯದಲ್ಲಿ ಭಾಗಿ ಆಗಿದ್ದಕ್ಕೆ ಆ ದೇಶದ ನ್ಯಾಯಾಲಯ ಕೊಟ್ಟಿರುವ ಮರಣದಂಡನೆಗೆ ಗುರಿಯಾಗಿ ಈಗ ಸರ್ಬಜಿತ್ ಸಿಂಗ್ ಎಂಬ ಭಾರತೀಯ ಪಾಕಿಸ್ತಾನದ ಜೈಲಿನಲ್ಲಿದ್ದಾನಲ್ಲವೇ? ಆತನನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದು ಭಾರತ ಸರ್ಕಾರ ಆಗ್ರಹಿಸುತ್ತಲೇ ಬಂದಿದೆಯಲ್ಲವೇ? ಈಗ ಕಸಬ್‌ನನ್ನು ಗಲ್ಲಿಗೇರಿಸಿದ್ದಕ್ಕೆ ಪ್ರಕ್ರಿಯೆಯಾಗಿ ಪಾಕಿಸ್ತಾನ ಕೂಡ ಸರ್ಬಜಿತ್ ಸಿಂಗ್‌ನನ್ನು ಗಲ್ಲಿಗೇರಿಸಿದರೆ ನಮ್ಮ ರಾಜಕೀಯ ಪಕ್ಷಗಳು ಹೇಗೆ ಪ್ರತಿಕ್ರಿಯಿಸುತ್ತವೆ? ಕಸಬ್‌ನನ್ನು ಗಲ್ಲಿಗೇರಿಸಿದ್ದನ್ನು ಸಂಭ್ರಮಿಸಿದ, ಸ್ವಾಗತಿಸಿದ ಜನ ಆಗಲೂ ಪಾಪಿಗೆ ತಕ್ಕ ಶಿಕ್ಷೆ ಆಯಿತೆಂದು ಬೀಗುತ್ತಾರೆಯೇ? ಪಟಾಕಿ ಹೊಡೆದು ಮಜ ಮಾಡುತ್ತಾರೆಯೇ?

ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರು **"An eye for an eye will make the whole world blind"** ಎಂದಿದ್ದು ಯಾಕೆ ಎಂದು ಎಲ್ಲರೂ ಮೆಲುಕುಹಾಕಬೇಕಿದೆ. ●

ವಧಕಾರನ ನ್ಯಾಯ

ಕಳೆದ ಹಲವಾರು ವರ್ಷಗಳಿಂದ 'ದಿ ಹಿಂದೂ' ಪತ್ರಿಕೆ ಮರಣದಂಡನೆಯನ್ನು - ಜನರಿಂದ ತೀವ್ರತರವಾದ ವಿರೋಧ ವ್ಯಕ್ತವಾದರೂ - ವಿರೋಧಿಸುತ್ತಲೇ ಬಂದಿದೆ. ನಾವು ಸಾಮಾನ್ಯ ಕೊಲೆಗಾರರು ಮತ್ತು ಸಾಮೂಹಿಕ ಕೊಲೆಗಾರರು, ಕೋಮುದಳ್ಳುರಿ ನಡೆಸುವವರು ಹಾಗೂ ಮೊಹಮ್ಮದ್ ಅಜ್ಮಲ್ ಅಮೀರ್ ಕಸಬ್‌ನಂತಹ ಭಯೋತ್ಪಾದಕರಿಗೂ ಮರಣದಂಡನೆ ವಿಧಿಸುವುದನ್ನು ವಿರೋಧಿಸಿದ್ದೇವೆ. ನಾವು ಯಾವುದನ್ನು ಈಗ ಸಂಕ್ಷಿಪ್ತವಾಗಿ 26/11 ಎಂದು ಕರೆಯುತ್ತೇವೋ ಆ ವಿಘಾತಕಾರಿ ರಾತ್ರಿಯ ಕರಾಳಮುಖವಾಗಿದ್ದ ಕಸಬ್ ಲಕ್ಷಾಂತರ ಭಾರತೀಯರ ಕಣ್ಣಲ್ಲಿ, ಆತ ಭಾರತ ದೇಶದ ವಿರುದ್ಧ ಮತ್ತು ಮುಂಬೈ ನಗರದ ಜನರ ವಿರುದ್ಧ ನಡೆದ ಒಂದು ಘೋರವಾದ ಸಂಚಿನಲ್ಲಿ ಭಾಗಿಯಾಗಿದ್ದ, ಸ್ವಚ್ಛಂದವಾಗಿ ನೂರಾರು ಅಮಾಯಕರನ್ನು ಕೊಂದು ಹಾಕಿದ್ದ ಮತ್ತು ತನ್ನ ಕೃತ್ಯದ ಬಗ್ಗೆ ಎಂದೂ ಪಶ್ಚಾತ್ತಾಪವನ್ನು ವ್ಯಕ್ತಪಡಿಸಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಬುಧವಾರ ಬೆಳಗ್ಗೆ ಆತನನ್ನು ಗಲ್ಲಿಗೇರಿಸಿದ ಸುದ್ದಿಯನ್ನು ದೇಶದಾದ್ಯಂತ ಜನರು ಅನುಮೋದಿಸಿದ್ದು ಅಚ್ಚರಿ ಅಲ್ಲ. ಆದರೆ ಮನುಷ್ಯ ಜೀವವೊಂದು - ಆತ ಎಷ್ಟೇ ಕ್ರೂರಿಯಾದರೂ - ಹೋದದ್ದನ್ನು ಸಂಭ್ರಮಿಸಲಾಗದು. ಬದಲಾಗಿ, ಈ ಸಂದರ್ಭದಲ್ಲಿ ಈ ದೇಶದ ಎಲ್ಲರೂ ಮೂರು ವಿಷಯಗಳನ್ನು ಕುರಿತು ಧ್ಯಾನಿಸಬೇಕಿದೆ. ಅಪರಾಧ, ಶಿಕ್ಷೆ ಮತ್ತು ನಮ್ಮ ಗಣರಾಜ್ಯದ ಆಶಯದ ನ್ಯಾಯವ್ಯವಸ್ಥೆಯ ಬಗ್ಗೆ ಚಿಂತಿಸಬೇಕಿದೆ. ಹಲವಾರು ರೀತಿಯಲ್ಲಿ ಕಸಬ್‌ನನ್ನು ಗಲ್ಲಿಗೇರಿಸಿದ್ದು ದ್ವೇಷ ಸಾಧಿಸಿದಂತಾಗಿದೆ. ಕಸಬ್ 26/11ರ ದುರ್ಘಟನೆಯ ಶಿಲ್ಪಿಯೂ ಅಲ್ಲ, ಆತ ಅದರ ಮಾಸ್ಟರ್‌ಮೈಂಡ್ ಕೂಡ ಆಗಿರಲಿಲ್ಲ, ಆತನಲ್ಲಿ ದ್ವೇಷದ ಅಮಲನ್ನು ತುಂಬಿಸಿದ ಮತ್ತು ದೂರದಿಂದಲೇ ಆತನನ್ನು ನಿಯಂತ್ರಿಸಿದ್ದ ಜನ ಇವತ್ತಿಗೂ ಪಾಕಿಸ್ತಾನದಲ್ಲಿ ಸುರಕ್ಷಿತವಾಗಿದ್ದಾರೆ. ಅಷ್ಟೇ



ಅಲ್ಲ, ಅವರು ಗಲ್ಲಿಗೇರುವುದಿರಲಿ ಪ್ರಾಯಶಃ ಅವರ್‍ಯಾರೂ ನ್ಯಾಯಾಲಯದ ಕೊಠಡಿಯನ್ನೂ ಎಂದೂ ಪ್ರವೇಶಿಸುವುದಿಲ್ಲ.

ಕಸಬ್‌ನನ್ನು ತರಾತುರಿಯಲ್ಲಿ ಗಲ್ಲಿಗೇರಿಸಿದ ರೀತಿಯೂ ವಿಚಿತ್ರವಾಗಿದೆ. ಯಾಕೆಂದರೆ ಆತನಂತೆಯೇ ಘೋರಕೃತ್ಯಗಳಲ್ಲಿ ಭಾಗವಹಿಸಿ ಗಲ್ಲುಶಿಕ್ಷೆಗೆ ಗುರಿಯಾಗಿರುವ ಬಹಳಷ್ಟು ಮಂದಿಗೆ ರಾಜಕೀಯ ಬೆಂಬಲವಿರುವ ಕಾರಣ ಅವರೆಲ್ಲರ ವಿರುದ್ಧದ ತೀರ್ಪು ಜಾರಿಗೊಳ್ಳದೆ ಕಾಲಾವಕಾಶವನ್ನು ಪಡೆದಿದ್ದಾರೆ. ಅಂಥವರಲ್ಲಿ ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿಯವರ ಮತ್ತು ಪಂಜಾಬ್‌ನ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರ ಹಂತಕರು ಪ್ರಮುಖರು.

ಅದಕ್ಕಿಂತ ಮುಖ್ಯವಾಗಿ ಕಸಬ್ ಬಲಿ ತೆಗೆದುಕೊಂಡ ಜೀವಗಳ ಸಂಖ್ಯೆಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರನ್ನು ಕೊಲೆ ಮಾಡಿದ ಅಪರಾಧಿಗಳು-ಮುಖ್ಯವಾಗಿ ಲೆಕ್ಕವಿಲ್ಲದಷ್ಟು ಕೋಮುಗಲಭೆಗಳಿಗೆ ಕಾರಣರಾದ ದುಷ್ಕರ್ಮಿಗಳು-ಇವತ್ತಿಗೂ ಯಾವುದೇ ತರಹದ ಶಿಕ್ಷೆಗೆ ಗುರಿಯಾಗದೆ ನಿರರ್ಗಳರಾಗಿರುವುದು ದುಃಖಕರವಾದ ನಿಜಾಂಶ. ಇದ್ಯಾವುದೂ ಕಸಬ್ ಎಸಗಿದ ಅಪರಾಧವನ್ನು ತಗ್ಗಿಸುವುದಿಲ್ಲ. ಆದರೂ ಗಲ್ಲಿಗೇರಿಸುವುದೇ ನ್ಯಾಯ ಎಂಬ ನಮ್ಮ ಕಲ್ಪನೆ ಸರಿಯೇ ಎಂಬ ಪ್ರಶ್ನೆಯನ್ನು ನಾನು ಅನಿವಾರ್ಯವಾಗಿ ಕೇಳಿಕೊಳ್ಳಬೇಕಿದೆ.

ಮರಣದಂಡನೆ ವಿರುದ್ಧದ ವಾದಗಳನ್ನು ಈಗ ಎಲ್ಲರಿಗೂ ಚಿರಪರಿಚಿತವಾಗಿವೆ. ಅವುಗಳಲ್ಲಿ ಲೌಕಿಕವಾದ ಕಾರಣ - ಕಸಬ್‌ನ ವಿಚಾರಕ್ಕೆ ಸಂಬಂಧಪಟ್ಟಂತೆ - ಮುಂದಿನ ದಿನಗಳಲ್ಲಿ 26/11 ದುರ್ಘಟನೆಯನ್ನು ಎಸಗಿದ ಸೂತ್ರದಾರರು ಅಥವಾ ಇತರರು ಸಿಕ್ಕಿಬಿದ್ದರೆ ಅವರ ವಿಚಾರಣೆಗೆ ಕಸಬ್‌ನಿಂದ ಬೆಲೆಬಾಳುವ ಮಾಹಿತಿಗಳನ್ನು ಪಡೆಯಬಹುದಿತ್ತು. ಈ ಕಾರಣದೊಂದಿಗೆ ನೈತಿಕ ಮತ್ತು ತಾಂತ್ರಿಕ ಕಾರಣಗಳೂ ಇವೆ. ಉತ್ತಮ ನ್ಯಾಯವ್ಯವಸ್ಥೆಯನ್ನು ಹೊಂದಿರುವ ಅಮೆರಿಕ ದೇಶದಲ್ಲೂ ಹೊಸ ತಂತ್ರಜ್ಞಾನದಿಂದಾಗಿ ಈ ಹಿಂದೆ ಡಜನ್‌ಗಟ್ಟಲೆ ಅಮಾಯಕರನ್ನು ವಿನಾಕಾರಣ ಗಲ್ಲಿಗೇರಿಸಿದ್ದು ಸಾಬೀತಾಗಿದೆ. ಆದರೆ ಕಸಬ್ ಅಮಾಯಕನಾಗಿರಲಿಲ್ಲ, ಕಿಂಚಿತ್ತೂ ಅನುಮಾನವಿಲ್ಲದಂತೆ ಆತನ ಅಪರಾಧ ಸಾಬೀತಾಗಿದೆ. ಆದರೂ ಇತ್ತೀಚೆಗೆ ನಮ್ಮ ಸುಪ್ರೀಂಕೋರ್ಟ್ ಸ್ವತಃ ಮರಣದಂಡನೆ ವಿಧಿಸುವುದರ ಹಿಂದೆ ಸರಿಯಾದ ಮಾನದಂಡಗಳಿಲ್ಲವೆಂದೂ, ಅದು ಆಯಾ ನ್ಯಾಯಾಧೀಶರ ಅಭಿಪ್ರಾಯಕ್ಕೆ ಸೀಮಿತವಾಗಿದೆ ಎಂದೂ ಹೇಳಿದೆ. ಮರಣದಂಡನೆ ಎಂಬುದು, ಅನೇಕ ಶತಮಾನಗಳ ಹಿಂದೆ ಮಧ್ಯಕಾಲೀನ ತತ್ವಜ್ಞಾನಿ ಮೈಮೊನಿಡಸ್ ಎಂಬಾತ ಎಚ್ಚರಿಸಿದ್ದಂತೆ 'ತೀರ್ಪುಗಾರರ ಮರ್ಜಿ'ಯಾಗಿ ಮಾರ್ಪಟ್ಟಿದೆ.

ಭಯೋತ್ಪಾದನೆ ನಿಗ್ರಹಕ್ಕೆ ಮರಣದಂಡನೆಯೇ ಸೂಕ್ತ ಎಂಬುದೂ ನಿಜವಲ್ಲ. ಉದಾಹರಣೆಗೆ ಫ್ರಾನ್ಸ್ ಮತ್ತು ಬ್ರಿಟನ್ನಿನಲ್ಲಿ ಮರಣದಂಡನೆ ಇಲ್ಲದಿದ್ದರೂ ಭಯೋತ್ಪಾದನೆ ನಿಗ್ರಹದಲ್ಲಿ ಈ ಎರಡೂ ದೇಶಗಳು ಅಮೆರಿಕಕ್ಕಿಂತ ಹಿಂದೇನು ಬಿದ್ದಿಲ್ಲ.

26/11ರ ದುರ್ಘಟನೆಯ ದುಃಖವನ್ನು ಈ ಪತ್ರಿಕೆಯ ಸಿಬ್ಬಂದಿಯೂ ಅನುಭವಿಸಿವೆ. ಆದರೂ ಮರಣದಂಡನೆಯೇ ಸರಿಯಾದ ಶಿಕ್ಷೆಯೇ ಎಂಬ ಬಗ್ಗೆ ಚರ್ಚೆ ನಡೆಯಬೇಕಾದ ಅಗತ್ಯವಂತೂ ಇದ್ದೇ ಇದೆ.

ದಿ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ಸಂಪಾದಕೀಯ

ಬಿಜಾಪುರ: ಮಾಜಿ ಮಂತ್ರಿ ಉಸ್ತಾದ್ ಮಗನಿಗೆ ಪ್ರಾಣ ಬೆದರಿ


ಸಲೀಮ್ ಉಸ್ತಾದ್

ಚುನಾವಣೆ ಸಮೀಪಿಸುತ್ತಿದ್ದಂತೆ ಪಾರ್ಟಿ ಟಿಕೆಟ್ಟಿಗಾಗಿ, ಎಮ್ಮೆಲ್ಲೆಗಿರಿಗಾಗಿ, ಓಟಿನ ಬೇಟೆಗಾಗಿ ಏನೆಲ್ಲ ಅಸಹ್ಯಕ್ಕೆ ಪುಢಾರಿಗಳು ಕೈಹಾಕುತ್ತಾರೆಂಬುದಕ್ಕೆ ಇದೊಂದು ಸಣ್ಣ ನಿದರ್ಶನವಷ್ಟೇ-

ಬೆಂಗಳೂರಿನ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ವಿಲಕ್ಷಣ ದೂರೊಂದರ ಬಗ್ಗೆ ಪೊಲೀಸರಾಗಲಿ, ಪತ್ರಿಕೆಗಳಾಗಲಿ ತಲೆ ಕೆಡಿಸಿಕೊಂಡಂತಿಲ್ಲ, ದೂರಿನ ಸಾರಾಂಶವೆಂದರೆ-ಯಾರೋ ಅನಾಮಿಕನೊಬ್ಬ ತನಗೆ ಫೋನ್ ಮಾಡಿ 'ಬಿಜಾಪುರಕ್ಕೆ ನೀನೇನಾದರೂ ಕಾಲಿಟ್ಟೆಯೆಂದರೆ ನಿನ್ನನ್ನು ಮರ್ಡರ್ ಮಾಡ್ತೀನಿ, ಹೆಣ ಬೀಳಿಸ್ತೀನಿ.....!' ಎಂದೆಲ್ಲ ಧಮಕಿ ಹಾಕಿದ್ದಾರೆಂದು ಸಲೀಂ ಉಸ್ತಾದ್ ಎಂಬ ಯುವಕನೊಬ್ಬ ಇದೇ ನವೆಂಬರ್ 11 ರಂದು ಸಂಜಯ್‌ನಗರ ಪೊಲೀಸ್ ಠಾಣೆಗೆ ಬಂದು ದೂರು ಕೊಡುತ್ತಾನೆ.

ಈ ಹುಡುಗ ಬಿಜಾಪುರಕ್ಕೆ ಮಾತ್ರ ಏಕೆ ಹೋಗಕೂಡದು? ಬಿಜಾಪುರಕ್ಕೂ ಈತನಿಗೂ ಏನು ಸಂಬಂಧ? ಈತ ಬಿಜಾಪುರಕ್ಕೆ ಕಾಲಿಟ್ಟ ಮಾತ್ರಕ್ಕೆ ಯಾರಿಗೇನು ಕಷ್ಟ? ಇತ್ಯಾದಿ ತಲೆ ಕೆಡಿಸಿಕೊಂಡ ಸಂಜಯ್‌ನಗರ ಪೊಲೀಸರಿಗೆ ಗೊತ್ತಾಗಿದ್ದು ಮಾಜಿ ಮಂತ್ರಿ ದಿವಂಗತ ಎಂ.ಎಲ್. ಉಸ್ತಾದ್ ಮತ್ತು ಅವರ ಮಕ್ಕಳು, ತಮ್ಮಂದಿರ ಸುತ್ತ ಕಾಂಗ್ರೆಸ್ ಟಿಕೆಟ್ಟಿಗಾಗಿ ನಡೆಯುತ್ತಿರುವ ಹೊಲಸು ರಾಜಕೀಯ. ಬಂಗಾರಪ್ಪ ಸಂಪುಟದಲ್ಲಿ ಗಣಿ ಮಂತ್ರಿಯಾಗಿ, ಆನಂತರ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವರಾಗಿದ್ದ ಎಂ.ಎಲ್. ಉಸ್ತಾದ್ ನಿಧನರಾಗಿ ಐದು ವರ್ಷಗಳೇ ಕಳೆದವು. ಬಿಜಾಪುರದ ಮುಸ್ಲಿಮರ ಮಟ್ಟಿಗಷ್ಟೇ ಅಲ್ಲ, ಅಕ್ಕಪಕ್ಕದ ಗುಲಬರ್ಗಾ, ಬೀದರ್, ಬಾಗಲಕೋಟೆ ಸೇರಿದಂತೆ ಉತ್ತರ ಕರ್ನಾಟಕದ ಬಹುಪಾಲು ಮುಸ್ಲಿಮರ ಪಾಲಿಗೆ ಒಂದಾನೊಂದು ಕಾಲಕ್ಕೆ ಪ್ರಶ್ನಾತೀತ ನಾಯಕರಂತಿದ್ದ ಮಾಜಿ ಮಂತ್ರಿ ಎಂ.ಎಲ್. ಉಸ್ತಾದರ ಫೋಟೋ ಹಾಕಿಕೊಂಡು ಈ ಬಾರಿ ಯಾರೇ ಚುನಾವಣೆಗೆ ನಿಂತರೂ ಬಿಜಾಪುರದ ಮುಸ್ಲಿಮರ ಓಟುಗಳೆಲ್ಲ ಸಾರಾಸಗಟಾಗಿ ಬೀಳುವುದು ಗ್ಯಾರಂಟಿ.

ಇದನ್ನೆಲ್ಲ ಲೆಕ್ಕ ಹಾಕಿಯೇ ಉಸ್ತಾದರ ಖಾಸಾ ತಮ್ಮ ಮತ್ತು ಬಿಜಾಪುರದ ಕಾಂಗ್ರೆಸ್ ನಾಯಕ ಎಲ್.ಎಲ್. ಉಸ್ತಾದ್ ಈ ಬಾರಿ ಶತಗತಾಯ ಕಾಂಗ್ರೆಸ್ ಟಿಕೆಟ್ಟಿಗಾಗಿ ಸರ್ಕಸ್ ಆರಂಭಿಸಿದ್ದಾನೆ. ಉಸ್ತಾದ್ ಬದುಕಿದ್ದಷ್ಟೂ ಕಾಲ ಅಕ್ಷರಶಃ ಬಿಜಾಪುರದ ಡಾನ್‌ನಂತೆ ಮೆರೆದವನು ಎಲ್.ಎಲ್. ಉಸ್ತಾದ್. ಎಲ್.ಎಲ್. ಉಸ್ತಾದ್ ಅಲಿಯಾಸ್ ಲಾಲೂ ಉಸ್ತಾದ್ ಎಂಬ ಹೆಸರಿಗೆ ಬಿಜಾಪುರದ ಮುಸ್ಲಿಮ್‌ರಲ್ಲಷ್ಟೇ ಅಲ್ಲ ಪಕ್ಕದ ಮಹಾರಾಷ್ಟ್ರದ ಸೋಲಾಪುರದವರೆಗೂ ಭಯಾನಕ ಖ್ಯಾತಿಯಿದೆ. ಸದ್ದಿಲ್ಲದೆ ಲ್ಯಾಂಡ್ ಡೀಲು, ಜಬರ್‌ದಸ್ತ್ ಸೆಟಲ್‌ಮೆಂಟ್, ಭುಜಬಲದ ಪಂಚಾಯ್ತಿ, ಮಟಕಾ, ಗ್ಯಾಂಗ್‌ವಾರ್, ಪ್ರಚ್ಛನ್ನ ಗೂಂಡಾಗಿರಿ- ಹೀಗೆ ಸಕಲ ಪರಾಕ್ರಮಗಳನ್ನೆಲ್ಲ ಕರಗತ ಮಾಡಿಕೊಂಡೇ ಮಾಜಿ ಮಂತ್ರಿ ಉಸ್ತಾದ್ ಸೋಲಿಗೆ ಪರೋಕ್ಷವಾಗಿ ಕಾರಣಕರ್ತನಾದ ತಮ್ಮ ಉಸ್ತಾದ್‌ನ ಹಾವಳಿಗೆ ಸಿಲುಕಿಯೇ ಎಂ.ಎಲ್. ಉಸ್ತಾದ್ ಕೊರಕೊರಗಿ ಕೊನೆಯುಸಿರೆಳೆದರಂತೆ. ಹಾಗಂತ ಬಿಜಾಪುರದ ಮುಸ್ಲಿಮರೇ ಮರುಗುವುದುಂಟು.

ಅಣ್ಣ ಎಂ.ಎಲ್. ಉಸ್ತಾದರ ನಿಧನಾನಂತರ ಅಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲೇ ತಮ್ಮ ಉಸ್ತಾದ್‌ಗೆ ಕಾಂಗ್ರೆಸ್ ಟಿಕೆಟ್ ಸಿಗಬೇಕಿತ್ತು. ಆದರೆ ಲಾಲೂ ಉಸ್ತಾದ್‌ನ ನಟೋರಿಟಿ ಮತ್ತು ಹಿನ್ನೆಲೆಯನ್ನು ಗಂಭೀರವಾಗೇ ಲೆಕ್ಕ ಹಾಕಿದ ಕಾಂಗ್ರೆಸ್ ಹೈಕಮಾಂಡ್ ಇದ್ದುದರಲ್ಲಿ ಸಭ್ಯನಾದ ಅಬ್ದುಲ್ಲಾ ರೆಹಮಾನ್ ಹೊರ್ತಿಯವರಿಗೆ ಟಿಕೆಟ್ ನೀಡಿತು. ಗೆದ್ದದ್ದು ಬಿಜೆಪಿಯ ಅಪ್ಪು ಪಟ್ಟಣಶೆಟ್ಟಿ. ಕಾಂಗ್ರೆಸ್, ಜೆಡಿಎಸ್, ಬಹುಜನ ಸಮಾಜ ಪಕ್ಷ, ಅಹಿಂದ ಇತ್ಯಾದಿಗಳ ಮಧ್ಯೆ ಸೆಕ್ಯುಲರ್ ಓಟುಗಳೆಲ್ಲ ಹಂಚಿಕೆಯಾದ ಫಲವಾಗಿ ಬಿಜೆಪಿ ಧೂರ್ತ ಅಪ್ಪು-ಪಟ್ಟಣ ಶೆಟ್ಟಿ ಗೆದ್ದು ಬಿಟ್ಟ. ಅದೂ ಎಂಥಾ ಅಂತರವೆಂದರೆ ಕಾಂಗ್ರೆಸ್ ಅಭ್ಯರ್ಥಿ ಹೊರ್ತಿಗೆ 16 ಸಾವಿರದಷ್ಟು ಓಟುಬಿದ್ದು, ಜೆಡಿಎಸ್‌ನ ಬಂದೇನವಾಜ್ ಮಾಹಬರಿಗೆ 15 ಸಾವಿರ ಚಿಲ್ರೆ ಮತಗಳು ದಕ್ಕಿ, ಪಂಚಮಸಾಲಿಗಳ ನಾಯಕ ಮತ್ತು ಮಾಜಿ ಕೇಂದ್ರ ಮಂತ್ರಿ ಯತ್ನಾಳರ ತಮ್ಮ ಈಶ್ವರ ಗೌಡ ರಾಮನಗೌಡ ಪಾಟೀಲ್ ಯತ್ನಾಳ್‌ರು ಪಕ್ಷೇತರನಾಗೇ 6873 ಮತಗಳನ್ನು ಪಡದಿದ್ದರೆ; ಬಿಜೆಪಿಯ ಅಪ್ಪು ಪಟ್ಟಣ ಶೆಟ್ಟಿಯೊಬ್ಬನೇ 34217 ಮತಗಳನ್ನು ಕಲೆಹಾಕಿದ್ದ!


ಇದರರ್ಥ ಕಾಂಗ್ರೆಸ್, ಜೆಡಿಎಸ್, ಬಿಎಸ್‌ಪಿ ಮತ್ತು ಪಕ್ಷೇತರರೆಲ್ಲ ಸೇರಿ ಪಡೆದ ಮತಗಳಷ್ಟೇ ಮೊತ್ತ ಬಿಜೆಪಿಯ ಅಪ್ಪು ಪಟ್ಟಣಶೆಟ್ಟಿಗೂ ಲಭಿಸಿತ್ತು. ಅಂದರೆ ನಿಸ್ಸಂಶಯವಾಗಿ ಬಿಜಾಪುರ ಲಿಂಗಾಯತರೆಲ್ಲ ಬಿಜೆಪಿಗೆ ಓಟುಕೊಟ್ಟಿದ್ದರೆ ಮುಸ್ಲಿಮ್ ಮತಗಳೆಲ್ಲ ಛಿದ್ರಗೊಂಡು ಹಂಚಿಹೋಗಿದ್ದವು. ಸಣ್ಣಪುಟ್ಟ ಜಾತಿಗಳ ಮತಗಳೂ ಬೇಕಾಬಿಟ್ಟಿ ವಿಂಗಡಣೆಗೊಂಡಿದ್ದರಿಂದ, ಬಿಜೆಪಿಯ ಮಟ್ಟಿಗೆ ಬಿಜಾಪುರವೆಂಬುದು ಭದ್ರಕೋಟೆಯಂತಿತ್ತು, ಮುಸ್ಲಿಮ್ ಮತಗಳನ್ನು ಒಡೆಯುವಲ್ಲಿ ಮತ್ತು ಬಿಜೆಪಿ ಗೆಲ್ಲುವಲ್ಲಿ ಉಸ್ತಾದ್ ತಮ್ಮ ಎಲ್.ಎಲ್. ಉಸ್ತಾದ್‌ನ ಕೈವಾಡವಿತ್ತೋ ಇಲ್ಲವೋ ಗೊತ್ತಿಲ್ಲ, ಆದರೆ ಬಿಜಾಪುರದ ಕೆಲ ಮುಸ್ಲಿಂ ನಾಯಕರು ಮಾತ್ರ ಇಷ್ಟೆಲ್ಲಕ್ಕೆ ಲಾಲೂ ಉಸ್ತಾದನೇ ಕಾರಣ, ತನಗೆ ಟಿಕೆಟ್ ನಿರಾಕರಿಸಿದ್ದಕ್ಕೆ ಜಿದ್ದಿಗೆ ಬಿದ್ದು ಆತ ಪರೋಕ್ಷವಾಗಿ ಬಿಜೆಪಿ ಜೊತೆ ಕೈಜೋಡಿಸಿದ್ದಾನೆ ಎಂದೇ ಮಾತಾಡಿಕೊಂಡರು.


ಇನ್ನಾರೋ ಮುಸ್ಲಿಂ ಅಭ್ಯರ್ಥಿ ಒಮ್ಮೆ ಕಾಂಗ್ರೆಸ್ಸಿನಿಂದ ಗೆದ್ದನೆಂದರೆ ಶಾಶ್ವತವಾಗಿ ಬಿಜಾಪುರ ತನ್ನ ಕೈತಪ್ಪಿದಂತೆಯೇ ಎಂದು ಎಲ್.ಎಲ್. ಉಸ್ತಾದ್ ಲೆಕ್ಕ ಹಾಕಿದ್ದನಂತೆ. ಕನಿಷ್ಠ ಮುಂದಿನ ಸಾರಿಯಾದರೂ ತನಗೇ ಕಾಂಗ್ರೆಸ್ ಟಿಕೆಟ್ ಸಿಗಬಹುದೆಂಬ ಲೆಕ್ಕ ಹಾಕಿಯೇ ಉಸ್ತಾದ್ ಪರೋಕ್ಷವಾಗಿ ಬಿಜೆಪಿಗೆ ನೆರವಾಗಿರಬಹುದು. ಯಾವತ್ತು ಉಸ್ತಾದ್‌ನ ಮುಸ್ಲಿಂ ದ್ರೋಹ ಅಲ್ಲಿನ ಮುಸ್ಲಿಮರಿಗೆ ಗೊತ್ತಾಯಿತೋ ಕೆಲ ಜಮಾತ್ ನಾಯಕರು, ಮಸೀದಿಗಳ ಅಧ್ಯಕ್ಷರೇ ಒಳಗೊಳಗೇ ಹಲ್ಲು ಕಡಿಯತೊಡಗಿದರು.

ಸರಿಸುಮಾರು ಒಂದೂ ಮುಕ್ಕಾಲು ಲಕ್ಷದಷ್ಟು ಮತದಾರರಿರುವ ಬಿಜಾಪುರದಲ್ಲಿ ಶೇ. 40 ಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಮುಸ್ಲಿಂ ಮತದಾರರಿದ್ದಾರೆ. ಸರಿಸುಮಾರು 75 ಸಾವಿರದಷ್ಟು ಲಿಂಗಾಯತ ಮತಗಳನ್ನು ಬಿಟ್ಟರೆ 60 ಸಾವಿರಕ್ಕೂ ಅಧಿಕ ಮುಸ್ಲಿಂ ಮತಗಳೇ ಬಿಜಾಪುರದ ರಾಜಕೀಯವನ್ನು ನಿರ್ಧರಿಸುತ್ತವೆ. ಈ ಬಾರಿಯಂತೂ ಅದು ಅಕ್ಷರಶಃ ಸಾಬೀತಾಗಲಿದೆ. ಏಕೆಂದರೆ ಈ ಬಾರಿ ಅಪ್ಪುಪಟ್ಟಣಶೆಟ್ಟಿಗೆ ಪಾಠ ಕಲಿಸಲು ಬಿಜಾಪುರಕ್ಕೆ ಬಿಜಾಪುರವೇ ಕಾದು ಕೂತಿದೆ. ಹೇಗಿದ್ದರೂ ಬಸನಗೌಡ ಯತ್ನಾಳರು ಜೆಡಿಎಸ್ ಅಭ್ಯರ್ಥಿಯಾಗಿ ನಿಲ್ಲುವುದು ಶತಸ್ಸಿದ್ಧ ಹಾಗಾಯಿತೆಂದರೆ ಬಿಜಾಪುರದ ಲಿಂಗಾಯತರ ಪೈಕಿ ಅರ್ಧಕ್ಕರ್ಧದಷ್ಟಿರುವ ಪಂಚಮಸಾಲಿಗಳೆಲ್ಲ ಯತ್ನಾಳರ ಬೆನ್ನಿಗೆ ನಿಲ್ಲುತ್ತಾರೆ. ಮಿಕ್ಕಂತೆ ಅಲ್ಪಸಂಖ್ಯಾತ ಬಣಜಿಗ ಲಿಂಗಾಯತರಿಗೆ ಅಪ್ಪು ಪಟ್ಟಣಶೆಟ್ಟಿ ಬಿಟ್ಟರೆ ಬೇರೆ ದಾರಿಯಿಲ್ಲ, ಜೊತೆಗೆ ಯಡ್ಡಿಯ ಕೆಜೆಪಿಯ ಅಭ್ಯರ್ಥಿಯೂ ಲಿಂಗಾಯತರ ಮತಬುಟ್ಟಿಗೇ ಕೈಹಾಕುವುದರಿಂದ ಬಿಜೆಪಿ, ಕೆಜೆಪಿ, ಜೆಡಿಎಸ್‌ಗಳೆಲ್ಲ ಲಿಂಗಾಯತರ ಮತ ಹಂಚಿಕೊಂಡು, ಪಾರಂಪರಿಕ ವೀರಶೈವ ಓಟ್‌ಬ್ಯಾಂಕ್ ಪಾಲಿಟಿಕ್ಸ್ ನೆಲಕಚ್ಚುತ್ತದೆ.

ಇದರ ಲಾಭ ಏನಿದ್ದರೂ ಕಾಂಗ್ರೆಸ್ಸಿಗೇ. ಈ ಬಾರಿ ಬಿಜಾಪುರದ ಸಮಸ್ತ ಮುಸ್ಲಿಮರೆಲ್ಲ ಒಗ್ಗಟ್ಟಾಗಿ ಏಕ ಅಭ್ಯರ್ಥಿಯನ್ನು ಬೆಂಬಲಿಸುವುದು ನಿಶ್ಚಿತ. ಅದೂ ಮುಸ್ಲಿಂ ಅಭ್ಯರ್ಥಿಯನ್ನೇ ಬೆಂಬಲಿಸಲಿದ್ದಾರೆ. ಈ ನಿಟ್ಟಿನಲ್ಲಿ ಕಾಂಗ್ರೆಸ್ ಏನಾದರೂ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ಕೊಟ್ಟರೆ ಅಷ್ಟಿಷ್ಟು ದಲಿತರು, ಕೆಳಜಾತಿಗಳು ಮತ್ತು ಸಾರಾಸಗಟು ಮುಸ್ಲಿಮರೆಲ್ಲ ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸುವ ಮೂಲಕ ಬಿಜೆಪಿ, ಜೆಡಿಎಸ್, ಕೆಜೆಪಿಗಳೆಲ್ಲವನ್ನೂ ಮಣ್ಣುಮುಕ್ಕಿಸುವುದು ನಿಶ್ಚಿತ.

ಇಂಥದೊಂದು ಸನ್ನಿವೇಶವನ್ನು ತನ್ನ ಲಾಭಕ್ಕೆ ಬಳಸಿಕೊಂಡು ತಾನೇ ಬಿಜಾಪುರದ ಶಾಸಕನಾಗಿ ಹಾಗೊಮ್ಮೆ ಕಾಂಗ್ರೆಸ್ಸೇನಾದರೂ ಅಧಿಕಾರಕ್ಕೆ ಬಂತೆಂದರೆ ಅಣ್ಣನಂತೆ ತಾನೂ ಮಂತ್ರಿಯಾಗುವುದು ತಮ್ಮ ಉಸ್ತಾದನ ದೂರಾಲೋಚನೆ. ಈ ಕಾರಣಕ್ಕೆ ಕಾಂಗ್ರೆಸ್ ನಾಯಕ ಆರ್.ವಿ. ದೇಶಪಾಂಡೆ, ಕಾಂಗ್ರೆಸ್‌ನ ದೆಹಲಿ ವರಿಷ್ಠ ಠಾಕೂರ್ ಸಿಂಗ್ ಮುಂತಾದವರಿಗೆ ಮಸ್ಕಾ ಹೊಡಕೊಂಡೇ ಬಂದ ಎಲ್.ಎಲ್. ಉಸ್ತಾದ್‌ಗೆ ಈಗ ತಾನು ಎಮ್ಮೆಲ್ಲೆಯಾದಂತೆ ಭ್ರಮೆ ಶುರುವಾಗಿದೆ. ಆದರೆ ಸಮಸ್ಯೆ ಶುರುವಾಗಿದ್ದು ಇಲ್ಲಿಗೆ ವರ್ಷದ ಹಿಂದೆ ಸಲೀಮ್ ಉಸ್ತಾದ್ ಎಂಬ ಬಿಸಿರಕ್ತದ ಯುವಕನೋರ್ವ ಇದ್ದಕ್ಕಿದ್ದಂತೆ ಬಿಜಾಪುರದ ಕಾಂಗ್ರೆಸ್ ಪಡಸಾಲೆಯಲ್ಲಿ ಪ್ರತ್ಯಕ್ಷನಾದ ಮೇಲೆ.


ಬಸನಗೌಡ ಯತ್ನಾಳ್


ಮಾಜಿ ಮಂತ್ರಿ ಎಂ.ಎಲ್. ಉಸ್ತಾದ್


ರುಕ್ಸಾನಾ ಉಸ್ತಾದ್

ಇನ್ನೂ 25 ರ ಹರೆಯದ, ಎಂಬಿಎ ಪದವೀಧರ ಸಲೀಮ್ ಉಸ್ತಾದ್ ಬೇರೆ ಯಾರೂ ಅಲ್ಲ-ಮಾಜಿ ಮಂತ್ರಿ ಎಂ.ಎಲ್. ಉಸ್ತಾದರ ಕಿರಿಯ ಪುತ್ರ ಅದರರ್ಥ ತಮ್ಮ ಉಸ್ತಾದ್ ಸಲೀಮ್ ಪಾಲಿಗೆ ಖಾಸಾ ಚಿಕ್ಕಪ್ಪ!

ಮಾಜಿ ಮಂತ್ರಿ ಎಂ.ಎಲ್. ಉಸ್ತಾದ್‌ರ ನಾಲ್ವರು ಮಕ್ಕಳ ಪೈಕಿ ಹಿರಿಯ ಅಣ್ಣನೋರ್ವ ತಂದೆಯ ಅಕಾಲ ಮರಣದ ಆಘಾತಕ್ಕೆ ಸಿಲುಕಿ ಮನೋರೋಗಿಯಾದ. ಮತ್ತೊಬ್ಬ ಮಗಳು ರಿಜ್ವಾನಾ ಬೇಗಮ್ ಕೂಡ ಕೊರಕೊರಗಿಯೇ ಹಾಸಿಗೆ ಹಿಡಿದಳು. ಉಳಿದದ್ದು ಅಕ್ಕ ರುಕ್ಸಾನಾ ಉಸ್ತಾದ್ ಮತ್ತು ಕೊನೇ ಮಗ ಸಲೀಮ್ ಉಸ್ತಾದ್ ಮಾತ್ರ. ಕಾಲೇಜು ಮುಗಿಸಿ ಎನ್‌ಎಸ್‌ಯುಐನಲ್ಲಿ ಹೋರಾಟ ಆರಂಭಿಸಿದ್ದ ಸಲೀಮ್ ಇಲ್ಲಿಗೆ ವರ್ಷದ ಹಿಂದೆ ಬಿಜಾಪುರದ ಬೀದಿಗಳಲ್ಲಿ ಕಾಣಿಸಿಕೊಂಡಿದ್ದೇ ತಡ, ಚಿಕ್ಕಪ್ಪ ಉಸ್ತಾದ್‌ನ ಪಿತ್ಥ ನೆತ್ತಿಗೇರಿತು. ಅದಕ್ಕೆ ತಕ್ಕಂತೆ ಬಿಜಾಪು[ರದ] ಅನೇಕ ಮಸೀದಿಗಳು ಜಮಾತ್‌ನ ಮುಖ್ಯಸ್ಥರೆಲ್ಲ ಸಲೀ[ಮ್] ಉಸ್ತಾದ್‌ನನ್ನೇ ಬೆಂಬಲಿಸುತ್ತೇವೆಂದು ಘೋಷಿಸಿಬಿಟ್ಟ[ರು]. ಬಿಜಾಪುರದ ಕಾಂಗ್ರೆಸ್ ನಾಯಕ ಎಂ.ಬಿ. ಪಾಟೀಲರಿ[ಗೆ] ಉಸ್ತಾದ್ ಬಗ್ಗೆ ಅಷ್ಟಕ್ಕಷ್ಟೆ. ಆ ಕಾಲದಿಂದಲೂ ಖ... ಧರಂಸಿಂಗ್ ಅಣ್ಣ ಉಸ್ತಾದ್‌ರನ್ನು ಬೆಂಬಲಿಸಿದ್ದರೇ ಹೊ... ತಮ್ಮ ಉಸ್ತಾದ್ ಬಗ್ಗೆ ಅವರ್‍ಯಾರಿಗೂ ಪ್ರೀತಿ ಗೌರವ... ಇಂಥಾದ್ದರಲ್ಲಿ ಮಗ ಸಲೀಮ್ ಉಸ್ತಾದ್ ಬಿಜಾಪು[ರದ] ಬೀದಿಗಳಲ್ಲಿ ಸಂಘಟನೆಗಳಿದದ್ದೇ ತಡ ಚಿಕ್ಕಪ್ಪ ಉಸ್ತಾ[ದ್] ನೇರವಾಗಿ ಗೂಂಡಾಗಿರಿಗಿಳಿದ. ಮೊದಮೊದ[ಲು] ಸಲೀಮ್‌ನನ್ನು ಬೆಂಬಲಿಸಿದ ಮಸೀದಿ ಮುಖ್ಯಸ್ಥರ ಮೆ... ಶುರುವಾದ ಗೂಂಡಾಗಿರಿ ಕ್ರಮೇಣ ಅವರ ಮ... ವಿರುದ್ಧವೇ ತಿರುಗಿತು.

2011 ರ ಆಗಸ್ಟ್ 27 ರಂದು ಸಲೀಮ್‌ನ ... ರುಕ್ಸಾನಾ, ಉಸ್ತಾದ್‌ರ ಮೊಬೈಲಿಗೆ ವಿಚಿತ್ರ ಮೆಸೇಜೊಂ[ದು] ರವಾನೆಯಾಯಿತು. `Call back your broth[er] Otherwise he will be no more' ಅಂ... 'ನಿನ್ನ ತಮ್ಮನನ್ನು ವಾಪಸ್ಸು ಕರೆಸಿಕೊಳ್ಳದೆ ಹೋ[ದರೆ] ಅವನು ಜೀವಂತ ಉಳಿಯಲ್ಲ' ಎಂಬರ್ಥದ ಸಂದೇಶವ...


ಇದನ್ನು ನೋಡಿದ್ದೇ ಕಂಗಾಲಾದ ಅಕ್ಕ ರುಕ್ಸಾ[ನಾ] ನೇರವಾಗಿ ಸಂಜಯ್‌ನಗರ ಪೊಲೀಸ್ ಠಾಣೆಗೆ ದೂರಿತ್ತಿದ್ದ... ಮೆಸೇಜ್ ಬಂದ ನಂಬರನ್ನು ಕೆದಕಿದರೆ ಅದು ಮಹಾರಾ[ಷ್ಟ್ರದ] ಸೋಲಾಪುರದ ವಿಳಾಸದಲ್ಲಿ ದಾಖಲಾಗಿದ್ದ ನಂಬರಾಗಿ... ಇನ್ನೂ ಕೆದಕಿದ ಸಲೀಮ್ ಮತ್ತು ರುಕ್ಸಾನ... ಗೊತ್ತಾಗಿದ್ದೇನೆಂದರೆ ಅದು ಲಾಲೂ ಉಸ್ತಾದ್ ಬಳಸು... ರಹಸ್ಯ ಮೊಬೈಲ್ ನಂಬರ್!

ಆದರೆ ಸಂಜಯನಗರದ ಪೊಲೀಸರು ಇದ್ಯಾವುದ[ನ್ನೂ] ತಲೆಕೆಡಿಸಿಕೊಳ್ಳಲಿಲ್ಲ, ಸಲೀಮ್ ಮತ್ತು ರುಕ್ಸಾನಾ ಕೂ... ಈ ಬಗ್ಗೆ ವಿಪರೀತ ತಲೆ ಕೆಡಿಸಿಕೊಳ್ಳಲಿಲ್ಲ, ಯಾವ... ಕೇಂದ್ರ ವಿದೇಶಾಂಗ ಮಂತ್ರಿಯಾಗಿದ್ದ ಕೃಷ್ಣ ಬೆಂಗಳೂ[ರಿಗೆ] ಬಂದಿದ್ದೇ ಸಲೀಮ್‌ನ ಕಾಂಗ್ರೆಸ್ ಚಟುವಟಿಕೆಗ[ಳು] ತೀವ್ರಗೊಂಡವೋ, ಇಲ್ಲಿಗೆ ತಿಂಗಳ ಹಿಂದೆ ಬಿಜಾಪುರ[ದಲ್ಲಿ] ಮಾಜಿ ಮಂತ್ರಿ ಉಸ್ತಾದ್‌ರ ಪುಣ್ಯತಿಥಿಗೆಂದು ಕಾಂ[ಗ್ರೆಸ್] ಕಾರ್ಯಕರ್ತರ ರಕ್ತದಾನ ಶಿಬಿರ ಸಲೀಮ್ ನೇತೃತ್ವ[ದಲ್ಲಿ] ನಡೆದು ಅದಕ್ಕೆ ಎಂ.ಬಿ. ಪಾಟೀಲರ ತಮ್ಮ ಸುನಿ[ಲ್] ಪಾಟೀಲರ ಬಂದಿದ್ದೇ ಬೆಂಬಲ ಘೋಷಿಸಿದರೋ ಅ... ಚಿಕ್ಕಪ್ಪ ಉಸ್ತಾದ್‌ನ ಪಿತ್ಥ ಅಕ್ಷರಶಃ ನೆತ್ತಿಗೇರಿತು.

ಹಾಗೊಮ್ಮೆ ಸಲೀಮ್ ಉಸ್ತಾದ್‌ಗೇನಾದ[ರೂ] ಮುಂಬರುವ ಚುನಾವಣೆಯಲ್ಲಿ ಬಿಜಾಪುರದ ಕಾಂ[ಗ್ರೆಸ್] ಟಿಕೆಟ್ ಸಿಕ್ಕಿತೆಂದರೆ ತನ್ನ ಪಾಲಿಗದು ಸರ್ವನಾಶವೆಂ[ದು] ಲೆಕ್ಕ ಹಾಕಿದ್ದಾನೆ ಎಲ್.ಎಲ್. ಉಸ್ತಾದ್. ನೇರವಾಗಿ ... ರುಕ್ಸಾನಾ ಉಸ್ತಾದ್‌ಗೂ ಫೋನ್ ಮಾಡಿ ಹೆದರಿಸಿದ... ಅದಕ್ಕೂ ಜಗ್ಗದೇ ಕಾಂಗ್ರೆಸ್ ಟಿಕೆಟ್ಟಿಗಾಗಿ ಅಕ್ಕ-ತಮ್ಮ... ಹೋರಾಟ ಮುಂದುವರಿದಿದೆ. ಈ ಮಧ್ಯೆ ನವೆಂಬ[ರ್] 11 ರ ಅಪರಾಹ್ನ ಇದ್ದಕ್ಕಿದ್ದಂತೆ ಬಿಜಾಪುರದಿಂದ ಬ... ಮೊಬೈಲ್ ಕರೆಯೊಂದು 'ನೀನೇನಾದ್ರೂ ಬಿಜಾಪು[ರಕ್ಕೆ] ಕಾಲಿಟ್ಟೆ ಅಂದ್ರ ಖತಂ ಮಾಡ್ತೀವಿ' ಎಂದು ನೇರವಾ[ಗಿ] ಧಮಕಿ ಕೊಟ್ಟಿದೆ. ಅದು ಚಿಕ್ಕಪ್ಪ ಉಸ್ತಾದ್‌ನ ಕಾರಸ್ಥಾನವ[ಲ್ಲದೆ] ಬೇರೆ ಯಾರೂ ಈ ರೀತಿ ಮಾಡಲು ಸಾಧ್ಯವೇ ... ಎಂದು ಅಕ್ಕತಮ್ಮ ಆರೋಪಿಸುತ್ತಿದ್ದಾರೆ. ಸಂಜಯ್‌ನಗ[ರ] ಪೊಲೀಸ್ ಠಾಣೆಗೂ ಸಲೀಮ್ ದೂರು ನೀಡಿದ... ಬಿಜಾಪುರದ ಕಾಂಗ್ರೆಸ್ ಟಿಕೆಟ್ಟಿಗಾಗಿ ಮಾಜಿ ಮ[ಂತ್ರಿ] ಉಸ್ತಾದ್ ಅನಾಥ ಮಕ್ಕಳ ವಿರುದ್ಧ ಅವರ ಚಿ[ಕ್ಕಪ್ಪ] ಅರ್ಥಾತ್ ಉಸ್ತಾದ್ ಧಮಕಿ ಹಾಕುತ್ತಾನೆಂದರೆ ಅದಿನ್ನೆ[ಂಥ] ದುರಂತ?

ಈ ಬಗ್ಗೆ ಬಿಜಾಪುರದ ಜನರೇ ಯೋಚಿಸಬೇ[ಕು] ದುರುಳ ಚಿಕ್ಕಪ್ಪನಿಂದ ಉಸ್ತಾದ್‌ರ ಅನಾಥ ಮಕ್ಕ[ಳನ್ನು] ಅಲ್ಲಿನ ಮುಸ್ಲಿಮರು ರಕ್ಷಿಸಬೇಕು. ಕಾಂಗ್ರೆಸ್ ಟಿಕೆಟ್ಟಿ[ಗಾಗಿ] ರಕ್ತ ಹರಿಯದಂತೆ ಖರ್ಗೆ-ಧರಂಸಿಂಗ್‌ರಂಥ ನಾಯ[ಕರು] ಮುಂಜಾಗರೂಕತೆ ವಹಿಸಬೇಕು.

■ ರಾ.ಸೋಮನಾ[ಥ್]


ಲಾಲೂ ಉಸ್ತಾ[ದ್]

ತೊಲಗಿದೆಯಾ ಪಟ್ಟಣಶೆಟ್ಟಿ ಎಂದರೆ ಬಂದೆ ಉಸ್ತಾದನ ಬಗಲಲ್ಲಿ ಎಂದನಂತೆ!

ಅಣ್ಣನ ಮಕ್ಕಳನ್ನು ಅದುಮಿಟ್ಟು ಹಾಗೊಮ್ಮೆ ತಮ್ಮ ಉಸ್ತಾದ್‌ನೇ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದನೆಂದರೆ ಬಿಜಾಪುರದ ಮುಸ್ಲಿಮರಾಗಲಿ, ಜನಸಾಮಾನ್ಯರಾಗಲಿ ಕಣ್ಣುಮುಚ್ಚಿ ಕಾಂಗ್ರೆಸ್‌ಗೆ ಓಟು ಕೊಡುತ್ತಾರಾ? ಈ ಬಾರಿ ಕಾಂಗ್ರೆಸ್ಸಿನಿಂದ ಯಾರೇ ನಿಂತರೂ ಗೆಲುವು ಸಲೀಸಾ?

ಇಂಥದೊಂದು ಪ್ರಶ್ನೆಗೆ ಸದ್ಯದ ಪರಿಸ್ಥಿತಿಯಲ್ಲೇ ಉತ್ತರ ಅಡಗಿದೆ. ಕಾಂಗ್ರೆಸ್ ಟಿಕೆಟ್ಟಿಗಾಗಿ ಪೈಪೋಟಿಗಿಳಿದವರೇನೂ ಕಮ್ಮಿಯ ಕುಳಗಳಲ್ಲ, ನಿವೃತ್ತ ಇಂಜಿನಿಯರ್ ರಫೀಕ್ ಟಪಾಲ್, ಹಿರಿಯ ಸಮಾಜ ಸೇವಕ ಹಾಸೀಮ್ ಫೀರ್ ವಾಲಿಕಾರ್, ವ್ಯಾಪಾರಿ ಮಕಬೂಲ್ ಭಾಗವಾನ್, ಪತ್ರಕರ್ತ ಮತ್ತು ಯುವ ಪ್ರಶಸ್ತಿ ವಿಜೇತ ಜಾವದ್ ಜಮಾದಾರ್-ಹೀಗೆ ಬಿಜಾಪುರದ ಕಾಂಗ್ರೆಸ್ ಟಿಕೆಟ್ಟಿಗಾಗಿ ಅಖಾಡಕ್ಕಿಳಿದ ಹದಿನೈದಕ್ಕೂ ಅಧಿಕ ಆಕಾಂಕ್ಷಿಗಳ್ಯಾರಿಗೂ ಎಲ್.ಎಲ್. ಉಸ್ತಾದ್‌ರನ್ನು ಕಂಡಾಗದು. ಅವರೆಲ್ಲರೂ ಹೇಳುವುದೇನೆಂದರೆ ತಮಗೆ ಟಿಕೆಟ್ ಸಿಗದಿದ್ದರೆ ಕತ್ತೆಬಾಲ. ಹಾಗೇನಾದರೂ ಎಲ್.ಎಲ್. ಉಸ್ತಾದ್‌ಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿತೆಂದರೆ ನಾವೆಲ್ಲರೂ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಗಳಾಗುವುದು ನಿಕ್ಕಿ.....!

ಇದರರ್ಥ ಬಿಜಾಪುರದ ಯಾರೇ ಮುಸ್ಲಿಂ ಕಾಂಗ್ರೆಸ್ ನಾಯಕರಿಗೂ ತಮ್ಮ ಉಸ್ತಾದ್ ಬೇಕಿಲ್ಲ, ಅದೇ ಸಲೀಮ್ ಉಸ್ತಾದ್‌ನೋ ಅಥವಾ ಮಗಳು ರುಕ್ಸಾನಾ ಉಸ್ತಾದ್‌ಗೋ ಕಾಂಗ್ರೆಸ್ ಟಿಕೆಟ್ ಸಿಕ್ಕಿತೆಂದರೆ ಇವರ್‍ಯಾರಿಗೂ ಅಭ್ಯಂತರವಿಲ್ಲ. ಇಲ್ಲಿ ತಮ್ಮ ಉಸ್ತಾದ್ ನಿಜಕ್ಕೂ ದೊಡ್ಡಸ್ತಿಕೆ ತೋರಬೇಕೆಂದರೆ ಅಣ್ಣನ ಮಕ್ಕಳಿಗೇನಾದರೂ ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದೇ ಆದರೆ ತಕರಾರೆತ್ತದೆ ಅವರ ಬೆಂಬಲಕ್ಕೆ ನಿಲ್ಲುವುದು. ಇಲ್ಲದಿದ್ದರೆ ಮತ್ತೊಮ್ಮೆ ಮುಸ್ಲಿಂ ಮತಗಳು ಛಿದ್ರಗೊಂಡು ಬಿಜೆಪಿಯ ಅಪ್ಪುಪಟ್ಟಣಶೆಟ್ಟಿಗೇ ಲಾಭವಾಗಲಿದೆ.


ಶರಣಪ್ಪ ಸುಣಗಾರ

ಮೊದಲೇ ಬಿಜೆಪಿ ದುರಾಡಳಿತದಿಂದ ಬಸವಳಿದ ಬಿಜಾಪುರದ ಮಂದಿಗೆ ಕನಿಷ್ಠ ಬದಲಾವಣೆಯ ಹೊಸ ಗಾಳಿ ಬೀಸುವುದಕ್ಕೂ ಕಲ್ಲು ಹಾಕದಂತೆ ವಿವೇಕವನ್ನು ತಮ್ಮ ಉಸ್ತಾದ್‌ಗೆ ಹೇಳುವವರ್‍ಯಾರು? ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶರಣಪ್ಪ ಸುಣಗಾರನಿಗಿದು ಏಕೆ ಅರ್ಥವಾಗುತ್ತಿಲ್ಲ?



ಕೊಲೆಗಡುಕನೊಬ್ಬನ ಸಾವಿನ ವೃತ್ತಾಂತ

ಸತ್ತವರ ಬಗ್ಗೆ ಕೆಟ್ಟ ಮಾತಾಡಬಾರದು. ಆದರೆ ಮೊನ್ನೆ ಸತ್ತ ಬಾಳ್ ಠಾಕ್ರೆ ಬಗ್ಗೆ ಕೆಟ್ಟ ಮಾತಾಡದೇ ಇರುವುದು ಕಷ್ಟ. ಹಾಗೆಂದು ಮಾತಾಡದೆ ಸುಮ್ಮನಿರು ವಂತೆಯೂ ಇಲ್ಲ. ಕಳೆದ 50 ವರ್ಷಗಳಿಂದ ಸಾರ್ವಜನಿಕ ಬದುಕಿನಲ್ಲಿ ಅವನು ಎದ್ದು ಕಾಣಿಸುತ್ತಿದ್ದ. ರಾಮ ಜನ್ಮಭೂಮಿ ಚಳವಳಿ ಮತ್ತು ಬಾಬರಿ ಮಸೀದಿ ಧ್ವಂಸದ ನಂತರ ಅವನು ದೇಶದ ರಾಜಕೀಯದ ನಿರ್ಣಾಯಕ ಸ್ಥಾನದಲ್ಲೂ ಇದ್ದ. ಸತಾಯಿಸಿ, ಸತಾಯಿಸಿ ಕಡೆಗೂ ಸತ್ತ ಬಾಳ್ ಠಾಕ್ರೆ ಬಗ್ಗೆ ಹೇಳಬಹುದಾದ ಒಂದೇ ಒಂದು ಒಳ್ಳೆಯ ಮಾತೂ ಹೊಳೆಯುತ್ತಿಲ್ಲ. ಕ್ರೂರಿ, ಆದರೆ ದೇಶಭಕ್ತ ಎನ್ನೋಣವೇ? ಕರ್ನಾಟಕದ ಹಾಲಿ ದೇಶಭಕ್ತರನ್ನು ನೋಡಿದರೆ ಅದು ಸಹ ಬೈಗುಳದ ಹಾಗೆ ಕೇಳಿಸುತ್ತದೆ. ಹೋಗಲಿ, ಸತ್ತವನ ಆತ್ಮಕ್ಕೆ ಶಾಂತಿ ಇರಲಿ ಎಂದು ಹೇಳುವ ಮನಸ್ಸೂ ಆಗುತ್ತಿಲ್ಲ. ಬದುಕಿದ್ದಾಗ ಇತರರ, ಅದರಲ್ಲೂ ಮುಂಬಯಿಯ ಮುಸ್ಲಿಮರ, ದೇಹಗಳಿಗೆ ತನ್ನ ಪಕ್ಷದವರು ಎಸಗಿದ ಭೀಕರ ಹಿಂಸೆಯ ಬಗ್ಗೆ ಯೋಚಿಸದ ಬಾಳ್ ಠಾಕ್ರೆಗೆ ಆತ್ಮವಿರುವುದು ಕೂಡ ಸಂದೇಹದ ಮಾತು. ಅವನದ್ದು ಅಕಾಲಮರಣವಾಗಿದ್ದರೆ, ಅದಕ್ಕಾದರೂ ವಿಷಾದ ವ್ಯಕ್ತಪಡಿಸಬಹುದಾಗಿತ್ತು. 86ರ ಇಳಿವಯಸ್ಸಿನಲ್ಲಿ ಠಾಕ್ರೆ ಆಸ್ಪತ್ರೆಯ ಹಾಸಿಗೆಯಲ್ಲಿ ತೀರಿಕೊಂಡಿದ್ದಾನೆ. ಆ ವಯಸ್ಸಿನಲ್ಲಿ ಸಜ್ಜನರ ಸಾವಿಗೂ ವಿಶೇಷ ದುಃಖವೇನೂ ಆಗುವುದಿಲ್ಲ, ಠಾಕ್ರೆಯಂತಹ ಕೊಲೆಗಡುಕರು ಇಳಿವಯಸ್ಸಿನಲ್ಲಿ ಸತ್ತರೆ ದುಃಖವೂ ಆಗುವುದಿಲ್ಲ, ಸಂತೋಷವೂ ಆಗುವುದಿಲ್ಲ. ಅಂತಹವರು ಬಿಟ್ಟು ಹೋದ ಬದುಕು ಮಾತ್ರ ಎಂದಿನಂತೆ ಅಸಹನೀಯವಾಗಿರುತ್ತದೆ.

ವದಂತಿಗಳ ಪ್ರಕಾರ, ಬಾಳ್ ಠಾಕ್ರೆ ನವೆಂಬರ್ 14ರ ವೇಳೆಗಾಗಲೆ ವೈದ್ಯಕೀಯ ದೃಷ್ಟಿಯಲ್ಲಿ ನೀಗಿಕೊಂಡಿದ್ದ. ಬಹುದೀರ್ಘಕಾಲದಿಂದ ಅವನು ನರಳುತ್ತಿದ್ದ; ಸಾವು ನಿಚ್ಚಿತವಾಗಿತ್ತು. ಅವನು ಕಟ್ಟಿದ ಶಿವಸೇನೆಯ ಸೈನಿಕರು "ಕೆಟ್ಟ ಸುದ್ದಿ"ಗಾಗಿ ಕಾದಿದ್ದರು. ಆ ನೆವದಲ್ಲಿ ಮುಂಬಯಿಗೆ ಮತ್ತೊಮ್ಮೆ ಬೆಂಕಿ ಹಚ್ಚಿ, ಮತ್ತೊಮ್ಮೆ "ಲಂಡ್ಯಾ" (ಮುಸ್ಲಿಮರು)ಗಳಿಗೆ ಪಾಠ ಕಲಿಸಲು ಅವರು ಕಾತರರಾಗಿದ್ದರು. ಶಹರದಲ್ಲಿ ನಡೆಯಬಹುದಾದ ಹಿಂಸೆಯ ಬಗ್ಗೆ ಆಳುವವರಿಗೆ ಕಾಳಜಿ ಇರಲಿಲ್ಲ. ಆದರೆ ಸದ್ಯಕ್ಕೆ ಮುಂಬಯಿಯಲ್ಲಿ ಹಿಂಸೆ ಭುಗಿಲೆಬ್ಬಿಸುವುದು ಯಾರಿಗೂ ಲಾಭದಾಯಕವಾಗಿ ಕಂಡುಬರಲಿಲ್ಲ. ಹಾಗಾಗಿ, ವಾರದ ರಜೆಯ ಹಿಂದಿನ ದಿನ ಅಂದರೆ ನವೆಂಬರ್ 17ರ ಶನಿವಾರ ಸಂಜೆ ಠಾಕ್ರೆ ಸಾವಿನ ಸುದ್ದಿ "ಅಧಿಕೃತ"ವಾಗಿ ಹೊರಬಿತ್ತು.

ಬದುಕಿದ್ದಾಗ ಮುಂಬಯಿಯಲ್ಲಿ ಹಲವು ಬಾರಿ ಹಿಂಸೆಯ ಮೆಗಾಶೋಗಳನ್ನು ಪ್ರಾಯೋಜಿಸಿದ್ದ ಠಾಕ್ರೆ ತನ್ನ ಸಾವಿನಿಂದಲೂ ಶಹರಕ್ಕೆ ಬೆಂಕಿ ಹಚ್ಚಬಲ್ಲವನಾಗಿದ್ದ. ಜನ ದೊಂಬಿ ನಡೆಸಿಯಾರು ಎಂಬ ಭೀತಿಯಲ್ಲಿ ಜನನಾಯಕನ ಸಾವಿನ ಸುದ್ದಿಯನ್ನು ಮೂರು ದಿನಗಳ ನಂತರ ಪ್ರಕಟಿಸುವುದು, ಆನಂತರ ರಾಷ್ಟ್ರಪತಿಗಳಿಂದ ಹಿಡಿದು, ಹಿರಿ, ಕಿರಿ, ಮರಿಗಣ್ಯರೆಲ್ಲರೂ ಸತ್ತವನು ಮಹಾತ್ಮರ ತುಂಡು ಎಂಬಂತೆ ಗದ್ಗದಿತರಾಗುವುದು, ಬಾಲಿವುಡ್‌ನ ನಕಲಿಗಳು ಅಸಲಿ ಕಣ್ಣೀರನ್ನೇ ಸುರಿಸುವುದು – ಬಾಳ್ ಠಾಕ್ರೆಯ ಇಂತಹ ಬದುಕು ಮತ್ತು ಇಂತಹ ಸಾವು ನಮ್ಮ ಕಣ್ಣೆದುರು ಇರುವಾಗ ಮಾರ್ಕ್ವೆಜ್‌ನ ಕಾದಂಬರಿಗಳು ಯಾಕೆ ಬೇಕು?

ಬಾಳ್ ಠಾಕ್ರೆಯ ಶಿವಸೇನೆ ಮತ್ತು ಅದರ ಸಹವರ್ತಿ ಬಿ.ಜೆ.ಪಿ.ಗಳಿಂದ ಸತತವಾಗಿ ಹಿಂಸೆ ಅನುಭವಿಸಿದ ಮಹಾರಾಷ್ಟ್ರದ ಭಿವಂಡಿ, ಜಲಗಾಂ, ಮುಂಬಯಿ ಮತ್ತು ಇನ್ನೂ ಹಲವು ಊರುಗಳ ಮುಸ್ಲಿಮರು ದೇಶದ ನ್ಯಾಯ ವ್ಯವಸ್ಥೆಯಲ್ಲಿ ಈಗ ನಂಬಿಕೆ ಕಳೆದುಕೊಂಡಿದ್ದರೆ ಅವರನ್ನು ದೂರುವಂತಿಲ್ಲ. ಮನುಷ್ಯರು ರೂಪಿಸಿದ ನ್ಯಾಯ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡವರಿಗೆ ದೇವರ ನ್ಯಾಯದಲ್ಲಾದರೂ ನಂಬಿಕೆ ಇರಬೇಕು. ಮುಸ್ಲಿಮರಿಗೆ ಅದೊಂದೇ ಈಗ ಉಳಿದಿರುವುದು. ಆದರೆ ದೇವರ ನ್ಯಾಯವೆನ್ನುವುದು ನಿಜಕ್ಕೂ ಇದ್ದಿದ್ದರೆ ಬಾಳ್ ಠಾಕ್ರೆ, ಅವನು ಪ್ರಚೋದಿಸಿದ ಕಗ್ಗೊಲೆಗಳಿಗಾಗಿ ಜೀವಾವಧಿ ಜೈಲಿನಲ್ಲಿ ಇರಬೇಕಾಗಿತ್ತು ಮತ್ತು ಜೈಲಿನ ಹಾಸಿಗೆಯಲ್ಲೋ, ನೇಣುಗಂಬದಲ್ಲೋ ಸಾಯಬೇಕಾಗಿತ್ತು. ಅಂತಹವನಿಗೂ ಸಹಜ ಸಾವು ಎಂದರೆ ದೇವರ ನ್ಯಾಯವೂ ಸತ್ತಿದೆ ಎಂದೇ ಅರ್ಥ.

ಅಸಹನೀಯ ಎಂದರೆ ಇದೇ ಮುಂಬಯಿಯ ನ್ಯಾಯಾಲಯ, ನ್ಯಾಯಯುತವಾಗಿ ನಡೆದುಕೊಂಡಿದ್ದರೆ 1993ರ ನಂತರವಾದರೂ ಠಾಕ್ರೆಗೆ ಶಿಕ್ಷೆ ಆಗಬೇಕಾಗಿತ್ತು. 1992, ಡಿಸೆಂಬರ್ 6 ರಂದು ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ಬೆನ್ನಿಗೇ ಮುಂಬಯಿಯಲ್ಲಿ ಶಿವಸೇನೆ ಮತ್ತು ಬಿ.ಜೆ.ಪಿ ಮುಸ್ಲಿಮರ ಮೇಲೆ ಸಂಘಟಿತ ಹಿಂಸಾಚಾರ ಶುರು ಮಾಡಿದವು. 1993ರ ಜನವರಿ ತಿಂಗಳಿಗೂ ವಿಸ್ತರಿಸಿದ ಈ ಹಿಂಸಾಕಾಂಡದಲ್ಲಿ ಸುಮಾರು ಒಂದು ಸಾವಿರ ಜನ ಸಾವಿಗೀಡಾದರು. ಅವರಲ್ಲಿ ಹೆಚ್ಚಿನವರು ಮುಸ್ಲಿಮರು.

ಮುಂಬಯಿಯ ಈ ಸರಣಿ ಹಿಂಸೆ ಕುರಿತು ವಿಚಾರಣೆ ನಡೆಸಲು ನೇಮಕಗೊಂಡ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಆಯೋಗ, ತನ್ನ ವರದಿಯಲ್ಲಿ ಬಾಳ್ ಠಾಕ್ರೆ ಸೇರಿದಂತೆ ಶಿವಸೇನೆ ಹಾಗೂ ಬಿ.ಜೆ.ಪಿಯ ಹಲವು ನಾಯಕರು ಮತ್ತು ಕಾರ್ಯಕರ್ತರನ್ನು ಅಪರಾಧಿಗಳು ಎಂದು ಹಲವೆಡೆ ಕಾಣಿಸಿದೆ. ಮುಂಬಯಿ ಹಿಂಸೆಯಲ್ಲಿ ಆಳುವ ಕಾಂಗ್ರೆಸ್ ಪಕ್ಷ ಶಾಮೀಲಾಗಿದ್ದುದನ್ನೂ ವರದಿಯಲ್ಲಿ ಹೇಳಲಾಗಿದೆ. ಶ್ರೀಕೃಷ್ಣ ಆಯೋಗದ ವರದಿ ನಮ್ಮ ಕಾಲದ ಒಂದು ಅನನ್ಯವಾದ ರಾಜಕೀಯ, ಸಾಂಸ್ಕೃತಿಕ ದಾಖಲೆ. ತಣ್ಣಗಿನ, ಕೋರ್ಟು ಕಡತಗಳ ಶೈಲಿಯಲ್ಲಿ ಶಹರದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಲ್ಲಿ ನಡೆದ ಹಿಂಸಾಚಾರದ ಪ್ರಕರಣಗಳನ್ನು ಶ್ರೀಕೃಷ್ಣ ಆಯೋಗ ನಿರೂಪಿಸುವುದು, ಏಕಕಾಲಕ್ಕೆ ಕಾಫ್ಕ ಮತ್ತು ಮಾಂಟೋನ ಕತೆಗಳನ್ನು ನೆನಪಿಸುತ್ತದೆ.

ವರದಿಯಲ್ಲಿರುವ ಯುವರಾಜ್ ಮೋಹಿತೆ ಎಂಬ ಮುಂಬಯಿ ಪತ್ರಕರ್ತನ ಸಾಕ್ಷಿಯಂತೂ ಒಂದು ಅದ್ಭುತ ಕಥನ. ಕಳೆದ ಹಲವು ದಶಕಗಳಿಂದ ಶಿವಸೇನೆಯ ದಾದಾಗಿರಿಯನ್ನು ಧೈರ್ಯವಾಗಿ ಎದುರಿಸುತ್ತಿರುವ ನಿಖಿಲ್ ವಾಗ್ಲೆ ಸಂಪಾದಕತ್ವದ 'ಮಹಾನಗರ್' ಪತ್ರಿಕೆಯಲ್ಲಿ ಯುವರಾಜ್ ಮೋಹಿತೆ ಓರ್ವ ಪತ್ರಕರ್ತ. ಮುಂಬಯಿ ಕಾರ್ಪೊರೇಶನ್ ಕಾರ್ಯಕಲಾಪಗಳನ್ನು ವರದಿ ಮಾಡುವುದು ಮೋಹಿತೆಯ ಬೀಟ್. 1992ರ ಡಿಸೆಂಬರ್ 6ರ ಸಂಜೆ ಮುಂಬಯಿ ನಗರದಲ್ಲಿ ಶುರುವಾದ ಕೋಮು ಹಿಂಸಾಚಾರ ತಿಂಗಳ ಕೊನೆಯ ವೇಳೆಗೆ ಸ್ವಲ್ಪ ತಣ್ಣಗಾಗುತ್ತದೆ. ಆದರೆ 1993 ಜನವರಿ ತಿಂಗಳ ಮೊದಲ ವಾರ ಇದ್ದಕ್ಕಿದ್ದಂತೆ ಶಿವಸೇನೆ ಮತ್ತೆ ಹಿಂಸೆಗಿಳಿಯುತ್ತದೆ.

ಜನವರಿ 8ರ ಸಂಜೆ 7 ಗಂಟೆಯ ಸುಮಾರಿಗೆ ಕಾರ್ಪೊರೇಶನ್ ಕಚೇರಿಯಲ್ಲಿ ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಹೊರಟ ಮೋಹಿತೆ ಅಭ್ಯಾಸ ಬಲದಿಂದ ಮೇಯರ್ ಕೊಠಡಿ ಒಳಗೆ ಇಣುಕುತ್ತಾರೆ. ಒಳಗೆ ಕೂತಿದ್ದ ಮೇಯರ್ ಚಂದ್ರಕಾಂತ ಹಂದೋರೆ, ಮೋಹಿತೆಯನ್ನು ನೋಡಿ "ಏ, ಬಾರಯ್ಯ ಇಲ್ಲಿ" ಎಂದು ಕರೆಯುತ್ತಾರೆ. ಹಂದೋರೆ ಶಹರದಲ್ಲಿ ಶಾಂತಿ ಕಾಪಾಡಲು ಒಂದು ಮನವಿ ಸಿದ್ಧಪಡಿಸುತ್ತಿದ್ದರು. ಮನವಿ ರೆಡಿ ಆದಮೇಲೆ ಅದನ್ನು ಹಿಡಿದುಕೊಂಡು ಅವರಿಬ್ಬರೂ ಮೊದಲು ಮುಂಬಯಿಯ ಕುಪ್ರಸಿದ್ಧ ಮಾಫಿಯಾ ದೊರೆ ಹಾಜಿ ಮಸ್ತಾನನ ಮನೆಗೆ ಹೋದರು. ಮನವಿಗೆ ಅವನ ಸಹಿ ಪಡೆದಾದ ಮೇಲೆ ಅವರಿಬ್ಬರೂ ಸೀದಾ ಬಾಳ್ ಠಾಕ್ರೆಯ ಮನೆಗೆ ಹೋದರು. ಆಗ ರಾತ್ರಿ 9 ಗಂಟೆ ಕಳೆದಿದ್ದಿತು. ಠಾಕ್ರೆ, ಶಿವಸೇನೆಯ ಮುಖಂಡರು ಮತ್ತು ಮುಂಬಯಿಯ ವಿವಿಧ ಬಡಾವಣೆಗಳ ಶಾಖಾ ಪ್ರಮುಖರುಗಳಿಗೆ ನಿರಂತರವಾಗಿ ಫೋನ್ ಮಾಡುತ್ತ ಗಲಭೆಗಳನ್ನು ಹೇಗೆ ಮುಂದುವರಿಸಿಕೊಂಡು ಹೋಗಬೇಕು ಎಂಬ ಬಗ್ಗೆ ಸ್ಪಷ್ಟವಾದ ನಿರ್ದೇಶನಗಳನ್ನು ಕೊಡುತ್ತಿದ್ದ.

"ಆ ಅಧಿಕಾರಿಯನ್ನು ಸ್ವಲ್ಪ ವಿಚಾರಿಸಿಕೊ" ಎಂದು ಯಾರಿಗೋ ಹೇಳಿದ; ಮತ್ತೆ ಯಾರಿಗೋ ಕರೆ ಮಾಡಿ "ಲಂಡ್ಯಾಗಳ ಬಸ್ತಿಯಲ್ಲಿ ಗಲಾಟೆ ಶುರುವಾಗಿದೆ. ಈ ಸಲ ನಾನು ಅವರ ಅಹಂಕಾರ ಇಳಿಸುತ್ತೇನೆ" ಎಂದು ಅಬ್ಬರಿಸಿದ; "ಸಾಕ್ಷಿ ಹೇಳಲು ಒಬ್ಬನೇ ಒಬ್ಬ ಲಂಡ್ಯಾ ಬದುಕಿರಬಾರದು; ಹಾಗೆ ಅವರಿಗೆ ಪಾಠ ಕಲಿಸಿ" ಎಂದು ಮತ್ತೆ ಯಾರಿಗೋ ಸೂಚನೆ ಕೊಟ್ಟ; ಜೋಗೇಶ್ವರಿಯಲ್ಲಿ ಯಾರಿಗೋ ಫೋನ್ ಮಾಡಿ "ಆ ಪೊಲೀಸ್ ಆಫೀಸರ್ ಎ.ಎ.ಖಾನ್ (ಮುಂಬಯಿ ಉತ್ತರ ಎಡಿಷನಲ್ ಪೊಲೀಸ್ ಕಮಿಷನರ್) ವಿಪರೀತ ಹೆಚ್ಚಿಕೊಂಡಿದ್ದಾನೆ; ಅವನನ್ನು ಸೀದಾ ಅಲ್ಲಾನ ಮನೆಗೆ ಕಳುಹಿಸಿ ಬಿಡಿ; ಆ ಕಚ್ಚೆ ಹರುಕ ಮುಂದ್ಕುರ್‌ಗೂ ಪಾಠ ಕಲಿಸಿ; ಹುಷಾರಾಗಿ ನಿಭಾಯಿಸಿ" ಎಂದು ಹೇಳಿದ. ಇದೆಲ್ಲ ಮುಗಿದನಂತರ ಠಾಕ್ರೆ ಹಂದೋರೆ ಕಡೆ ತಿರುಗಿ "ಪವಾರ್ (ಶರದ್ ಪವಾರ್; ಆಗ ಕೇಂದ್ರದಲ್ಲಿ ರಕ್ಷಣಾ ಮಂತ್ರಿ) ನಗರಕ್ಕೆ ಮಿಲಿಟರಿ ಕಳುಹಿಸಿದ್ದಾನೆ; ಅವರು ಬಿಳಿ ಬಟ್ಟೆ ಹಿಡಿದುಕೊಂಡು ತಿರುಗಾಡುತ್ತಿದ್ದಾರೆ. ಅವರಿಗೆ ನಿನ್ನ ಧೋತಿಕೊಡು" ಎಂದು ಹೇಳಿದ; ಹಂದೋರೆ ಪ್ಯಾಲಿಸಂತೆ ನಗಾಡಿದ. ಠಾಕ್ರೆ ಅವರ ಮನವಿಗೆ ರುಜು ಹಾಕಲಿಲ್ಲ.

ಠಾಕ್ರೆ ಮನೆಯಿಂದ ಹಿಂದಿರುಗುತ್ತಿದ್ದಾಗ ಮೋಹಿತೆಗೆ ಹಂದೋರೆ "ನೋಡು ಅಲ್ಲಿ ಏನು ನಡೆಯಿತು ಎಂಬುದನ್ನು ಯಾರಿಗೂ ಹೇಳಬೇಡ. ಅದನ್ನು ಮರೆತುಬಿಡುವುದು ನನಗೂ ಒಳ್ಳೆಯದು; ನಿನಗೂ ಒಳ್ಳೆಯದು" ಎಂದು ತಾಕೀತು ಮಾಡಿದರು. ಆದರೆ ಮೋಹಿತೆ ತನ್ನ ವೃತ್ತಿ ಧರ್ಮಕ್ಕೆ ತಕ್ಕಂತೆ ಠಾಕ್ರೆ ಮನೆಯಲ್ಲಿ ತಾನು ಕೇಳಿಸಿಕೊಂಡದ್ದನ್ನು ಸಂಪಾದಕರಿಗೆ ವರದಿ ಮಾಡಿದರು. 'ಮಹಾನಗರ್'ನಲ್ಲಿ ಅದು ಪ್ರಕಟವೂ ಆಯಿತು. ಆದರೆ ಕಾಂಗ್ರೆಸ್ ಪಕ್ಷದ ದಲಿತ ಮುಖಂಡ ಮೇಯರ್ ಚಂದ್ರಕಾಂತ್ ಹಂದೋರೆ, ಶ್ರೀಕೃಷ್ಣ ಆಯೋಗದ ಮುಂದೆಯಾಗಲಿ, ನ್ಯಾಯಾಲಯದಲ್ಲಿಯಾಗಲಿ ಸಾಕ್ಷಿ ಹೇಳಲು ಹಾಜರಾಗಲಿಲ್ಲ. ಅವರ ಗೋಸುಂಬೆತನಕ್ಕೆ ಮುಂದೆ ರಾಜ್ಯದ ಮುಖ್ಯಮಂತ್ರಿಯಾದ ವಿಲಾಸರಾವ್ ದೇಶಮುಖ್ ಮಂತ್ರಿ ಪದವಿಯನ್ನು ದಯಪಾಲಿಸಿದರು. ಹೀಗಿದೆ ಶಿವಸೇನೆ, ಬಿ.ಜೆ.ಪಿ ಮತ್ತು ಕಾಂಗ್ರೆಸ್‌ಗಳ ಕೊಳು ಕೊಡುಗೆಯ ಸಂಬಂಧ!

ಪತ್ರಕರ್ತ ಯುವರಾಜ್ ಮೋಹಿತೆ ಮಾತ್ರ ದಿಟ್ಟತನದಿಂದ ಶ್ರೀಕೃಷ್ಣ ಆಯೋಗದ ಮುಂದೆ ಮುಂಬಯಿ ಹಿಂಸಾಚಾರದ ಬಗ್ಗೆ ತನಗೆ ಹೇಳಲಿಕ್ಕೆ ಇರುವುದನ್ನು ಹೇಳಿದರು. ಅವರ ಸಾಕ್ಷಿಯನ್ನು ಸತ್ಯವೆಂದು ನಂಬದೇ ಇರಲು ಕಾರಣವೇ ಇಲ್ಲ ಎಂದು ಆಯೋಗ ಅಭಿಪ್ರಾಯ ಪಟ್ಟಿತು. ("ಡ್ಯಾಮಿಂಗ್ ವರ್ಡಿಕ್ಟ್ - ರಿಪೋರ್ಟ್ ಆಫ್ ದ ಜಸ್ಟೀಸ್ ಬಿ.ಎನ್.ಶ್ರೀಕೃಷ್ಣ ಕಮಿಷನ್ – ಸಬ್ರಂಗ್ ಕಮ್ಯುನಿಕೇಷನ್ಸ್, ಮುಂಬಯಿ, ಪುಟ 212-216).


1966ರಲ್ಲಿ ಶಿವಸೇನೆ ಎಂಬ ಸಂಘಟನೆಯನ್ನು ಸ್ಥಾಪಿಸುವಾಗ ಬಾಳ್ ಠಾಕ್ರೆ ಒಬ್ಬ ಕಟ್ಟಾ ಕಮ್ಯುನಿಸ್ಟ್ ವಿರೋಧಿ ವ್ಯಂಗ್ಯ ಚಿತ್ರಕಾರನಷ್ಟೇ ಆಗಿದ್ದ. ಅವನ ರಾಜಕೀಯದ ಬದುಕು ಪ್ರಾರಂಭವಾಗಿದ್ದು ಅವನೇ ನಿಂತು ನಡೆಸಿದ ಕೃಷ್ಣ ದೇಸಾಯಿ ಎಂಬ ಜನಪ್ರಿಯ ಕಮ್ಯುನಿಸ್ಟ್ ನಾಯಕನ ಕೊಲೆಯೊಂದಿಗೆ. ಗಿರಣಿ ಕಾರ್ಮಿಕ ಮುಖಂಡರಾಗಿದ್ದ ಕೃಷ್ಣ ದೇಸಾಯಿ ಹಲವು ಬಾರಿ ಕಾರ್ಪೊರೇಶನ್ ಸದಸ್ಯರಾಗಿದ್ದರು. ಜೊತೆಗೆ ಶಾಸಕರಾಗಿಯೂ ಆಯ್ಕೆಗೊಂಡಿದ್ದರು. ಮುಂಬಯಿಯಲ್ಲಿ ಗಿರಣಿ ಉದ್ಯಮ ಮತ್ತು ಗಿರಣಿ ಕಾರ್ಮಿಕ ಸಂಘಟನೆ ಎರಡೂ ಉಚ್ಛ್ರಾಯದಲ್ಲಿದ್ದ ದಿನಗಳು ಅವು. ಶಹರದಲ್ಲಿ ಕಮ್ಯುನಿಸ್ಟ್ ಚಳವಳಿಯೂ ಪ್ರಬಲವಾಗಿತ್ತು. ಮುಂಬಯಿಯ ಬಂಡವಾಳಶಾಹಿಗಳಿಗೆ ಮತ್ತು ಅವರಿಗೆ ತಲೆ ಹಿಡುಕರಾಗಿದ್ದ ಕಾಂಗ್ರೆಸ್ ಪಕ್ಷದ ಎಸ್.ಕೆ.ಪಾಟೀಲ್ ಮುಂತಾದವರಿಗೆ ಕಲ್ಕತ್ತಾದಂತೆ ಮುಂಬಯಿ ಕೂಡಾ ಕಮ್ಯುನಿಸ್ಟರ ಕೈವಶವಾಗುವುದು ಬೇಡವಾಗಿತ್ತು. ಆಗ ಅವರಿಗೆ ಬಾಡಿಗೆ ಬಂಟನಾದವನೇ ಠಾಕ್ರೆ.

ಕೃಷ್ಣ ದೇಸಾಯಿಯನ್ನು ಕೊಲ್ಲುವುದರ ಜೊತೆಗೆ ಠಾಕ್ರೆ ತನ್ನದೇ ಪಕ್ಷದ ಯೂನಿಯನ್ ಸ್ಥಾಪಿಸುವುದರ ಮೂಲಕ ಗಿರಣಿ ಕಾರ್ಮಿಕರ ಒಗ್ಗಟ್ಟನ್ನು ಸಹ ನಾಶಪಡಿಸಿದ. ಮುಂದೆ ಶಹರದ ಜವಳಿ ಗಿರಣಿಗಳು ಒಂದೊಂದಾಗಿ ದಿವಾಳಿ ಎದ್ದವು; ಗಿರಣಿ ಕಾರ್ಮಿಕರು ಬೀದಿಗೆ ಬಿದ್ದರು. ಆದರೆ ಗಿರಣಿ ಮಾಲೀಕರು ಮಾತ್ರ ಸರಕಾರದಿಂದ ಯಥೇಚ್ಛ ನೆರವು ಪಡೆದದ್ದೇ ಅಲ್ಲದೆ ಗಿರಣಿಗಳಿಗೆ ಸೇರಿದ್ದ ನೂರಾರು ಎಕರೆ ಬೆಲೆಬಾಳುವ ಜಮೀನನ್ನು ಸಹ ಕಬ್ಜಾ ತೆಗೆದುಕೊಂಡರು. ಕಾರ್ಮಿಕರ ಚಾಲೆಗಳು ಇದ್ದ ನೆಲದಲ್ಲಿ ಮಾಲ್‌ಗಳು ತಲೆ ಎತ್ತಿದವು. ಈ ಲೂಟಿಯಲ್ಲಿ ಠಾಕ್ರೆಗೂ ದೊಡ್ಡ ಪಾಲು ಸಂದಿತು. ನಿಧಾನಕ್ಕೆ ಅವನ ಗೂಂಡಾ ಪಡೆ ರಿಯಲ್ ಎಸ್ಟೇಟ್, ನೀರು ಸರಬರಾಜು, ತೈಲ ಸಾಗಾಣಿಕೆ ಮುಂತಾದ ಫಲವತ್ತಾದ 'ದಂಧೆ'ಗಳತ್ತಲೂ ಗಮನ ಹರಿಸಿತು.

ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಶಿವಸೇನೆ "ಮುಂಬೈ ಮರಾಠಿಗರಿಗೆ ಮಾತ್ರ" ಎಂಬ ಭಾಷಾ ದುರಭಿಮಾನದ ಚಳವಳಿಯನ್ನು ಪ್ರಾರಂಭಿಸಿ ಶಹರದ ಉಡುಪಿ ಹೋಟೆಲ್‌ಗಳ ಜೊತೆ ತಮಿಳು, ಮಲಯಾಳಿ ಮತ್ತಿತರ ಭಾಷಿಕರು ಹಾಗೂ ವಲಸೆ ಕಾರ್ಮಿಕರ ಮೇಲೆ ದಾಳಿಗಳನ್ನು ನಡೆಸಿತು. "ಹಿಂದೂ ಹೃದಯ ಸಾಮ್ರಾಟ್" - ಠಾಕ್ರೆಯ ಇತ್ತೀಚಿನ ಅವತಾರ. ಬಾಬರಿ ಮಸೀದಿ ಧ್ವಂಸ ಮತ್ತು ಮುಂಬೈ ಹಿಂಸಾಕಾಂಡದ ನಂತರ ಶಿವಸೇನೆ ಮರಾಠಿ ಅಸ್ಮಿತೆಗಿಂತಲೂ ಹೆಚ್ಚಾಗಿ ಹಿಂದೂತ್ವವನ್ನು ನೆಚ್ಚಿಕೊಂಡ ಪಕ್ಷವಾಯಿತು. ಧರ್ಮ ದೇವರುಗಳ ನೆವದಲ್ಲಿ ಜನಸಾಮಾನ್ಯರನ್ನು ಅಸಾಮಾನ್ಯ ಹಿಂಸೆಗೆ ಸಜ್ಜುಗೊಳಿಸಿದ್ದು ಹಿಂದೂತ್ವದ ಬಹುದೊಡ್ಡ ಸಾಧನೆ; ಹೀಗೆ ಅಯೋಧ್ಯೆ ಮತ್ತು ಮುಂಬಯಿಗಳಲ್ಲಿ ಫ್ಯಾಸಿಸಂನ ದೇಸಿ ಆವೃತ್ತಿಯೊಂದು ಸಿದ್ಧಗೊಂಡಿತು. ಅದಕ್ಕೆ ಬಾಳ್ ಠಾಕ್ರೆಯ ಕೊಡುಗೆ ಸಣ್ಣದೇನು ಅಲ್ಲ. ಮುಂಬೈಯಲ್ಲಿ ಅವನು ಶುರು ಹಚ್ಚಿದ ಈ ಸಮೂಹ ಹಿಂಸೆಯ ಅಭಿಯಾನವನ್ನು ಇನ್ನಷ್ಟು ದಕ್ಷತೆಯೊಂದಿಗೆ ಗುಜರಾತಿನಲ್ಲಿ ಮುನ್ನಡೆಸಿದವನು ನರೇಂದ್ರ ಮೋದಿ. ಬಾಳ್ ಠಾಕ್ರೆ ಈಗ ಜಾಗ ಖಾಲಿ ಮಾಡಿದ್ದಾನೆ; ಆದರೆ ಅವನು ಹುಟ್ಟು ಹಾಕಿದ ಹಿಂಸೆ ತೊಲಗುವುದು ಯಾವಾಗ?

■ ಜಿ. ರಾಜಶೇಖರ

ಆ ಪಕ್ಷಕ್ಕೆ ಅಧಿಕಾರ ಸಿಕ್ಕೇ ಸಿಗುತ್ತದೆ ಎಂಬ ಗ್ಯಾರಂಟಿ ಇಲ್ಲ. ಒಂದು ವೇ
ಸದ್ಯದ ಪರಿಸ್ಥಿತಿ ಹೇಗಿದೆ ಎಂದರೆ ಯಾರು ಯಾವ ಪಕ್ಷ ಸೇರಿದರೂ ಆ ಪಕ್ಷಕ್ಕೆ ಅಧಿಕಾರ ಸಿಕ್ಕೇ ಸಿಗುತ್ತದೆ ಎಂಬ ಗ್ಯಾರಂಟಿ ಇಲ್ಲ. ಈ ರಾಷ್ಟ್ರೀಯ ಪಕ್ಷವನ್ನೇ ಪ್ರಾದೇಶಿಕ ಪಕ್ಷಗ
ಪ್ರಾದೇಶಿಕ ಪಕ್ಷಗಳ ಸಹವಾಸ ಬೇಡವೇ ಬೇಡ ಎಂದು ರಾಷ್ಟ್ರೀಯ ಪಕ್ಷವನ್ನು ಸೇರಿದರೆ ನಾಳೆ ಈ ರಾಷ್ಟ್ರೀಯ ಪಕ್ಷವನ್ನೇ ಪ್ರಾದೇಶಿಕ ಪಕ್ಷಗ
ರಿಮೋಟ್ ಕಂಟ್ರೋಲ್ ಮಾಡುವ ಸಾಧ್ಯತೆಯಿದೆ. ಅಂದರೆ ಚುನಾವಣೆಯ ನಂತರ ಯಾರ ಜುಟ್ಟು ಯಾರ ಕೈಯಲ್ಲಿರುತ್ತದೋ ಯಾರಿಗೆ ಗೊತ್ತು



ಶುರುವಾಗಲಿದೆ ಕಿಚಡಿ ರಾಜಕೀಯ

ಕರ್ನಾಟಕದ ರಾಜಕೀಯ ಪರಿಸ್ಥಿತಿ ಅತ್ಯಂತ ಸಂದಿಗ್ಧ ಸ್ಥಿತಿಯಲ್ಲಿದೆ. ಹೀಗಾಗಿ ಬಹುತೇಕ ಭಾವೀ ಶಾಸಕರುಗಳಿಗೆ ತಾವು ಯಾವ ರಾಜಕೀಯ ಪಕ್ಷವನ್ನು ಸೇರಬೇಕು ಎಂದು ಗೊತ್ತಾಗುತ್ತಿಲ್ಲ, ತಮ್ಮ 'ಉಜ್ವಲ' ರಾಜಕೀಯ ಭವಿಷ್ಯಕ್ಕಾಗಿ ರಾಷ್ಟ್ರೀಯ ಪಕ್ಷವನ್ನು ಸೇರಬೇಕೋ? ಅಥವಾ ಪ್ರಾದೇಶಿಕ ಪಕ್ಷವನ್ನು ಸೇರಬೇಕೋ ಎಂಬ ಜಿಜ್ಞಾಸೆಯಲ್ಲಿದ್ದಾರೆ ಭಾವೀ ಶಾಸಕರುಗಳು. ಒಂದು ವೇಳೆ ರಾಷ್ಟ್ರೀಯ ಪಕ್ಷವನ್ನು ಸೇರಿದರೆ ಆ ಪಕ್ಷದೊಳಗಿರುವ ಯಾವ ಬಣದ ನಾಯಕರ ಜೊತೆ ಗುರುತಿಸಿಕೊಳ್ಳಬೇಕು ಎಂಬುದು ಅವರು ಎದುರಿಸುತ್ತಿರುವ ಮತ್ತೊಂದು ಸಮಸ್ಯೆ.

ಬಹುಶಃ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಯಾವತ್ತೂ ಇಂತಹ ಗೊಂದಲಮಯ ಸ್ಥಿತಿ ರಾಜಕಾರಣಿಗಳಿಗೆ ಎದುರಾಗಿರಲಿಲ್ಲ, ಯಾಕೆಂದರೆ ಕರ್ನಾಟಕದ ಮಟ್ಟಿಗೆ ಈ ಹಿಂದೆ ಎರಡೇ ಪಕ್ಷಗಳಿದ್ದವು. ಒಂದು ಅಧಿಕಾರದಲ್ಲಿದ್ದ ಪಕ್ಷ. ಮತ್ತೊಂದು ವಿರೋಧ ಪಕ್ಷ. ಆದರೆ ಇದೇ ಮೊದಲ ಬಾರಿಗೆ ಕರ್ನಾಟಕದ ರಾಜಕೀಯದಲ್ಲಿ ಕಾಂಗ್ರೆ, ಬಿಜೆಪಿ, ಜನತಾದಳ ಮಾತ್ರವಲ್ಲದೆ ಯಡಿಯೂರಪ್ಪನ ಕೆಜೆಪಿ ಮತ್ತು ಶ್ರೀರಾಮುಲುವಿನ ಬಿಎಸ್‌ಆರ್ ಹೀಗೆ ಐದು ಪಕ್ಷಗಳು ಅಸ್ತಿತ್ವದಲ್ಲಿವೆ. ಈ ಐದು ಪಕ್ಷಗಳಲ್ಲಿ ಯಾವುದು ತನ್ನ ರಾಜಕೀಯಕ್ಕೆ ಉತ್ತಮ? ಎಲ್ಲಿ ಸೇರಿದರೆ ಆಯ್ಕೆಯಾಗಬಹುದು? ಎಂಬಿತ್ಯಾದಿ ಲೆಕ್ಕಾಚಾರಗಳಲ್ಲೇ ಭಾವೀ ಶಾಸಕರುಗಳು ತೊಡಗಿದ್ದಾರೆ. ಇದೆಲ್ಲದರಿಂದಾಗಿ ಬರುವ ಅಸೆಂಬ್ಲಿ ಚುನಾವಣೆಯ ನಂತರ ರಾಜ್ಯದಲ್ಲಿ ನಿಸ್ಸಂದೇಹವಾಗಿ 'ಕಿಚಡಿ ರಾಜಕೀಯ'ದ ಅಧ್ಯಾಯ ಪ್ರಾರಂಭವಾಗಲಿದೆ.

ಸದ್ಯದ ಪರಿಸ್ಥಿತಿ ಹೇಗಿದೆ ಎಂದರೆ ಯಾರು ಯಾವ ಪಕ್ಷ ಸೇರಿದರೂ ಆ ಪಕ್ಷಕ್ಕೆ ಅಧಿಕಾರ ಸಿಕ್ಕೇ ಸಿಗುತ್ತದೆ ಎಂಬ ಗ್ಯಾರಂಟಿ ಇಲ್ಲ, ಒಂದು ವೇಳೆ ಪ್ರಾದೇಶಿಕ ಪಕ್ಷಗಳ ಸಹವಾಸ ಬೇಡವೇ ಬೇಡ ಎಂದು ರಾಷ್ಟ್ರೀಯ ಪಕ್ಷವನ್ನು ಸೇರಿದರೆ ನಾಳೆ ಈ ರಾಷ್ಟ್ರೀಯ ಪಕ್ಷವನ್ನೇ ಪ್ರಾದೇಶಿಕ ಪಕ್ಷಗಳು ರಿಮೋಟ್ ಕಂಟ್ರೋಲ್ ಮಾಡುವ ಸಾಧ್ಯತೆಯಿದೆ. ಉದಾಹರಣೆಗೆ, ಕಾಂಗ್ರೆಸ್ ಪಕ್ಷ ಒಂದು ವೇಳೆ ಅಧಿಕಾರಕ್ಕೆ ಬರಲು ಸಾಕಷ್ಟು ಸಂಖ್ಯೆಯಲ್ಲಿ ಗೆಲ್ಲದಿದ್ದರೆ ಯಡಿಯೂರಪ್ಪನ ಪಕ್ಷದ ಸಹಾಯ ಪಡೆಯಲಿದೆ ಎಂಬ ಸುದ್ದಿ ಈಗಾಗಲೇ ಚಾಲ್ತಿಯಲ್ಲಿದೆ. ಅದೇರೀತಿ ಒಂದು ವೇಳೆ ಭಾರತೀಯ ಜನತಾ ಪಕ್ಷಕ್ಕೆ ಬೇಕಾದಷ್ಟು ಸೀಟುಗಳು ಸಿಗದಿದ್ದರೆ ಅದು ಖಂಡಿತವಾಗಿ ಜನತಾದಳದ ಬೆಂಬಲದಿಂದ ಅಧಿಕಾರಕ್ಕೆ ಬರುತ್ತದೆ ಎಂಬ ಲೆಕ್ಕಾಚಾರಗಳು ರಾಜಕೀಯ ಪಡಸಾಲೆಗಳಲ್ಲಿ ನಡೆಯುತ್ತಿದೆ. ಅಂದರೆ ಚುನಾವಣೆಯ ನಂತರ ಯಾರ ಜುಟ್ಟು ಯಾರ ಕೈಯಲ್ಲಿರುತ್ತದೋ ಯಾರಿಗೆ ಗೊತ್ತು?!

ಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಎಂದಿನಂತೆ ಯಾರು ತನ್ನ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಮೊದಲೇ ಹೇಳುವುದಿಲ್ಲ, ಇದರಿಂದ ಪಕ್ಷಕ್ಕೆ ಲಾಭವೂ ಇದೆ, ನಷ್ಟವೂ ಇದೆ. ಯಾಕೆಂದರೆ ಎಸ್.ಎಂ.ಕೃಷ್ಣ ನಾಯಕತ್ವ ವಹಿಸಿಕೊಂಡರೆ ಒಕ್ಕಲಿಗರು ಪ್ರಬಲವಾಗಿರುವ ಹಳೆ ಮೈಸೂರು ಪ್ರದೇಶದಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಕಾಂಗ್ರೆಸ್‌ಗೆ ಒಂದಿಷ್ಟು ಒಕ್ಕಲಿಗರ ಓಟುಗಳು ಸಿಗಬಹುದು. ಆದರೆ ಉತ್ತರ ಕರ್ನಾಟಕದಲ್ಲಿ ಕಾಂಗ್ರೆಸ್ ನೆಲ ಕಚ್ಚುತ್ತದೆ. ಈ ಮಧ್ಯೆ ಕಾಂಗ್ರೆಸ್ ನಾಯಕರೇ ಹೇಳುತ್ತಿರುವ ಪ್ರಕಾರ ಕೃಷ್ಣರನ್ನು ವಿದೇಶಾಂಗ ಸಚಿವ ಸ್ಥಾನದಿಂದ ಬಲವಂತವಾಗಿ ಕೆಳಗಿಳಿಸಿದ್ದರಿಂದ ಅವರನ್ನು ಮುಖ್ಯಮಂತ್ರಿ ಮಾಡುವ ಸಾಧ್ಯತೆ ಬಹಳ ಕಡಿಮೆ.

ವಾಸ್ತವವಾಗಿ ರಾಜ್ಯ ರಾಜಕೀಯದ ಚುಕ್ಕಾಣಿಯನ್ನು ಹಿಡಿಯಲು ಬೇಕಾದ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸುವ ತಾಕತ್ತುಳ್ಳವರು ಎಂದರೆ ಕಾಂಗ್ರೆಸ್‌ನಲ್ಲಿ ಕೃಷ್ಣ ಅವರೇ. ಆದರೆ ತನಗೆ ಮುಖ್ಯಮಂತ್ರಿ ಹುದ್ದೆ ಸಿಗುವುದಿಲ್ಲ ಎಂಬ ಕಾರಣಕ್ಕೆ ಕೃಷ್ಣ ಅವರು ಈ ಹಿಂದೆ ಆರ್ಥಿಕ ಸಂಪನ್ಮೂಲ ಕ್ರೋಢೀಕರಣದ ವಿಷಯದಲ್ಲಿ ತೋರಿಸಿದ್ದಷ್ಟು ಆಸಕ್ತಿಯನ್ನು ಈ ಬಾರಿ ತೋರಿಸಲಾರರು ಎಂದೇ ಎಲ್ಲರೂ ಮಾತನಾಡುತ್ತಿದ್ದಾರೆ. ಇದರರ್ಥ ಹಣದ ಕೊರತೆಯಿಂದಾಗಿಯೇ ಕಾಂಗ್ರೆಸ್ ಪಕ್ಷ ಖಂಡಿತವಾಗಿಯೂ ಕೆಲವು ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ.

ಆಡಳಿತಾರೂಢ ಬಿಜೆಪಿಯಲ್ಲೂ ಇಂತಹುದೇ ಒಂದು ವಿಚಿತ್ರ ಸನ್ನಿವೇಶ ಸೃಷ್ಟಿಯಾಗಿದೆ. ಬಿಜೆಪಿಯ ರಾಷ್ಟ್ರೀಯ ನಾಯಕರಾದ ಅನಂತ್‌ಕುಮಾರ್ ಅವರಿಗೆ ಚುನಾವಣೆಯ ಉಸ್ತುವಾರಿಯನ್ನು ನೀಡಿದರೆ, ಅದರ ಜೊತೆಗೆ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಅನಂತ್‌ಕುಮಾರ್ ಅವರಿಗೇ ಮುಖ್ಯಮಂತ್ರಿ ಸ್ಥಾನವನ್ನು ನೀಡುತ್ತೇವೆ ಎಂದು ಬಿಜೆಪಿ ಹೈಕಮಾಂಡ್ ಭರವಸೆ ಕೊಟ್ಟರೆ ಅನಂತ್‌ಕುಮಾರ್ ತನ್ನೆಲ್ಲ ಕಾಂಟ್ರಾಕ್ಟ್‌ಗಳನ್ನು ಬಳಸಿಕೊಂಡು ಹಣದ ಹೊಳೆ ಹರಿಸಬಲ್ಲರು. ಆದರೆ ರಾಜ್ಯದ ಬಹುತೇಕ ಬಿಜೆಪಿ ನಾಯಕರು ಅನಂತ್‌ಕುಮಾರ್‌ಗೆ ಪಕ್ಷದ ನಾಯಕತ್ವ ನೀಡುವುದನ್ನು ಖಂಡಿತವಾಗಿಯೂ ಒಪ್ಪುವುದಿಲ್ಲ, ಇದು ದೆಹಲಿಯಲ್ಲಿರುವ ಬಿಜೆಪಿ ನಾಯಕರಿಗೂ ಗೊತ್ತಿದೆ.

ಒಂದು ವೇಳೆ ರಾಜ್ಯ ನಾಯಕರ ಮನವೊಲಿಸಿ ಅನಂತ್‌ಕುಮಾರ್‌ಗೆ ನಾಯಕತ್ವದ ಜವಾಬ್ದಾರಿ ನೀಡಿದರೂ ನಾಳೆ ಅಧಿಕಾರಕ್ಕೇರಲು ಬೇಕಾದ ಅಗತ್ಯ ಸೀಟುಗಳು ಬರದಿದ್ದಾಗ ಯಾವ ಕಾರಣಕ್ಕೂ ಜೆಡಿಎಸ್‌ನ ಹೈಕಮಾಂಡ್ ದೇವೇಗೌಡರು ಅನಂತ್‌ಕುಮಾರ್ ನಾಯಕತ್ವದ ಬಿಜೆಪಿಗೆ ಬೆಂಬಲವನ್ನು ನೀಡಲಾರರು ಎಂಬುದು ಬಿಜೆಪಿಯ ಚಿಂತೆಯಾಗಿದೆ.

ಇದು ರಾಷ್ಟ್ರೀಯ ಪಕ್ಷಗಳ ಚಿಂತೆಯಾದರೆ ಪ್ರಾದೇಶಿಕ ಪಕ್ಷಗಳು ಇಂತಹ ಯಾವ ಯೋಚನೆಗಳೂ ಇಲ್ಲದೆ ಮುನ್ನುಗ್ಗುತ್ತಿವೆ. ಹಣಬಲದಿಂದಲೇ ರಾಜ್ಯವನ್ನು ಆಳಲು ಹೊರಟಿರುವ ಯಡಿಯೂರಪ್ಪ ಬಹುತೇಕ ಗೆಲ್ಲಬಹುದಾದ ಎಲ್ಲ ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಯ ಪರವಾಗಿ ಹಣದ ಹೊಳೆಯನ್ನೇ ಹರಿಸಲು ಸಜ್ಜಾಗಿದ್ದಾರೆ. ಅದೇರೀತಿ ಒಂದೆರಡು ಜಿಲ್ಲೆಗಳಲ್ಲಿ ತನ್ನ ಸಾಮರ್ಥ್ಯವನ್ನು ತೋರಿಸಿ ರಾಜ್ಯ ಸರ್ಕಾರದ ಚಾಲವನ್ನು ತನ್ನ ಕೈಯಲ್ಲಿಟ್ಟುಕೊಳ್ಳಲು ಹವಣಿಸುತ್ತಿರುವ ಗಣಿ ಕಳ್ಳ ಶ್ರೀರಾಮುಲು ಕೂಡ ಪ್ರತಿ ಕ್ಷೇತ್ರದಲ್ಲಿ ಹಣವನ್ನು ಸುರಿಯಲು ಸಿದ್ಧನಿದ್ದಾನೆ.

ಈ ಮಧ್ಯೆ ಈಗ ಪ್ರಾದೇಶಿಕ ಪಕ್ಷದ ಲೆವೆಲ್‌ಗೆ ಬಂದಿರುವ ಜೆಡಿಎಸ್‌ನ ನಾಯಕ ಕುಮಾರಸ್ವಾಮಿ ಕೂಡ ಎಲ್ಲೆಲ್ಲಿ ತಮ್ಮ ಪಕ್ಷದ ಅಭ್ಯರ್ಥಿ ಜಯಗಳಿಸುವ ಸಾಧ್ಯತೆಯಿದೆಯೋ ಅಲ್ಲೆಲ್ಲಾ ಖಂಡಿತವಾಗಿಯೂ ಯಾವುದೇ ಹಿಂಜರಿಕೆಯಿಲ್ಲದೆ ಸಿಕ್ಕಾಪಟ್ಟೆ ಹಣವನ್ನು ಖರ್ಚು ಮಾಡುತ್ತಾರೆ.

ಅಂದರೆ, ರಾಷ್ಟ್ರೀಯ ಪಕ್ಷಗಳ ನೇತಾರರು ಮುಂದಿನ ಚುನಾವಣೆಯ ಸಂದರ್ಭದಲ್ಲಿ ತಮ್ಮ ಪಕ್ಷಗಳ ಮುಖ್ಯಮಂತ್ರಿ ಅಭ್ಯರ್ಥಿಗಳನ್ನು ಪ್ರಕಟಿಸದಿದ್ದರೆ ಅದು ಖಂಡಿತವಾಗಿಯೂ ಒಂದು ರೀತಿಯಲ್ಲಿ 'ಆತ್ಮಹತ್ಯೆ' ಮಾಡಿಕೊಂಡಂತಾಗುತ್ತದೆ. ಈ ಕುರಿತು ರಾಷ್ಟ್ರೀಯ ಪಕ್ಷಗಳ ನೇತಾರರ ನಿರ್ಲಕ್ಷ್ಯ ಮತ್ತು ಅಸಡ್ಡೆಯಿಂದಾಗಿಯೇ ಪ್ರಾದೇಶಿಕ ಪಕ್ಷಗಳ ಬೆಳವಣಿಗೆಗೆ ಉತ್ತೇಜನ ನೀಡಿದಂತಾಗುತ್ತದೆ. ಆದರೆ ರಾಷ್ಟ್ರೀಯ ಪಕ್ಷಗಳಿಗೆ ಅದು ಸುಲಭಸಾಧ್ಯವಲ್ಲ, ಕಾಂಗ್ರೆಸ್ ಪಕ್ಷದಲ್ಲಂತೂ ಕನಿಷ್ಠವೆಂದರೂ ಒಂದು ದಜನ್ ಮುಖ್ಯಮಂತ್ರಿ ಆಕಾಂಕ್ಷಿಗಳಿದ್ದಾರೆ. ಅವರಲ್ಲಿ ಯಾರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬುದು ನಿಜಕ್ಕೂ ಹೈಕಮಾಂಡ್ ಪಾಲಿಗೆ ಜಟಿಲವಾದ ಸಮಸ್ಯೆ.

ಈಗ ಕಾಂಗ್ರೆಸ್ ಪಕ್ಷದಲ್ಲೇ ಒಂದು ಜೋಕ್ ಚಾಲ್ತಿಯಲ್ಲಿದೆ. ಅದೇನೆಂದರೆ ಆ ಪಕ್ಷದಲ್ಲಿ ಕಾರ್ಯಕರ್ತರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮುಖ್ಯಮಂತ್ರಿ ಆಕಾಂಕ್ಷಿಗಳೇ ಇದ್ದಾರೆ ಎಂಬುದು. ಉದಾಹರಣೆಗೆ, ಮುಖ್ಯಮಂತ್ರಿ ಆಕಾಂಕ್ಷಿಗಳ ಪಟ್ಟಿಯನ್ನೊಮ್ಮೆ ಗಮನಿಸಿ: ಸಿದ್ದರಾಮಯ್ಯ, ಎಸ್.ಎಂ.ಕೃಷ್ಣ, ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ, ಧರಂಸಿಂಗ್, ವೀರಪ್ಪ ಮೊಯ್ಲಿ, ಶಾಮನೂರು ಶಿವಶಂಕರಪ್ಪ, ಆಸ್ಕರ್ ಫರ್ನಾಂಡಿಸ್, ಬಿ.ಕೆ. ಹರಿಪ್ರಸಾದ್ ... ಹೀಗೆ ದೊಡ್ಡ ಪಟ್ಟಿಯೇ ಇದೆ. ಆದರೆ ಕಾಂಗ್ರೆಸ್ ನಾಯಕರು ಇತ್ತೀಚೆಗೆ ಖಾಸಗಿಯಾಗಿ ಮಾತನಾಡುವಾಗ ಹೇಳುವ ಮಾತೇನೆಂದರೆ, ಬಹುಶಃ ಚುನಾವಣೆ ಆದನಂತರ ಹೈಕಮಾಂಡ್ ಸಿದ್ದರಾಮಯ್ಯ ಅಥವಾ ಮಲ್ಲಿಕಾರ್ಜುನ ಖರ್ಗೆ ಇವರಿಬ್ಬರಲ್ಲಿ ಒಬ್ಬರನ್ನು ಮುಖ್ಯಮಂತ್ರಿ ಮಾಡುವ ಸಾಧ್ಯತೆಯಿದೆಯಂತೆ.


ಈಗ ಬಿಜೆಪಿಯಲ್ಲೂ ಮುಖ್ಯಮಂತ್ರಿ ಆಕಾಂಕ್ಷಿಗಳಿಗೆ ಬರವೇನಿಲ್ಲ. ಅನಂತ್‌ಕುಮಾರ್, ಈಶ್ವರಪ್ಪ ಸದಾನಂದ ಗೌಡ, ಜಗದೀಶ್ ಶೆಟ್ಟರ್, ಪ್ರಹ್ಲಾದ್ ಜೋಷಿ, ಆರ್. ಅಶೋಕ್, ಶೋಭಾ ಕರಂದ್ಲಾಜೆ ಇತ್ಯಾದಿಗಳು ಇದ್ದಾರೆ. ಆದರೆ ಅವರ್‍ಯಾರಿಗೂ ಮತ್ತೆ ಬಿಜೆಪಿ ಅಧಿಕಾರದ ಹತ್ತಿರವೂ ಸುಳಿಯುವುದಿಲ್ಲ ಎಂದು ಗೊತ್ತಿರುವುದರಿಂದ ಅವರ ನಡುವಿನ ಕಿತ್ತಾಟ ಅಷ್ಟು ಪ್ರಬಲವಾಗಿ ನಡೆಯುತ್ತಿಲ್ಲ, ಅಷ್ಟೇ.

ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ತಮ್ಮ ಹೈಕಮಾಂಡ್ ನಿಲುವಿನಿಂದಾಗಿ ವಿಧಾನ ಸಭಾ ಚುನಾವಣೆಯಲ್ಲಿ ಕೆಲವು ಕ್ಷೇತ್ರಗಳಲ್ಲಿ ಸೋಲು ಕಾಣುವ ಸಾಧ್ಯತೆಯಿದೆ ಎಂಬ ಕಾರಣಕ್ಕಾಗಿಯೇ ಲೋಕಲ್ ಪಕ್ಷಗಳ ಹೈಕಮಾಂಡ್‌ಗಳಾದ ಯಡಿಯೂರಪ್ಪ, ಕುಮಾರಸ್ವಾಮಿ ಮತ್ತು ಶ್ರೀರಾಮುಲು ತಮ್ಮದೇ ಆದ ರಾಜಕೀಯ ಲೆಕ್ಕಾಚಾರ ಮತ್ತು ತಂತ್ರಗಾರಿಕೆಯಲ್ಲಿ ಸಂಪೂರ್ಣವಾಗಿ ಮುಳುಗಿಹೋಗಿದ್ದಾರೆ. ಅತ್ತ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಯಾವ ಪಕ್ಷ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೆ ಎಂಬ ಸ್ಪರ್ಧೆ ನಡೆಯುತ್ತಿದ್ದರೆ, ಇತ್ತ ಯಡಿಯೂರಪ್ಪ, ಕುಮಾರಸ್ವಾಮಿ ಮತ್ತು ಶ್ರೀರಾಮುಲು ನಡುವೆಯೂ ಅಂತಹುದೇ ಒಂದು ಸ್ಪರ್ಧೆ ಶುರುವಾಗಿದೆ. ಈಗಾಗಲೇ ಯಡ್ಡಿ ಕುಮಾರಸ್ವಾಮಿ ಮತ್ತು ಶ್ರೀರಾಮುಲು ತಮ್ಮ ಹಣಬಲ ಮತ್ತು ಜಾತಿಬಲವನ್ನು ಉಪಯೋಗಿಸಿಕೊಂಡು ಕನಿಷ್ಟವೆಂದರೂ 30 ರಿಂದ 40 ಸೀಟ್‌ಗಳನ್ನು ಗೆಲ್ಲುವ ಉಮೇದಿನಲ್ಲಿದ್ದಾರೆ. ಆ ಮೂಲಕ ಅಧಿಕಾರವನ್ನು ಚಲಾಯಿಸುವ ರಿಮೋಟ್ ಕಂಟ್ರೋಲ್‌ಗಳಾಗಲು ಪ್ರಯತ್ನಿಸುತ್ತಿದ್ದಾರೆ.

ಒಂದು ಮಾತಂತೂ ನಿಜ, ಯಡಿಯೂರಪ್ಪ ಬಿಜೆಪಿಯಿಂದ ಹೊರಬರುವ ಮೂಲಕ ಆ ಪಕ್ಷ ಕುಸಿದು ಬೀಳುವಂತೆ ಮಾಡಲಿದ್ದಾರೆ. ಆ ಕಾರಣಕ್ಕೆ ಕಾಂಗ್ರೆಸ್ ಹೈಕಮಾಂಡ್ "ಬಿಜೆಪಿಯನ್ನು ಸೋಲಿಸುವ ನಮ್ಮಿಬ್ಬರ ಉದ್ದೇಶ ಈಡೇರುತ್ತದೆ. ಆಗ ನಾವಿಬ್ಬರೂ ಜೊತೆಗೂಡಬಹುದು ಎಂದು ಭರವಸೆ ನೀಡಿದೆ" ಎಂದು ಯಡ್ಡಿಯ ಹಿಂಬಾಲಕರೇ ಹೇಳುತ್ತಿದ್ದಾರೆ. ಅಷ್ಟೇ ಅಲ್ಲ ಯಡ್ಡಿ ವಿರುದ್ಧ ಇರುವ ಸಿಬಿಐ ಕೇಸ್‌ಗಳನ್ನು ದುರ್ಬಲಗೊಳಿಸುವ ಆಶ್ವಾಸನೆಯನ್ನು ಕಾಂಗ್ರೆಸ್ ನಾಯಕರು ಯಡ್ಡಿಗೆ ನೀಡಿದ್ದಾರಂತೆ.

ಇಲ್ಲಿ ಇನ್ನೊಂದು ಕುತೂಹಲ ಸಂಗತಿ ಇದೆ. ಕಾಂಗ್ರೆಸ್ ಪಕ್ಷದ ಅನಭಿಷಿಕ್ತ ರಾಣಿ ಸೋನಿಯಾ ಗಾಂಧಿಯವರ ಹುಟ್ಟುಹಬ್ಬದ ದಿನವಾದ ಡಿಸೆಂಬರ್ 9 ರಂದೇ ಯಡಿಯೂರಪ್ಪ ತನ್ನ ಹೊಸ ಕರ್ನಾಟಕ ಜನತಾ ಪಕ್ಷವನ್ನು ಉದ್ಘಾಟಿಸುತ್ತಿದ್ದಾರೆ! ತನ್ನ 40 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಸಾವರ್ಕರ್, ಗೋಲ್ವಾಲ್ಕರ್, ದೀನ ದಯಾಳು, ವಾಜಪೇಯಿ ತರಹದ ಬಿ... 'ವೀರರ' ಹೆಸರುಗಳನ್ನೇ ಹೆಚ್ಚೆಹೆಚ್ಚಾಗಿ ಹೇಳುತ್ತಾ ಬಂದಿದ್ದ ಯಡ್ಡಿ ತನ್ನ ಹೊಸ ಪಕ್ಷದ ಸ್ಥಾಪನೆಗೆ ಸೋನಿಯಾ ಗಾಂಧಿಯವರ ಹುಟ್ಟುಹಬ್ಬದ ದಿನವನ್ನು ಆಯ್ಕೆ ಮಾಡಿರುವುದು ವಿಚಿತ್ರವಾಗಿ ಕಾಣಿಸುವುದಿಲ್ಲವೇ?

■ ಸದಾಶಿವ ಶೆಣೈ



ಧಣಿ ಶಾಮನೂರರಿಗೆ ಬೇಕಿತ್ತಾ ಈ ಸನ್ಮಾನ?


ದಾವಣಗೆರೆಯ ಧಣಿ ಶಾಮನೂರು ಶಿವಶಂಕರಪ್ಪನವರಿಗೀಗ ಬರೋಬ್ಬರಿ 84 ವರ್ಷ. ಅವರ ರಾಜಕೀಯ ಬದುಕಿಗೂ ಈಗ ಅಜಮಾಸು ಐವತ್ತು ವರ್ಷ. ಹಲವು ದಶಕಗಳಿಂದ ಶಾಮನೂರರು ಕಾಂಗ್ರೆಸ್ ಪಕ್ಷದ ಕಾಯಂ ಖಜಾಂಚಿ ಆಗಿರುವವರು. ದಾವಣಗೆರೆ ನಗರ ಸಭಾಸದಸ್ಯ - ಅಧ್ಯಕ್ಷ - ಶಾಸಕ - ಸಂಸದ ಹೀಗೆ ಹಂತ-ಹಂತವಾಗಿ ರಾಜಕೀಯ ಮೆಟ್ಟಿಲುಗಳನ್ನು ಏರಿದ ಶಾಮನೂರು ಅನುಭವಿ ರಾಜಕಾರಣಿಯೂ ಹೌದು. ಆದರೆ ಕಾಂಗ್ರೆಸ್ ಪಕ್ಷ ಅವರನ್ನು ಒಂದು ರೀತಿಯಲ್ಲಿ ನಿರ್ಲಕ್ಷಿಸುತ್ತಾ ಬಂದಿದೆ. ಶಾಮನೂರರಿಗೆ ಹೋಲಿಸಿದರೆ ನಿನ್ನೆಮೊನ್ನೆ ರಾಜಕೀಯಕ್ಕೆ ಬಂದ ಡಿ.ಕೆ.ಶಿವಕುಮಾರ್ ಮತ್ತು ಸ್ವತಃ ಅವರ ಮಗ ಬಸವರಾಜನ್ ಕೂಡ ಮಂತ್ರಿ ಪದವಿಗಳನ್ನು ಅಲಂಕರಿಸಿದರೇ ಹೊರತು ಒಮ್ಮೆಯೂ ಶಾಮನೂರರಿಗೆ ಕೇಂದ್ರದಲ್ಲಾಗಲಿ, ರಾಜ್ಯದಲ್ಲಾಗಲಿ ಸಚಿವ ಸ್ಥಾನ ಸಿಗಲೇ ಇಲ್ಲ. ಈ ನ್ಯೂನತೆಯನ್ನು ಹೇಗದರೂ ನೀಗಿಸಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಎಂದೂ ಯೋಚಿಸಲಿಲ್ಲ.

ಒಂದೆಡೆ ಕಾಂಗ್ರೆಸ್ ಪಕ್ಷದಿಂದಲೇ ಇಂತಹ ಅವಮಾನ, ಇನ್ನೊಂದೆಡೆ ಜಾತಿರಾಜಕಾರಣವನ್ನು ಮಾಡುತ್ತಾ ಅಧಿಕಾರವನ್ನು ಗಿಟ್ಟಿಸಿದ ಯಡಿಯೂರಪ್ಪನ ಕರಾಮತ್ತು ಇವೆರಡೂ ಸೇರಿ ಶಾಮನೂರರು ಕಳೆದ ಐದು ದಶಕಗಳಿಂದ ಪಾಲಿಸಿಕೊಂಡು ಬಂದಿರುವ ಜಾತ್ಯತೀತ ರಾಜಕಾರಣದ ದಿಕ್ಕನ್ನೇ ಬದಲಿಸುವಂತೆ ಮಾಡಿವೆ.

ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಆತನ ಕುರ್ಚಿ ಅಲುಗಾಡಿದಾಗಲೆಲ್ಲ ಆತನ ನೆರವಿಗೆ ಧಾವಿಸುತ್ತಿದ್ದದ್ದು ಲಿಂಗಾಯತ ಸ್ವಾಮಿಗಳು. ಲಿಂಗಾಯತ ಮಠಗಳಿಗೆ ಸರಕಾರದ ತಿಜೋರಿಯಿಂದ ಯಡ್ಡಿ ಕೋಟಿಗಟ್ಟಲೆ ಹಣ ನೀಡಿದ್ದು ಅವರ ಈ ವರ್ತನೆಗೆ ಕಾರಣವಾಗಿತ್ತು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ, ಸ್ವಾಮಿಗಳೇ ಹೀಗೆ ಮಾಡಿದ ನಂತರ ಸಾಮಾನ್ಯ ಲಿಂಗಾಯತರೂ ಯಡ್ಡಿ ಪರ ದನಿ ಎತ್ತಲಾರಂಭಿಸಿದರು. ಯಡ್ಡಿಯ ಈ 'ಜಾತಿ ಫಾರ್ಮುಲ' ಯಾವಾಗ ಆತನ ಕೈಹಿಡಿಯಿತೋ ಆಗ ಶಾಮನೂರರೂ ಜಾತಿರಾಜಕೀಯದ ಲೆಕ್ಕಾಚಾರಗಳನ್ನು ಹಾಕಲಾರಂಭಿಸಿ ಕಾಂಗ್ರೆಸ್ ಪಕ್ಷದಲ್ಲಿ ತಳಮಳ ಹುಟ್ಟುಹಾಕಿದರು. ಪಕ್ಷದ ರಾಜ್ಯಾಧ್ಯಕ್ಷ ಪರಮೇಶ್ವರರ ವಿರುದ್ಧ ಶಾಸಕರು, ಮಾಜಿ ಶಾಸಕರು, ನಾಯಕರು ಇತರರನ್ನು ಸೇರಿಸಿದರು. ಪರಮೇಶ್ವರ್ ಬದಲಾಗಿ ರಾಜ್ಯಾಧ್ಯಕ್ಷ ಸ್ಥಾನವನ್ನು ಲಿಂಗಾಯತರಿಗೆ ನೀಡಿದರೆ - ಅಂದರೆ ತನಗೆ - ರಾಜ್ಯದಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂದು ವಾದಿಸಲಾರಂಭಿಸಿದರು. ಜೊತೆಗೆ ನಾಲ್ಕೈದು ಬಾರಿ ಲಿಂಗಾಯತರ ಗುಂಪುಗಳನ್ನು ಕಟ್ಟಿಕೊಂಡು ದೆಹಲಿಯಲ್ಲಿರುವ ಕಾಂಗ್ರೆಸ್‌ನ ದೊರೆಸಾನಿ ಸೋನಿಯಾ ಗಾಂಧಿಯನ್ನು ಭೇಟಿಯಾಗಲು ಪ್ರಯತ್ನಿಸಿದರು. ಆದರೆ ಅವರಿಗೆ ಸೋನಿಯಾ ಗಾಂಧಿಯ ದರ್ಶನದ ಭಾಗ್ಯದ ಬದಲಾಗಿ ಆಕೆಯ ನಿಕಟವರ್ತಿ ಅಹ್ಮದ್ ಪಟೇಲರಿಂದ ಮಂಗಳಾರತಿ ಎತ್ತಿಸಿಕೊಂಡರು. ಅಷ್ಟೇ ಅಲ್ಲ ಶಾಮನೂರರಿಗೆ ಅಧ್ಯಕ್ಷ ಸ್ಥಾನ ಕೊಡುವ ಬದಲಾಗಿ ಸೋನಿಯಾ ಗಾಂಧಿ ವಿದೇಶಾಂಗ ಮಂತ್ರಿ ಎಸ್.ಎಂ.ಕೃಷ್ಣರಿಂದ ರಾಜೀನಾಮೆ ಪಡೆದು ಆತನನ್ನೂ ಕರ್ನಾಟಕಕ್ಕೆ ಅಟ್ಟಿದರು. ಆಗ ಶಾಮನೂರರು ತಮ್ಮ ಲಿಂಗಾಯತ ಶಕ್ತಿಯನ್ನು ಪ್ರದರ್ಶಿಸಲು ಮುಂದಾದರು.

ಎರಡು ತಿಂಗಳ ಹಿಂದೆ ಶಾಮನೂರರು ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಆಯ್ಕೆಯಾದದ್ದು ಈಗ ಇತಿಹಾಸ. ಆದರೆ ಆ ಸ್ಥಾನವನ್ನು ಪಡೆಯಲು ಅವರು ತಮ್ಮ ಕೈಯಿಂದಲೇ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡಿದರು ಎಂಬ ಮಾತು ಕೇಳಿಬರುತ್ತಿದೆ. ಇದೂ ಸಾಲದೆಂಬಂತೆ ಮಹಾಸಭಾದ ಅಧ್ಯಕ್ಷರಾಗಿದ್ದಕ್ಕೆ ನಾಗರಿಕ ಸನ್ಮಾನ ಎಂಬ ಯೋಜನೆ ಹಾಕಿಕೊಂಡರು. ಶಾಮನೂರರ ಈ ಯೋಜನೆಗೆ ನೀರೆರೆದವರು ಅಥಣಿ ವೀರಣ್ಣ ಮತ್ತು ಎ.ಸಿ.ಜಯಣ್ಣ. ಈ ಪುಣ್ಯಾತ್ಮರು ಐವತ್ತು ವರ್ಷಗಳಿಂದ ಜಾತ್ಯತೀತರಾಗಿ ಶಾಮನೂರರು ಗಳಿಸಿದ್ದ ಕೀರ್ತಿಗೆ ಅಮಂಗಲವಾಗುವಂತಹ ಕೆಲಸ ಮಾಡಲಾರಂಭಿಸಿದರು. ಜಾತಿ ಜನರನ್ನು ಸೇರಿಸಿ ಜಾತ್ಯತೀತ ಸನ್ಮಾನ ಎಂದು ಬಿಂಬಿಸಲು ಯತ್ನಿಸಿದರು. ಯಾಕೆಂದರೆ ಯಾವುದೇ ಜಾತಿ ಸಂಘಟನೆಯ ಅಧ್ಯಕ್ಷರಿಗೆ ಜಾತ್ಯತೀತ ಸನ್ಮಾನವೆಂಬುದೇ ಹಾಸ್ಯಾಸ್ಪದ.

ಶಾಮನೂರರ ನಾಗರಿಕ ಸನ್ಮಾನ ಸಮಾರಂಭದಲ್ಲಿ 28 ವಿವಿಧ ಜಾತಿಗಳ ಸ್ವಯಂಘೋಷಿತ ಜಗದ್ಗುರುಗಳು ಪವಡಿಸಿದ್ದರು. ಜೊತೆಗೆ ಒಬ್ಬ ಕ್ರಿಶ್ಚಿಯನ್ನರ ಫಾದರ್ ಮತ್ತು ಮುಸಲ್ಮಾನರ ಮೌಲ್ವಿ ಕೂಡ ಇದ್ದರು. ಮುಖ್ಯವಾಗಿ ವೀರಶೈವ ಮಹಾಸಭಾದ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ, ಗೊ.ರು.ಚನ್ನಬಸಪ್ಪ ಅಲ್ಲದೆ ಇತರೆ ಹನ್ನೊಂದು ಜನ ಮುಖ್ಯ ಅತಿಥಿಗಳು ಇದ್ದರು.



ಈ ಸಮಾರಂಭಕ್ಕೆ 25 ಸಾವಿರ ಬರುತ್ತಾರೆ ಎಂದು ಹೇಳಲಾಗಿತ್ತು. ಆದರೆ ವಾಸ್ತವವಾಗಿ ಬಂದದ್ದು ಸುಮಾರು ಹತ್ತು ಸಾವಿರ ಮಂದಿ ಮಾತ್ರ. ಪರಿಣಾಮವಾಗಿ ಅಂದಾಜು 35 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಲಂಕೃತಗೊಂಡಿದ್ದ ಬೃಹತ್ ವೇದಿಕೆಯ ಮುಂದೆ ಜನ ಇದ್ದಂತೆ ಕಾಣಿಸುತ್ತಿರಲಿಲ್ಲ.

ವೇದಿಕೆಯ ಮೇಲಿದ್ದವರೆಲ್ಲ ಸಮಾರಂಭದುದ್ದಕ್ಕೂ ಶಾಮನೂರರ ಗುಣಗಾನ ಮಾಡಿದರು. ಗೊ.ರು.ಚನ್ನಬಸಪ್ಪ ಮತ್ತು ಮುಸಲ್ಮಾನರ ಧರ್ಮ ಗುರು ಇಬ್ರಾಹಿಂ ಮಾತ್ರ 12ನೇ ಶತಮಾನದ ಶರಣರ ಪರಂಪರೆ, ಕಾಯಕ, ಮಾನವ ಧರ್ಮ, ಲಿಂಗಾಯತ ಧರ್ಮದ ಮಾನವೀಯ ಮೌಲ್ಯಗಳನ್ನು ಸಭಿಕರಿಗೆ ಮನಮುಟ್ಟುವಂತೆ ವಿವರಿಸಿದರು.

ಸಿರಿಗೆರೆಯ ಸಾಧು ಲಿಂಗಾಯತ ಜಗದ್ಗುರುಗಳು ಈ ಸಮಾರಂಭದ ಹಿಂದಿದ್ದ ಮರ್ಮವನ್ನು ಬಹಿರಂಗಪಡಿಸಿಬಿಟ್ಟರು. ಬಿಜೆಪಿಯ ತರಕಾರಿ ಮಂತ್ರಿ ರವೀಂದ್ರನಾಥ ಮತ್ತು ಚೆಡ್ಡಿ ಸಂಸದ ಸಿದ್ದೇಶ್ವರ್ ಇವರಿಬ್ಬರೂ ಜಾತ್ಯತೀತ ಕಾಂಗ್ರೆಸ್‌ನ ಶಾಮನೂರರ ಈ ಸನ್ಮಾನ ಸಮಾರಂಭಕ್ಕೆ ದೇಣಿಗೆ ನೀಡಿದ್ದಾರೆ ಎಂದುಬಿಟ್ಟರು ಸ್ವಾಮಿಗಳು. ಅಷ್ಟೇ ಅಲ್ಲ, ಹಣ ಕೊಡಬಹುದಾದವರ ಕಡೆಯಿಂದಲೂ ದುಡ್ಡು ಬಂದಿದೆ ಎಂದರು.

ಇದು ಶಾಮನೂರರಿಗೆ ಬೇಕಿತ್ತಾ? ದಾವಣಗೆರೆ ಜಿಲ್ಲೆಯಲ್ಲಿ ಇಂಥಾ ಹಲವಾರು ಸಮಾರಂಭಗಳಿಗೆ ಶಾಮನೂರರೇ ಹಣ ಕೊಟ್ಟಿದ್ದಾರೆ. ಮಾತ್ರವಲ್ಲ ಅವರು ಎಂದೂ ಯಾರಿಂದಲೂ ಬಿಡಿಗಾಸು ಪಡೆದವರಲ್ಲ, ಆದರೂ ಹೀಗೇಕಾಯಿತು? ಈ ಕುರಿತು ಎ.ಸಿ.ಜಯಣ್ಣ ಮತ್ತು ವೀರಣ್ಣನನ್ನೆ ವಿಚಾರಣೆಗೊಳಪಡಿಸಬೇಕು. ಜಗದ್ಗುರುಗಳ ಮಾತುಗಳು ಶಾಮನೂರರಿಗೆ ಕಿರಿಕಿರಿ ಹುಟ್ಟಿಸಿದ್ದು ಸುಳ್ಳಲ್ಲ.

ಇನ್ನು ಸಮಾರಂಭಕ್ಕೆ ಸಾರ್ವಜನಿಕ ಸನ್ಮಾನದ ಹೆಸರಲ್ಲಿ ಪ್ರಚಾರ ಮಾಡಲಾಗಿತ್ತು, ಅಂದು ವೇದಿಕೆಯಲ್ಲಿ ಮಾತ್ರ ಸಕಲ ಜಾತಿಯ ಜಗದ್ಗುರುಗಳಿದ್ದರೇ ಹೊರತು ಸಭಿಕರಲ್ಲಿ ಜಾತ್ಯತೀತ ವಾಸನೆ ಇರಲಿಲ್ಲ.

ಈ ಸಮಾರಂಭವನ್ನು ಆಯೋಜಿಸಿದ್ದ ಶಾಮನೂರು ಶಿವಶಂಕರಪ್ಪ ಮತ್ತವರ ಹಿಂಬಾಲಕರ ಉದ್ದೇಶವೇ ಬೇರೆಯಾಗಿತ್ತು. ಯಾವಾಗ ಶಾಮನೂರರ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರಾಗುವ ಮಹದಾಸೆಗೆ ಪಾರ್ಟಿಯ ಹೈಕಮಾಂಡ್ ಕ್ಯಾರೇ ಅನ್ನಲಿಲ್ಲವೋ ಆಗಲೇ ಈ ಸಾರ್ವಜನಿಕ ಸಮಾರಂಭದ ಐಡಿಯ ಜನ್ಮ ತಾಳಿತ್ತು. ಇಂತಹ ಬೃಹತ್ ಸಮಾವೇಶ ಮಾಡಿ ಲಕ್ಷಾಂತರ ಜನರನ್ನು ಸೇರಿಸಿದರೆ, ಕರ್ನಾಟಕ ಮತ್ತು ದೆಹಲಿಯಲ್ಲಿರುವ ಕಾಂಗ್ರೆಸ್ ನಾಯಕರಿಗೆ ಶಾಮನೂರರ ತಾಕತ್ತು ತೋರಿಸಿದಂತಾಗುತ್ತಿತ್ತು.

ಆದರೆ ಆದದ್ದೇ ಬೇರೆ. ಈ ಸಮಾರಂಭದಿಂದ ಶಾಮನೂರರ ಯಾವ ಉದ್ದೇಶವೂ ಈಡೇರಲಿಲ್ಲ, ಬದಲಾಗಿ ಅವರಿಗೆ ಜಾರಿ ರಾಜಕಾರಣಿಯ ಪಟ್ಟ ಸಿಕ್ಕಿತು.

ಅಂದಹಾಗೆ, ಈ ನಿರರ್ಥಕ ಸಮಾರಂಭಕ್ಕೆ ಖರ್ಚಾದದ್ದು ಕೇವಲ 1.5 ಕೋಟಿ ರೂಪಾಯಿಗಳು ಮಾತ್ರ?!

■ ವರದಿಗಾರ

ಕಾರ್ನಾಡ್, ಅನಂತಮೂರ್ತಿ ಕೃತಿಗಳನ್ನು ಓದಬಾರದಂತಲ್ಲಾ

ಥೂತ್ತೇರಿ

ಬೂಹೂ

ಅನಂತಮೂರ್ತಿ ಮತ್ತು ಗಿರೀಶ್ ಕಾರ್ನಾಡರ ಕೃತಿಗಳನ್ನು ಓದಬಾರದು ಎಂಬ ಫತ್ವಾ ರಾಷ್ಟ್ರೋತ್ಥಾನ ಬಳಗದ ಸಾಹಿತಿಯೊಬ್ಬನಿಂದ ಹೊರಬಿದ್ದಿದೆಯಂತಲ್ಲಾ. ಅನಂತಮೂರ್ತಿಯವರ ಸಾಹಿತ್ಯವನ್ನು ಓದಿ, ಜೀರ್ಣಿಸಿಕೊಂಡು, ಗಿರೀಶ್ ಕಾರ್ನಾಡರ ನಾಟಕಗಳನ್ನು ಆಡಿ ಅರಗಿಸಿಕೊಂಡು ಆರಾಮವಾಗಿರುವ ಕಾಲದಲ್ಲಿ ಇವನಾರಪ್ಪಾ ಎಂದು ಹುಡುಕಬೇಕೆನಿಸಿತಲ್ಲಾ. ಇಂತ ಅಸಂಬದ್ಧ ಫತ್ವಾ ಹೊರಡಿಸಿದವನು ಮೂರು ದಶಕದ ಹಿಂದೆ ಬೆಲ್ಜಿಯಂಗೆ ಹೋಗಿ ಹಿಂದೂ ಧರ್ಮವನ್ನು ಹಿಗ್ಗಾಮುಗ್ಗಾ ಓದಿ, ಅದನ್ನು ಅರಗಿಸಿಕೊಳ್ಳಲಾಗದೆ ಅಜೀರ್ಣಗೊಂಡು, ಕಡೆಗೆ ಕುವೆಂಪು ವಿಶ್ವವಿದ್ಯಾನಿಲಯದ ಹತ್ತಿರ ಬಂದು ಊಸು ಬಿಡುತ್ತಿರುವ ಬಾಲಗಂಗಾಧರನೆಂಬ ಬ್ರಾಹ್ಮಣನೆಂಬುದು ಪತ್ತೆಯಾಯ್ತಲ್ಲಾ. ನೋಡಲು ಥೇಟ್ ರಾಘವೇಂದ್ರ ಮಠದ ಆಡಳಿತಾಧಿಕಾರಿಯಂತೆ ಕಾಣುವ ಈತ, ತಾನೆಷ್ಟೇ ಜಾತ್ಯತೀತನೆಂದು ಘೋಷಿಸಿಕೊಂಡರೂ ಕಡೆಗೂ ಬಂದು ಸೇರಿಕೊಂಡಿದ್ದು ರಾಷ್ಟ್ರೋತ್ಥಾನ ಬಳಗವನ್ನಂತಲ್ಲಾ, ಥೂತ್ತೇರಿ!

****


ಇದ್ದಕ್ಕಿದ್ದಂತೆ ಬೆಲ್ಜಿಯಂನಿಂದ ಬಂದು, ಹೆಗ್ಗೋಡಿನ ಅಗ್ರಹಾರದಲ್ಲಿ ಕಾಣಿಸಿಕೊಂಡ ಈತನ ವಾದ ವೈಖರಿಗೆ ಅನಂತಮೂರ್ತಿಯಂತಹ ಘಟಾನುಘಟಿಗಳೇ ಅಲ್ಲಾಡಿಹೋದರಂತಲ್ಲಾ. ಇದನ್ನು ಕಣ್ಣಾರೆ ಕಂಡ, ಈಗಾಗಲೇ ಒಂದಾಗಿರುವ ಲಿಂಗಾಯತ ಮತ್ತು ಬ್ರಾಹ್ಮಣ ವಿದ್ವಾಂಸರು ಈತನನ್ನು ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಕರೆದುಕೊಂಡು ಬಂದರಂತಲ್ಲಾ. "ಸಾರ್, ಸದ್ಯದ ಕುವೆಂಪು ವಿ.ವಿ. ಸಂಸ್ಕೃತಿಯಿಂದ ನಮಗೆ ಸಾಕಾಗಿಹೋಗಿದೆ. ಇವರ ಇಂತಹ ವರ್ತನೆಗೆ ಕಾರಣವೇನೆಂದು ನೀವು ಪತ್ತೆ ಹಚ್ಚಿಕೊಡಬೇಕು" ಎಂದು ಕೇಳಿಕೊಂಡಾಗ, ಸದರಿ ಬಾಲು "ನೀವೇನು ಹೆದರಬೇಡಿ. ನಮ್ಮ ಸಂಸ್ಕೃತಿಗೆ ಅಂಟಿರುವ ಕಾಯಿಲೆಗಳ ನಿಜವಾದ ಕಾರಣಗಳನ್ನು ಈ ಕುವೆಂಪು ಯೂನಿವರ್ಸಿಟಿ ಆವರಣದಲ್ಲೇ ಕಂಡುಹಿಡಿಯೋಣ. ಅದಕ್ಕಾಗಿ ಎಷ್ಟಾದರೂ ಹಣ ಖರ್ಚಾಗಲಿ. ಬೆಲ್ಜಿಯಂನಿಂದ ನಾನು ಒದಗಿಸುತ್ತೇನೆ. ಯಾವುದಕ್ಕೂ ಇಲ್ಲೊಂದು ಅಧ್ಯಯನ ಕೇಂದ್ರವಿರಲಿ. ನೀವೇ ನನ್ನ ಪೌತ್‌ಪೀಸುಗಳು. ನೀವು ಯಾರಿಗೂ ಹೆದರಬೇಡಿ. ಧೈರ್ಯವಾಗಿ ಮಾತನಾಡಿ" ಎಂದು ಹೇಳಿ ಬೆಲ್ಜಿಯಂಗೆ ಪರಾರಿಯಾದನಂತಲ್ಲಾ, ಥೂತ್ತೇರಿ!!

****

ಬೆಲ್ಜಿಯಂ ಬಾಲನ ಮಾತನ್ನ ನಂಬಿದ ಕುವೆಂಪು ವಿ.ವಿ. ವಿದ್ವಾಂಸರು ಯಾರೇ ಸಿಕ್ಕರೂ "ನೋಡಿ ಇವ್ರೆ, ನಮ್ಮ ಸಂಸ್ಕೃತಿ ಶ್ರೇಷ್ಠವಾದದ್ದು. ನಮ್ಮ ಪಳ್ಳಿ ನ್ಯಾಯ ಅನುಕರಣೀಯವಾದದ್ದು, ನಮ್ಮ ಹಬ್ಬಗಳಂತೂ ಅನಿರ್ವಚನೀಯ ಆನಂದ ನೀಡುವಂತಹ ಆಚರಣೆಗಳು. ನಮ್ಮ ಹಳ್ಳಿಗಳನ್ನು ನೋಡಿ, ದೇವಸ್ಥಾನ, ಅದರ ಅಕ್ಕಪಕ್ಕ ಪೂಜಾರಿಗಳ ಮನೆ, ರಾಜಬೀದಿಯಲ್ಲಿ ಗೌಡ, ಲಿಂಗಾಯತರ ಮನೆ, ಆನಂತರದಲ್ಲಿ ಹರಿಜನರ ಮನೆ. ಇನ್ನೂ ಆ ಕಡೆ ಮಾದಿಗರ ಮನೆ, ಇತ್ತ ಬಂದರೆ ಕುರುಬ ಕೇರಿ, ಬ್ಯಾಡರ ಬೀದಿ, ಅಗಸರ ಹಟ್ಟಿ, ಕ್ಷೌರಿಕರ ಶೆಡ್ಡು, ಎಲ್ಲರೂ ಸೇರಿ ತಮ್ಮ ಆವರಣದಲ್ಲಿ ನಿಂತು ಮಾಡುತ್ತಿದ್ದ ಊರಹಬ್ಬ ಅದೆಂತ ವೈಭವ. ನಮ್ಮ ಗಂಟೆ, ತಮಟೆ, ಪಲ್ಲಕ್ಕಿ, ನಂದಿಕೋಲು, ಹತ್ತು ಕನ್ನಡಿ, ಗಗ್ಗರ... ಆಹ, ಎಂತಹ ಸಂಸ್ಕೃತಿ ಪರಿಕರಗಳು. ಇವುಗಳ ಬಗ್ಗೆ ತಾತ್ಸಾರ ಬೆಳೆಸಿಕೊಂಡಿದ್ದೇವೆ. ನಮ್ಮ ಹಬ್ಬಗಳ ಬಗ್ಗೆ ಅನಾದರ, ನಮ್ಮ ಜಾತಿಗಳ ಬಗ್ಗೆ ಹೇಸಿಗೆ, ಆಚರಣೆಯ ಬಗ್ಗೆ ಅಸಡ್ಡೆ, ಇದಕ್ಕೆಲ್ಲಾ ಕಾರಣಗಳೇನು ಗೊತ್ತೆ? ವಸಾಹತು ಚಿಂತನೆಗಳನ್ನ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದೇ ಕಾರಣ. ಈ ಬಗ್ಗೆ ಭಾರತದ ಸಂಸ್ಕೃತಿಯ ಪುನರ್ ಚರ್ಚೆ ಆರಂಭಿಸೋಣ, ಕುವೆಂಪು ವಿ.ವಿ. ಕೊಠಡಿಗೆ ಬನ್ನಿ" ಎಂದು ಕರೆಯುತ್ತಿರುವಾಗಲೇ ಅತ್ತ ಬಾಲು ರಾಷ್ಟ್ರೋತ್ಥಾನ ಬಳಗ ಸೇರಿಬಿಟ್ಟನಂತಲ್ಲಾ, ಥೂತ್ತೇರಿ!!

****

ಬಾಲು ರಾಷ್ಟ್ರೋತ್ಥಾನ ಬಳಗ ಸೇರುವ ಸೂಚನೆಯನ್ನು ಮಂಗಳೂರು ಕಡೆಯ ವಿದ್ವಾಂಸರಿಬ್ಬರು ಹಿಂದೆಯೇ ಕೊಟ್ಟಿದ್ದು, ಈಗ ಗಹಗಹಿಸಿ



ನಗುತ್ತಿದ್ದಾರಂತಲ್ಲಾ, ಇತ್ತ ಕುವೆಂಪು ವಿ.ವಿ.ವಿದ್ವಾಂಸರು ಯಾವಾಗ ಬಾಲು ಕಾರ್ನಾಡ, ಅನಂತಮೂರ್ತಿಯನ್ನ ಓದಬೇಡಿರೆಂದು ಫತ್ವಾ ಹೊರಡಿಸಿದನೊ ಆಗಿನಿಂದ ಗಂಟಲಲ್ಲಿ ಗರ್ಭಗುಡಿಯ ಪ್ರಸಾದ ಸಿಕ್ಕಿಕೊಂಡವರಂತೆ "ಅಕ್ಷುವಲಿ ಬಾಲು ಹೇಳಿದ್ದೇನು ಗೊತ್ತಾ?" ಎಂದು ಯೋಚಿಸತೊಡಗುತ್ತಾರಂತಲ್ಲಾ! ಆಶ್ಚರ್ಯವೇನೂ ಇಲ್ಲ, ಎಲ್ಲಾ ಮತಾಂಧರಂತೆ ಬಾಲಗಂಗಾಧರನಿಗೆ ಜಾತ್ಯತೀತ ಜನರನ್ನು ಕಂಡರಾಗುವುದಿಲ್ಲ, ಕಾವ್ಯ ಕಂಡರಾಗುವುದಿಲ್ಲ, ಸಾಹಿತ್ಯ ಕಂಡರಂತೂ ಕೊ.ವೆ.ಶೇಷಾದ್ರಿಯಂತೆ ಮಾತನಾಡುತ್ತಾನೆ. ಅವನಿಗೆ ಈ ಭಾರತದಲ್ಲಿ ಸರ್ವಶ್ರೇಷ್ಠ ಸಾಹಿತ್ಯವೆಂದರೆ ಅದು ರಾಷ್ಟ್ರೋತ್ಥಾನ ಸಾಹಿತ್ಯ, ಅಲ್ಲಿ ಭವ್ಯ ಭಾರತದ ಪರಂಪರೆಯಿದೆ. ಈ ದೇಶ ಕಟ್ಟಲು ಹೆಣಗಿದವರ ಜೀವನ ಚರಿತ್ರೆಗಳಿವೆ, ಮುಂದೆ ಹೇಗೋ ಹಿಂದೂದೇಶ ನಿರ್ಮಾಣ ಮಾಡಬೇಕೆಂಬ ಕನಸುಗಳಿವೆ. ಇದನ್ನೆಲ್ಲ ಓದಿಯೇ ಬಾಲಗಂಗಾಧರ ರಾಷ್ಟ್ರೋತ್ಥಾನ ಬಳಗದ ಡಲ್ಲಾದ ಬಣ್ಣದ ಚೆಡ್ಡಿ ಹಿಕ್ಕಿ, ಅಷ್ಟೇನೂ ಬಿರುಸಲ್ಲದ ನಯವಾದ ನುಣುಪಾದ ಲಾಟಿ ಹಿಡಿದು ನಿಂತಿರುವುದು ಎಂದು ಬಾಲು ಕಂಡರಾಗದವರು ಆಡಿಕೊಳ್ಳುತ್ತಿದ್ದಾರಂತಲ್ಲಾ, ಥೂತ್ತೇರಿ !!

****

ವಿಶ್ವೇಶ್ವರ ಭಟ್ಟ ಬೆಲ್ಜಿಯಂಗೆ ಹೋದರೆ ಇದೇ ಬಾಲಗಂಗಾಧರನ ಮನೆ ಪಕ್ಕ ಹೊಗೆಯುತ್ತಾನೆ. ಹಾಗೇ ಬಾಲು ಬಂದರೆ ಭಟ್ಟನ ಮನೆಯೇ ಉಡುಪಿ ಹೋಟೇಲಿನಂತೆ. ಇಬ್ಬರೂ ಮಾತನಾಡುವ ವಿಷಯವೇನೆಂದರೆ, ಈ ಹಿಂದೂ ಧರ್ಮದ ಜಾತಿಗಳಿಗೆ ಜಾತಿಗಳೇ ಕಾರಣ, ಅದು ಬಿಟ್ಟು ಬ್ರಾಹ್ಮಣರನ್ನ ದೂರುವುದು ಯಾವ ನ್ಯಾಯ. ಪಾಪ ಬ್ರಾಹ್ಮಣರನ್ನ ನೋಡಿದರೆ ಕನಿಕರವಾಗುತ್ತದೆ. ಅವರು ಇಷ್ಟೊಂದು ಜಾತಿ ದೂಷಣೆಯಲ್ಲಿ ಬದುಕಿಬಂದಿರುವುದೇ ಹೆಚ್ಚು. ವಿನಾಕಾರಣ ಹಿಂದೂ ಧರ್ಮದ ಅಸ್ಪೃಶ್ಯತೆ, ಜಾತೀಯತೆಗೆ ಅವನೇ ಕಾರಣನೆಂದು ಟೀಕೆ ಮಾಡುವುದನ್ನು ಇನ್ನೂ ಸಹಿಸಲಾಗುವುದಿಲ್ಲ. ಆದರಿಂದ ಅವನನ್ನು ಬಿಡುಗಡೆ ಮಾಡಲೇಬೇಕು. ಸಂಸ್ಕೃತಿಯ ಪುನರಧ್ಯಯನದಿಂದ ಈ ಜಾತಿಪದ್ಧತಿಗೂ ಬ್ರಾಹ್ಮಣನಿಗೂ ಯಾವ ಸಂಬಂಧವೂ ಇಲ್ಲವೆಂದು ತೋರಿಸಿಕೊಟ್ಟು ಮತ್ತೆ ಬೆಲ್ಜಿಯಂ ಬೇಲಿ ಸೇರಿಕೊಳ್ಳಲಿರುವ ಬಾಲಗಂಗಾಧರ ಭಟ್ಟನ ಮೆಚ್ಚಿನ ಅವಧೂತನಂತಲ್ಲಾ, ಇಂತವರ ಅಕ್ರಮ ಸಂತಾನದಂತೆ ಈಗಾಗಲೆ ಹಲವಾರು ಮಂದಿ ತಮ್ಮ ಪ್ರತಾಪವನ್ನು ಕೊಚ್ಚಿಕೊಳ್ಳುತ್ತ ಕೂತಿವೆಯಂತಲ್ಲಾ, ಥೂತ್ತೇರಿ!!


****

ಬಾಲಗಂಗಾಧರ ದೊಡ್ಡ ವಿದ್ವಾಂಸ. ಆದರೆ ಅಹಂಕಾರಿ. ವಿದ್ವಾಂಸರಿಗೆ ಅಹಂಕಾರವಿರುವುದಿಲ್ಲ, ವಿನಯವಿರುತ್ತದೆ. ಸಿಟ್ಟಿರುವುದಿಲ್ಲ, ಸ್ಥೈರ್ಯವಿರುತ್ತದೆ. ಈತನ ಪ್ರಕಾರ ಗಾಂಧಿ, ಬುದ್ಧ ಬಸವ, ಅಂಬೇಡ್ಕರ್ ಇವರಾರು ದಾರ್ಶನಿಕರಲ್ಲ. ಅದರಲ್ಲೂ ಅಂಬೇಡ್ಕರ್ ಬಗ್ಗೆ ಈತನಾಡುವ ಹಗುರ ಮಾತುಗಳನ್ನ ಕೇಳಿದವರು ಸರಿಯಾಗಿ ಗೂಸಾ ತಿಂದು ಬೆಲ್ಜಿಯಂ ಸಿಗುವವರೆಗೂ ಓಡುವುದು ಗ್ಯಾರಂಟಿ. ಈತನ ಮಾತು, ನಡವಳಿಕೆ ನೋಡಿದರೆ ಈತನ ವಿದ್ವತ್ ಎಲ್ಲದರಾ ಹಳ್ಳಿಗೆ ಸಿಕ್ಕಿ ಮಾರಣಹೋಮವಾಗುವುದು ಗ್ಯಾರಂಟಿ! ಅದೇನಾದರಾಗಲಿ ವಿಶ್ವಮಾನವ ಸಂದೇಶ ಸಾರಿದ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಎಂದ, ಪುರೋಹಿತಶಾಹಿ ಹುಲಿಗೆ ನೀರ ಬುರುಡೆ ಗುಂಡಿಟ್ಟು ಹೊಡೆಯಬೇಕು, ಗಾಯ ಮಾಡಿಬಿಟ್ಟರೂ ಅದು ನಿಮ್ಮನ್ನು ಬಲಿ ತೆಗೆದುಕೊಳ್ಳುತ್ತೆ ಎಂದ ಕುವೆಂಪು ಹೆಸರಿನ ವಿ.ವಿ. ಆವರಣಕ್ಕೆ ಗಾಯಗೊಂಡ ಈ ಹುಲಿ ಬಂದು ಸಂಸ್ಕೃತಿ ಅಧ್ಯಯನ ಕೇಂದ್ರ ಸ್ಥಾಪಿಸಿರುವುದು ಈ ನಾಡಿನ ದುರಂತವಲ್ಲವೆ, ಥೂತ್ತೇರಿ!!! ■



ವಿಶ್ವನೀಡಂ: ಗಾಂಧೀಜಿ ಹೆಸರಲ್ಲಿ ಭೂಲೂಟಿ

ಗಾಂಧೀಜಿ ಹೆಸರಿನಲ್ಲಿ ರಾಜಕಾರಣ ಮಾಡುತ್ತಿರುವ ಇಂದಿನ ರಾಜಕೀಯ ಪಕ್ಷಗಳು ಗಾಂಧಿ ತತ್ವಗಳನ್ನು ಹಳ್ಳ ಹಿಡಿಸಿ, ಇಡೀ ದೇಶಕ್ಕೆ ಮಕ್ಮಲ್ ಟೋಪಿ ಹಾಕಿರುವುದು ನಮಗೆಲ್ಲಾ ಗೊತ್ತಿರುವ ಸಂಗತಿ. ಆದರೆ ಹೆಸರಾಂತ ಸೇವಾ ಸಂಸ್ಥೆಯೊಂದು ಗಾಂಧಿಯ ಹೆಸರಿನಲ್ಲಿ ದೀನದಲಿತರನ್ನು ಗೋಳು ಹೊಯ್ದುಕೊಳ್ಳುತ್ತಿದೆ ಎಂದರೆ ಯಾರಾದರೂ ನಂಬಲು ಸಾಧ್ಯವೆ? ಅದೂ ಸಹ ಬೆಂಗಳೂರು ಮಹಾ ನಗರದ ಕಿಕ್ಕಿರಿದ ಜನಸಂದಣಿಯ ನಡುವೆ ಇಂಥದ್ದೊಂದು ಅನ್ಯಾಯ ನಡೆಯುತ್ತಿದೆ ಎಂದರೆ ಯಾರೂ ನಂಬಲಿಕ್ಕಿಲ್ಲ.



ಬೆಂಗಳೂರು ನಗರದಿಂದ ಮಾಗಡಿ ರಸ್ತೆ ಮಾರ್ಗವಾಗಿ ಹೊರಟರೆ ಸುಂಕದಕಟ್ಟೆ ದಾಟಿದ ನಂತರ ಎಡಭಾಗದಲ್ಲಿ ವಿಶಾಲವಾದ ಜಮೀನುಗಳು ಕಂಡುಬರುತ್ತವೆ. ಅದರ ಒಂದು ಭಾಗದಲ್ಲಿ ಖಾಲಿಬಿದ್ದಿರುವ, ಶಿಥಿಲಾವಸ್ಥೆಯಲ್ಲಿರುವ ಶೆಡ್‌ಗಳು ಕಾಣಸಿಗುತ್ತವೆ. ಈ ಜಾಗಕ್ಕೆ ಕಾಂಪೌಂಡ್ ಗೋಡೆ ಕಟ್ಟಲಾಗಿದ್ದು ಅದರ ಗೇಟಿನ ಬಳಿ 'ವಿಶ್ವನೀಡಂ ಸರ್ವೋದಯ ಟ್ರಸ್ಟ್' ಎಂಬ ಬೋರ್ಡ್ ನೇತುಹಾಕಲಾಗಿದೆ.

ಈ ಟ್ರಸ್ಟ್ ಅಥವಾ ಈ ಜಮೀನಿನ ಬಗ್ಗೆ ಸ್ಥಳೀಯರನ್ನು ವಿಚಾರಿಸಿದರೆ ಅವುಗಳ ಬಗ್ಗೆ ಯಾರಿಗೂ ಸರಿಯಾದ ಮಾಹಿತಿಯಿಲ್ಲ. ಇದೇ ಸ್ಥಳದಲ್ಲಿ ಒಂದು ಪೋಸ್ಟ್ ಆಫೀಸ್ ಮತ್ತು ಪೊಲೀಸ್ ಬೀಟ್‌ಪೋಸ್ಟ್ ಕೂಡ ಇದೆ. ಈ ಜಾಗದ ಸುತ್ತಮುತ್ತಲ ಜನರಿಗೂ - ಈ ವಿಶ್ವನೀಡಂ ಸಂಸ್ಥೆಗೂ ಇದ್ದ ಸಂಬಂಧ ಕೇವಲ ಪೋಸ್ಟ್ ಆಫೀಸ್ ಮತ್ತು ಪೊಲೀಸ್ ಸ್ಟೇಷನ್‌ಗೆ ಸಂಬಂಧಿಸಿದ್ದು ಮಾತ್ರ. ಆದರೆ ಇತ್ತೀಚಿನ ವರ್ಷಗಳಲ್ಲಿ ಆಗಾಗ ಕೆಲವು ಸಭೆ ಸಮಾರಂಭಗಳು ನಡೆಯುತ್ತಿವೆ. ಉಳಿದಂತೆ ಈ ಟ್ರಸ್ಟ್ ಏನು ಮಾಡುತ್ತಿದೆ? ಇವರ ಕಾರ್ಯಚಟುವಟಿಕೆಗಳೇನು? ಎಂಬ ಬಗ್ಗೆ ಇಲ್ಲಿನ ಸಾರ್ವಜನಿಕರಿಗೆ ಅಷ್ಟಾಗಿ ಮಾಹಿತಿಯಿಲ್ಲ.


ಈ ಟ್ರಸ್ಟ್‌ನ ಇತಿಹಾಸಕ್ಕೂ ನಮ್ಮ ದೇಶದ ಸ್ವಾತಂತ್ರ ಸಂಗ್ರಾಮಕ್ಕೂ ನೇರವಾದ ಸಂಬಂಧವಿದೆ. ಭಾರತದ ಸ್ವಾತಂತ್ರ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಗಾಂಧೀಜಿ ಹಾಗೂ ಭೂದಾನ ಚಳವಳಿಯ ರೂವಾರಿ ಆಚಾರ್ಯ ವಿನೋಬಾ ಭಾವೆಯವರು ಈ ವಿಶ್ವನೀಡಂ ಟ್ರಸ್ಟ್ ಸ್ಥಾಪನೆಯ ಹಿಂದಿನ ಪ್ರೇರಕ ಶಕ್ತಿಗಳು. ಈ ಟ್ರಸ್ಟನ್ನು ಗಾಂಧಿ ಹಾಗೂ ವಿನೋಬಾ ಅವರ ಶಿಷ್ಯರಾದ ವಲ್ಲಭಸ್ವಾಮಿ ಮತ್ತು ಮಹದೇವಿತಾಯಿ ಎಂಬುವವರು 1942ರಲ್ಲಿ ಸ್ಥಾಪಿಸಿದರು. ಈ ವಿಶ್ವನೀಡಂನ ಪ್ರಮುಖ ಕಚೇರಿ ಬೆಂಗಳೂರಿನ ಹೃದಯಭಾಗವಾದ ಶೇಷಾದ್ರಿಪುರಂನಲ್ಲಿದೆ.. ವಲ್ಲಭಸ್ವಾಮಿಯವರು ಗಾಂಧೀಜಿ ಹುಟ್ಟಿದ ಗುಜರಾತ್ ಮೂಲದವರು. ಮಹಾದೇವಿ ತಾಯಿಯವರು ಮೂಲತಃ ನಮ್ಮ ಉತ್ತರ ಕನ್ನಡ ಜಿಲ್ಲೆಯವರು, ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಸ್ವಂತ ಅಕ್ಕ.

ವಲ್ಲಭಸ್ವಾಮಿಯವರು ಬಹಳ ಹಿಂದೆಯೇ ತೀರಿ ಕೊಂಡರು. ಅವರ ಹೆಸರಿನಲ್ಲಿ ಶೇಷಾದ್ರಿಪುರಂನಲ್ಲಿರುವ ಗಾಂಧಿಭವನದ ಪಕ್ಕದಲ್ಲಿ ವಲ್ಲಭ ನಿಕೇತನ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ, ಅಲ್ಲಿ ನಾನಾರೀತಿಯ ದೀನಸೇವಾ ಕಾರ್ಯಗಳನ್ನು ಮಹಾದೇವಿ ತಾಯಿಯವರು ನಡೆಸಿಕೊಂಡು ಬಂದಿದ್ದರು. ಹೀಗೆ ನಿಸ್ಪೃಹ ಸೇವೆ ಮಾಡುತ್ತಾ ಎಲ್ಲರ ಮೆಚ್ಚುಗೆ ಗಳಿಸಿದ್ದ ತಾಯಿಯವರು ಶತಾಯುಷ್ಯವನ್ನು ಪೂರೈಸಿ, ಕಳೆದ ನಾಲ್ಕು ವರ್ಷಗಳ ಹಿಂದೆ ತೀರಿಕೊಂಡರು.

ಹೀಗೆ ಈ ಟ್ರಸ್ಟ್ ವ್ಯವಹಾರದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದ ಇಬ್ಬರು ಗಣ್ಯರು ತೀರಿಕೊಂಡ ನಂತರ, ಮಾಗಡಿ ರಸ್ತೆಯಲ್ಲಿ ಈ ಟ್ರಸ್ಟ್‌ನ ಅಡಿಯಲ್ಲಿರುವ ಸುಮಾರು **400** ಎಕರೆ ಭೂಮಿಯ ಮೇಲೆ ಭೂಗಳ್ಳರು, ಕಾರ್ಪೋರೇಟ್ ಕಂಪನಿಗಳು ಕಣ್ಣಿಟ್ಟು ಈಗ ಇದನ್ನು ಕಬ್ಜಾ ಮಾಡಿಕೊಳ್ಳಲು ರಂಗಕ್ಕೆ ಇಳಿದಿವೆ. ಏಕೆಂದರೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಈ ಆಸ್ತಿಯ ಇಂದಿನ ಮಾರುಕಟ್ಟೆ ಮೌಲ್ಯ ಸುಮಾರು **4000** ಕೋಟಿಗಳು!!

ಬಜಾಜ್ ಸಂಸ್ಥೆಯ ರಂಗಪ್ರವೇಶ

ಹೀಗೆ ರಂಗಪ್ರವೇಶ ಮಾಡಿರುವವರು ಸಣ್ಣಪುಟ್ಟ ಕುಳಗಳಲ್ಲ, ದೇಶದ ಭಾರೀ ಉದ್ದಿಮೆ ಸಂಸ್ಥೆಗಳಲ್ಲೊಂದಾದ ಬಜಾಜ್ ಕಂಪನಿಗೆ ಸಂಬಂಧಿಸಿದವರು. ಈ ಬಜಾಜ್ ಕಂಪನಿಯ ಸ್ಥಾಪಕ ಜಮ್ನಾಲಾಲ್ ಬಜಾಜ್ ಗಾಂಧೀಜಿಯವರ ಬೆಂಬಲಿಗರಾಗಿದ್ದು ಸ್ವಾತಂತ್ರ ಚಳವಳಿಯಲ್ಲಿ ಭಾಗವಹಿಸಿದ್ದವರು. ಅವರ ಹೆಸರಿನಲ್ಲಿ ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್ ಎಂಬ ಸಂಸ್ಥೆಯೊಂದಿದ್ದು ಬಜಾಜ್ ಕುಟುಂಬವೇ ಈಗ ಇದರ ಸಂಪೂರ್ಣ ಹಿಡಿತವನ್ನು ಹೊಂದಿದೆ. ಸಮಾಜ ಸೇವೆಯ ಹೆಸರಿನಲ್ಲಿ ಈ ಸಂಸ್ಥೆ ಒಂದಷ್ಟು ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ.



ದೇಶಾದ್ಯಂತ ಹಲವು ಶಾಖೆಗಳನ್ನು ಹೊಂದಿರುವ ವಿಶ್ವನೀಡಂ ಟ್ರಸ್ಟ್‌ಗೆ ಜಮ್ನಾಲಾಲ್ ಕೂಡ ಒಬ್ಬ ಸದಸ್ಯರಾಗಿದ್ದರು. ಈ ಹಿನ್ನೆಲೆಯಲ್ಲಿ ಕೆಲವು ತಾಂತ್ರಿಕ ನೆಪಗಳನ್ನು ಮುಂದಿಟ್ಟು ಕೊಂಡು ಈಗ ಜಮ್ನಾಲಾಲ್ ಬಜಾಜ್ ಸೇವಾಟ್ರಸ್ಟ್ ರಂಗಪ್ರವೇಶ ಮಾಡಿದೆ. ವಿಶ್ವನೀಡಂ ಫಾರ್ವರ್ಮ್‌ನ ಭೂಮಿಯನ್ನು ಬಜಾಜ್ ಟ್ರಸ್ಟ್‌ನ ಹಿಡಿತಕ್ಕೆ ತೆಗೆದುಕೊಳ್ಳಲು ನಾನಾ ಕಸರತ್ತುಗಳನ್ನು ನಡೆಸುತ್ತಿದೆ.

ಈ ಕಸರತ್ತಿನಲ್ಲಿ ಕಾನೂನು ಮತ್ತು ಪೊಲೀಸರ ದುರ್ಬಳಕೆ, ಸ್ಥಳೀಯ ರಿಯಲ್ ಎಸ್ಟೇಟ್ ಏಜೆಂಟರ ಬಳಕೆ, ಅಷ್ಟೇ ಏಕೆ? ಸೆಕ್ಯೂರಿಟಿ ಹೆಸರಿನಲ್ಲಿ ಗೂಂಡಾ ಶಕ್ತಿಯ ಪ್ರಯೋಗವನ್ನೂ ಮಾಡುತ್ತಿದ್ದಾರೆ. ಅವರ ಟಾರ್ಗೆಟ್ ಇಷ್ಟೇ. ಈ ಭೂಮಿಯನ್ನು ಲಪಟಾಯಿಸಲು ಪ್ರಮುಖ ಅಡ್ಡಿಯಾಗಿರುವ ಅಲ್ಲಿ ನೆಲೆ ನಿಂತಿರುವ ಕೆಲವು ದಲಿತ ಕುಟುಂಬಗಳನ್ನು ಎತ್ತಂಗಡಿ ಮಾಡುವುದು.

ಎಲ್ಲಕ್ಕಿಂತ ಮುಖ್ಯವಾಗಿ ಇಷ್ಟೊಂದು ಪ್ರಮಾಣದ ಭೂಮಿ ವಿಶ್ವನೀಡಂ ಟ್ರಸ್ಟ್‌ನ ಕೈಗೆ ಬಂದಿದ್ದಕ್ಕೂ ಒಂದು ನಿರ್ದಿಷ್ಟ ಇತಿಹಾಸವಿದೆ. ಇಲ್ಲಿನ ನಿವಾಸಿಗಳ ಪ್ರಕಾರ ವಿನೋಬಾ ಭಾವೆಯವರ ಭೂದಾನ ಚಳವಳಿಯ ಪ್ರೇರಣೆಗೆ ಒಳಗಾಗಿ ಈ ಭೂಮಿಯ ಹಿಂದಿನ ಮಾಲಿಕರು ಅತ್ಯಂತ ಕಡಿಮೆ ಬೆಲೆ ಪಡೆದು ಅಥವಾ ದಾನವಾಗಿ ತಮ್ಮ ಭೂಮಿಗಳನ್ನು ಬಿಟ್ಟುಕೊಟ್ಟಿದ್ದರು.

ಹೀಗೆ ಸುಮಾರು ಐದು ದಶಕಗಳಿಗೂ ಹೆಚ್ಚುಕಾಲದಿಂದ ಟ್ರಸ್ಟ್‌ನ ವಶದಲ್ಲಿರುವ ಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಾ ಬರಲಾಗಿದೆ. ಈ ಭೂಮಿ ವಿಶ್ವನೀಡಂ ಟ್ರಸ್ಟ್‌ನ ವಶಕ್ಕೆ ಬರುವುದಕ್ಕೆ ಮುಂಚಿಯಿಂದಲೂ ಹಿಂದಿನ ಜಮೀನ್ದಾರರ ಬಳಿ ದುಡಿಯುತ್ತಿದ್ದ ಕೆಲವು ಬಡ ಕುಟುಂಬಗಳಿದ್ದವು. ಅಂಥಾ ಕುಟುಂಬಗಳ ಪೈಕಿ ದಲಿತ ಗಂಗಯ್ಯನ ಕುಟುಂಬವೂ ಒಂದು. ಇಂಥಾ ಮೂಲ ಜೀತಗಾರರ ಜೊತೆಗೆ ಕೃಷಿ ಕೆಲಸಗಳಿಗಾಗಿ ದೂರದ ಹಳ್ಳಿಗಳಿಂದ ಏಳೆಂಟು ಭೂಹೀನ ಕುಟುಂಬಗಳನ್ನು ಕರೆತರಲಾಗಿತ್ತು. ವಿನೋಬಾ ಭಾವೆಯವರ ತತ್ವ ಆದರ್ಶದಂತೆ ಭೂಹೀನರಿಗೆ ಭೂಮಿ ಕೊಡುವುದೇ ತಮ್ಮ ಟ್ರಸ್ಟ್‌ನ ಪರಮ ಧ್ಯೇಯವಾಗಿದೆಯೆಂದೂ, ಹೀಗಾಗಿ ತಲಾ ಐದು ಎಕರೆ ಭೂಮಿ ಕೊಡುತ್ತೇವೆಂದೂ ಈ ಬಡಪಾಯಿಗಳಿಗೆ ಭರವಸೆ ನೀಡಲಾಗಿತ್ತು, ಆದರೆ ಸುಮಾರು ಐದು ದಶಕಗಳಿಂದ ದುಡಿದವರಿಗೆ ದಕ್ಕುವುದು ಅರೆಹೊಟ್ಟೆಯ ಸಂಬಳ ಮಾತ್ರ. ತಿಂಗಳಿಗೆ ಒಂದೂವರೆ ಅಥವಾ ಎರಡು ಸಾವಿರ ಇದ್ದ ಸಂಬಳ ತೀರಾ ಇತ್ತೀಚೆಗೆ ಅಲ್ಪಮಟ್ಟದಲ್ಲಿ ಏರಿಕೆಯಾಗಿದೆ.

ದಲಿತರ, ಭೂಹೀನರ ಪರವಾಗಿರುವ ದೇಶದ ಯಾವ ಕಾನೂನನ್ನು ಅನ್ವಯಿಸಿದ್ದರೂ ಈ ಬಡಪಾಯಿ ಕುಟುಂಬಗಳಿಗೆ ಅಷ್ಟು ಭೂಮಿ ಸಿಗಬೇಕಿತ್ತು, ಉಳುವವನಿಗೇ ಭೂಮಿ ಎಂಬ ಕಾನೂನು ಅಥವಾ ಭೂರಹಿತರಿಗೆ

ಒಕ್ಕಲೆಬ್ಬಿಸಲಿಕ್ಕಾಗಿ ಗಾಂಧೀಜಿ ಶಿಬಿರ

ದಲಿತ ಗಂಗಯ್ಯನನ್ನು ಒಕ್ಕಲೆಬ್ಬಿಸಲಿಕ್ಕಾಗಿ ಈ ಭೂಗಳ್ಳರ ಕೂಟ ಒಂದು ಐನಾತಿ ವಸಲತ್ತು ಹೂಡಿತು. ಗಾಂಧಿ ಸ್ಮಾರಕ ಟ್ರಸ್ಟ್ ಮತ್ತು ಎನ್‌ಎಸ್‌ಎಸ್ ಜೊತೆಗೂಡಿ ಒಂದು ರಾಜ್ಯಮಟ್ಟದ ಯುವಜನ ಶಿಬಿರವೊಂದನ್ನು ನಡೆಸುವ ನಾಟಕವಾಡಿತು. ಅದರ ಘೋಷಿತ ಉದ್ದೇಶ ಯುವ ಜನತೆಯಲ್ಲಿ ಗಾಂಧಿ ತತ್ವಗಳನ್ನು ಪ್ರಚಾರ ಮಾಡುವುದು. ಆದರೆ ಈ ಶಿಬಿರದ ಹಿಂದೆ ಗಂಗಯ್ಯ ಮತ್ತು ಕುಟುಂಬವನ್ನು ಆ ಜಾಗದಿಂದ ಖಾಲಿ ಮಾಡಿಸುವ ಸ್ಪಷ್ಟವಾದ ಹಿಡನ್ ಅಜೆಂಡಾವೊಂದಿತ್ತು.

ಈ ಹಿಡನ್ ಅಜೆಂಡಾ ಈಡೇರಿಸಿಕೊಳ್ಳುವ ಸಲುವಾಗಿ ಜಮ್ನಾಲಾಲ್ ಟ್ರಸ್ಟ್‌ನ ಪ್ರತಿನಿಧಿಗಳು ಕೋರ್ಟ್ ಮೆಟ್ಟಿಲೇರಿದರು. ನಿವೃತ್ತಿಯಾಗಿರುವ ಗಂಗಯ್ಯ ಮತ್ತು ಆತನ ಕುಟುಂಬ ಆ ಮನೆಯಲ್ಲಿ ವಾಸಿಸಲು ಯಾವುದೇ ಹಕ್ಕನ್ನು ಹೊಂದಿಲ್ಲವೆಂತಲೂ, ಲೇಬರ್ ಆಕ್ಟ್ ಪ್ರಕಾರ ನಿವೃತ್ತಿಯಾದ ಕೂಡಲೇ ಅವರು ಆ ಮನೆಯನ್ನು ಖಾಲಿ ಮಾಡಿಕೊಡಬೇಕಿತ್ತೆಂದೂ ವಾದ ಹೂಡಿದರು. ಗಾಂಧಿವಾದವನ್ನು ಬೋಧಿಸಲು ದೇಶದ ಹೆಸರಾಂತ ಗಾಂಧೀವಾದಿಗಳು ಭಾಗವಹಿಸುತ್ತಾರೆಂದೂ, ರಾಜ್ಯದ ನಾನಾ ಭಾಗಗಳಿಂದ ವಿದ್ಯಾರ್ಥಿ ಯುವಜನರು ನೆರೆಯುತ್ತಿದ್ದಾರೆಂದೂ, ಇದೊಂದು ಚಾರಿತ್ರಿಕ ಶಿಬಿರವೆಂಬಂಥ ಚಿತ್ರಣ ನೀಡಿದರು. ಈ ಕುಟುಂಬ ವಾಸಿಸುತ್ತಿರುವ ಜಾಗ ಶಿಬಿರಾರ್ಥಿಗಳ ವಾಸಕ್ಕಾಗಿ ಜರೂರು ಅಗತ್ಯವಿರುವುದರಿಂದ, ಅನಧಿಕೃತವಾಗಿ ವಾಸಿಸುತ್ತಿರುವ ಅವರನ್ನು ಕೂಡಲೇ ಅಲ್ಲಿಂದ ಖಾಲಿ ಮಾಡಿಸಿಕೊಡಬೇಕೆಂದು ಕೋರ್ಟ್ ಮುಂದೆ ಬೇಡಿಕೆಯಿಟ್ಟರು.

ಆದರೆ ಗಂಗಯ್ಯನ ಅದೃಷ್ಟ ಚೆನ್ನಾಗಿತ್ತು, ನ್ಯಾಯಾಧೀಶರಿಗೆ ಈ ಭೂಗಳ್ಳರ ವಾದಗಳು ವಿಚಿತ್ರವಾಗಿ ಕಾಣಿಸಿರಬೇಕು. ಗಂಗಯ್ಯನ ಕುಟುಂಬಕ್ಕೆ ನೋಟೀಸ್ ಜಾರಿ ಮಾಡಿದ ನ್ಯಾಯಾಲಯ, ಸದರಿ ಮನೆಯ ಮಾಲಿಕತ್ವವನ್ನು ರುಜುವಾತು ಪಡಿಸುವ ದಾಖಲಾತಿಗಳನ್ನು ಒದಗಿಸುವಂತೆ ಜಮ್ನಾಲಾಲ್ ಬಜಾಜ್ ಟ್ರಸ್ಟ್‌ನ ಪ್ರತಿನಿಧಿಗಳಿಗೆ ಸೂಚಿಸಿದೆ. ಅದಾದನಂತರ ಈ ಕಳ್ಳರಕೂಟ ಆ ಕೇಸಿನ ಕಡೆ ತಲೆಯೇ ಹಾಕಿಲ್ಲವಂತೆ.

ಬಿಟ್ಟಿ ಆಸ್ತಿಗಾಗಿ ನೂಕುನುಗ್ಗಲು

ಈ ಹಿಂದೆ ಸುಮಾರು **570** ಎಕರೆ ಭೂಮಿ ವಿಶ್ವನೀಡಂ ಟ್ರಸ್ಟ್‌ನ ವಶದಲ್ಲಿತ್ತು ಎಂದು ಬಲ್ಲವರು ಹೇಳುತ್ತಾರೆ. ಈ ಭೂಮಿಯನ್ನು ಕಬಳಿಸಲು ಖಾಸಗಿ ವ್ಯಕ್ತಿಗಳು ಹಾಗೂ ಸರ್ಕಾರಿ ಸಂಸ್ಥೆಗಳೂ ಪೈಪೋಟಿಗೆ ಇಳಿದಿರುವುದು ಇಲ್ಲಿನ ದೊಡ್ಡ ವಿಪರ್ಯಾಸ.


ಈಗಾಗಲೇ ಸುಮಾರು **160** ಎಕರೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸ್ವಾಧೀನಪಡಿಸಿಕೊಂಡು ವಿಶ್ವೇಶ್ವರಯ್ಯ ಬಡಾವಣೆಗೆ ಸೇರಿಸಿಕೊಂಡಿದ್ದಾರೆ. ಇದೂಅಲ್ಲದೆ ಎಪಿಎಂಪಿ (ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ) ಗಾಗಿ ಮತ್ತೊಂದಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲು ಮತ್ತೊಂದು ಹುನ್ನಾರ ನಡೆದಿದೆ. ಅಷ್ಟು ಮಾತ್ರವಲ್ಲದೆ ಈ ಭೂಮಿಯು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಅನ್ವಯಿಸಿ ಈ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯುವ ಪ್ರಯತ್ನವೂ ನಡೆದಿದೆ. ಈ ಬಗ್ಗೆ ಕೋರ್ಟ್‌ನಲ್ಲಿ ಒಂದು ಕೇಸು ಕೂಡ ದಾಖಲಾಗಿದೆ.

ಈ ಎಲ್ಲಾ ಜಮೀನುಗಳು ಹೇರೋಹಳ್ಳಿ, ಶ್ರೀಗಂಧದ ಕಾವಲ್ ಮತ್ತು ಲಿಂಗಧೀರನಹಳ್ಳಿಗಳಿಗೆ ಸೇರಿದ ವಿವಿಧ ಸರ್ವೆ ನಂಬರ್‌ಗಳಿಗೆ ಸೇರಿದ್ದು ಇವು ಕೃಷಿ ಭೂಮಿಗಳಾಗಿವೆ. ಆದರೆ ನಗರ ಪ್ರದೇಶದ ವ್ಯಾಪ್ತಿಯಲ್ಲಿ ಅಷ್ಟೊಂದು ಕೃಷಿ ಭೂಮಿಯನ್ನು ಉಳಿಸಿಕೊಳ್ಳಲು ಅವಕಾಶವಿಲ್ಲವೆಂಬುದನ್ನರಿತ ಈ ಬಜಾಜ್ ಟ್ರಸ್ಟ್‌ನವರು ಈ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗಾಗಿಯೇ ಬಳಸುತ್ತಿದ್ದೇವೆಂದು ಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ಲ್ಯಾಂಡ್ ಟ್ರಿಬ್ಯುನಲ್ ಮುಂದೆ ಈ ಕೇಸು ಬಾಕಿ ಉಳಿದಿದೆ.

ಈ ಎಲ್ಲಾ ಗೊಂದಲ ಗೋಜುಗಳಲ್ಲಿ ಮೂಲತಃ ವಿಶ್ವನೀಡಂ ಆಸ್ತಿಯನ್ನು ಕೇವಲ 35 ಎಕರೆಗಳಿಗೆ ಸೀಮಿತಗೊಳಿಸಿ ಉಳಿದ ಆಸ್ತಿಯನ್ನು ಜಮ್ನಾಲಾಲ್ ಬಜಾಜ್ ಟ್ರಸ್ಟ್‌ನ ಹೆಸರಿನಲ್ಲಿ ಕಬಳಿಸುವ ಉದ್ದೇಶದಿಂದ ಖೊಟ್ಟಿ ದಾಖಲೆ ಸೃಷ್ಟಿಸುವ ಕೆಲಸ ಮತ್ತೊಂದು ಕಡೆ ಬಿರುಸು ಪಡೆದುಕೊಂಡಿದೆ.

ಈಗಾಗಲೇ ವಿಶ್ವನೀಡಂನ ಆಸ್ತಿಯ ಕೆಲವು ಭಾಗಗಳನ್ನು ಕೆಲವು ಪ್ರಭಾವಿ ವ್ಯಕ್ತಿಗಳು ಆಕ್ರಮಿಸಿ ಕಾಂಪೌಂಡ್ ಕೂಡಾ ಹಾಕಿಕೊಂಡಿದ್ದಾರೆ. ಶ್ರೀಗಂಧ ಕಾವಲ್ ವಸತಿಹೀನರ ಸಂಘದ ಹೆಸರಿನಲ್ಲಿ ಕುಮಾರ್, ಚನ್ನಪ್ಪ ಮುಂತಾದವರ ಕೂಟ ದೊಡ್ಡ ಗೋಲ್‌ಮಾಲ್ ನಡೆಸಿ ತಲಾ ಹತ್ತಾರು ಸೈಟುಗಳನ್ನು ಲಪಟಾಯಿಸಿದ್ದಾರೆ. ಈ ಮಧ್ಯೆ ರಾಜಾಜಿನಗರ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿಯವರು ತಮಗೂ ಒಂದು ಪಾಲು ಬರಬೇಕೆಂದು ಕ್ಲೈಮು ಮುಂದಿಟ್ಟಿದ್ದಾರೆ. ಹೀಗಾಗಿ ಕೇಸುಗಳ ರಾಶಿ ಕೋರ್ಟ್‌ಗಳ ಮುಂದೆ ಬಿದ್ದಿವೆ.

ಬಿಟ್ಟಿ ಆಸ್ತಿ ಸಿಗುತ್ತೆ ಎಂದು ಭಾರೀ ನೂಕುನುಗ್ಗಲು ಶುರುವಾಗಿರುವುದರಿಂದ ಗಂಗಯ್ಯನಂಥಾ ನೈಜ ಹಕ್ಕುದಾರರು ಮೂಲೆಗುಂಪಾಗುತ್ತಿರುವುದು ಇಂದಿನ ದುರಂತ.



ಗಂಗಯ್ಯ ಮತ್ತು ಇತರರ ಮನೆಯ ಸಾಲು (ಒಳಚಿತ್ರದಲ್ಲಿ ಗಂಗಯ್ಯ)

ಚ್ಚುವರಿ ಭೂಮಿಯನ್ನು ಹಂಚಿಕೆ ಮಾಡುವ ಕಾನೂನು ೀಗೆ ಯಾವುದೇ ಕಾನೂನು ಅನ್ವಯಿಸಿದ್ದರೂ ಈ ಲಿತ ಕುಟುಂಬಗಳಿಗೆ ಭೂಮಿ ಸಿಗುತ್ತಿತ್ತು. ಆದರೆ ಪೊಳ್ಳು ಶ್ವಾಸನೆ ನೀಡಿ ಇಷ್ಟು ವರ್ಷ ದುಡಿಸಿಕೊಂಡ ಇಲ್ಲಿನ ಟ್ಟಭದ್ರ ಶಕ್ತಿಗಳು ಮಹಾದೇವಿ ತಾಯಿಯವರು ೇರಿಕೊಂಡ ನಂತರ ಕನಿಷ್ಟ ಈ ಕುಟುಂಬಗಳು ಾಸಿಸುತ್ತಿರುವ ಸಣ್ಣ ಶೆಡ್‌ಗಳಿಂದಲೂ ಅವರನ್ನು ಕ್ಕಲೆಬ್ಬಿಸಲು ಸಂಚು ರೂಪಿಸಿದ್ದಾರೆ.

ಜಮ್ನಾಲಾಲ್ ಬಜಾಜ್ ಸೇವಾ ಟ್ರಸ್ಟ್‌ನವರು ತಮ್ಮ ರವಾಗಿ ಇಂಥಾ ಎಲ್ಲಾ ಆಟಗಳನ್ನು ನಡೆಸಲೆಂದು ರಮೇಶ್ ರ್ಮ ಎಂಬುವವನಿಗೆ ಜಿಪಿಎ ಕೊಟ್ಟು ಬೆಂಗಳೂರಿನಲ್ಲಿ ೂರಿಸಿದ್ದಾರೆ. ಸಮಾಜಸೇವೆಗೂ ಈ ಶರ್ಮನಿಗೂ ಅದು ಂತಹ ಸಂಬಂಧವಿದೆಯೋ ರಾಹುಲ್ ಬಜಾಜ್ ಅವರೇ ೇಳಬೇಕು. ವಾಸ್ತವದಲ್ಲಿ ಆತ ಎಂಥಾ ಖತರ್‌ನಾಕ್ ಮಾಜ ಸೇವಕನೆಂಬುದು ದಲಿತ ಗಂಗಯ್ಯನ ವಿಷಯದಲ್ಲಿ ಬೀತಾಗಿದೆ. ವಿವರಗಳನ್ನು ನೋಡಿ.

ಸುಮಾರು 70 ವರ್ಷ ವಯಸ್ಸಿನ ವೃದ್ಧ ಗಂಗಯ್ಯ ಮತ್ತು ಸುಮಾರು 60 ವರ್ಷದ ಗಂಗಮ್ಮ ದಂಪತಿಗಳು ಈ ಭೂಮಿಯಲ್ಲಿ ಅನಾದಿಯಿಂದಲೂ ದುಡಿದವರು. ವರು ಮೂಲತಃ ಮಾಗಡಿ ತಾಲೂಕು ಯಳವಾಡಿ ್ರಾಮದವರು. ಗಂಗಯ್ಯ ಎಳೆಯ ವಯಸ್ಸಿನಲ್ಲೇ ಬಾಲ ೇತಗಾರನಾಗಿ ಈ ಭೂಮಿಯಲ್ಲಿ ದುಡಿಯಲು ಾರಂಭಿಸಿದವರು. ಈ ಸ್ಥಳಕ್ಕೆ ಬಂದು ನೆಲೆಯೂರಿ ಮಾರು 50-60 ವರ್ಷಗಳಾಗಿರಬಹುದು. ಇಂಥಾ ತಿಹಾಸವಿರುವ ಈ ಕುಟುಂಬವನ್ನು ಇಲ್ಲಿಂದ ೊರದಬ್ಬಲು ಎಂಥಾ ಪಂಚರಂಗಿ ಆಟವನ್ನು ೂಡಿದ್ದಾರೆಂಬುದನ್ನು ನೋಡಿ ಎಂಥಾ ಕಾನೂನು ಂಡಿತನೂ ತಲೆದೂಗಬೇಕು.

ಬ್ಯಾಂಕ್ ವ್ಯವಹಾರವನ್ನೇ ಅರಿಯದ ಗಂಗಯ್ಯ ಮತ್ತು ಗಂಗಮ್ಮ ದಂಪತಿಗಳಿಗೆ ಇಲ್ಲಿಗೆ ಕೆಲವರ್ಷಗಳ ಹಿಂದೆ ಹಣವನ್ನು ಬ್ಯಾಂಕ್ ಖಾತೆಯ ಮೂಲಕ ಪಾವತಿಸಲು ಶುರು ಮಾಡಿಕೊಂಡರು. ಇದರ ಹಿಂದಿನ ಮರ್ಮ ಈ ಅಮಾಯಕ ದಂಪತಿಗಳಿಗೆ ಅರಿವಾಗಲೇ ಇಲ್ಲ. ಇತ್ತೀಚಿಗೆ ಈ ದಂಪತಿಗಳನ್ನು ಒಬ್ಬರಾದ ಮೇಲೆ ಒಬ್ಬರಂತೆ ನಿವೃತ್ತಿಗೊಳಿಸಿರುವುದಾಗಿ ತಿಳಿಸಿ ಕೆಲಸದಿಂದ ತೆಗೆದುಹಾಕಿದರು. ಅಷ್ಟು ಮಾತ್ರವಲ್ಲದೆ, ಅವರು ವಾಸಿಸುತ್ತಿದ್ದ ಮನೆಯನ್ನು ಖಾಲಿ ಮಾಡಬೇಕೆಂದು ಸೆಕ್ಯೂರಿಟಿ ಗಾರ್ಡ್‌ಗಳ ಹೆಸರಿನಲ್ಲಿ ಸ್ಥಳೀಯ ಗೂಂಡಾಗಳ ಮೂಲಕ ದೌರ್ಜನ್ಯ ಶುರುವಿಟ್ಟುಕೊಂಡರು. ಅಸಹಾಯಕ ಗಂಗಯ್ಯನ ಕುಟುಂಬದವರು ಈ ಬಗ್ಗೆ ಪೊಲೀಸ್ ಕಂಪ್ಲೈಂಟ್ ಕೊಟ್ಟಿದ್ದರೂ ಕೂಡ ಪರಿಣಾಮ ಮಾತ್ರ ಶೂನ್ಯ.

ಈ ಬಡಪಾಯಿಗಳಿಗೆ ನೀರು ಕಟ್ ಮಾಡುವುದು, ಕರೆಂಟ್ ಕಟ್ ಮಾಡುವುದು, ದಾರಿ ಬಂದ್ ಮಾಡುವುದು ಮುಂತಾದ ಹೀನತಂತ್ರಗಳನ್ನು ಶುರುವಿಟ್ಟುಕೊಂಡರು. ಗೂಂಡಾಗಳಿಂದ ಬೆದರಿಕೆ ಹಾಕಿಸುವ ತಂತ್ರ ಹೂಡಿದರು. ಆದರೆ ಏನೇ ಕಷ್ಟ ನಷ್ಟಗಳು ಬಂದರೂ ಜಾಗ ಬಿಟ್ಟು ಕದಲಬಾರದೆಂದು ಗಂಗಯ್ಯನ ಕುಟುಂಬ ದೃಢ ನಿರ್ಧಾರಕ್ಕೆ ಬಂದಿದೆ. ಹೀಗಾಗಿ ಮಾನವ ಹಕ್ಕು ಆಯೋಗ, ಎಸ್‌ಸಿ-ಎಸ್‌ಟಿ ಆಯೋಗಗಳಿಗೆ ದೂರು ನೀಡಿರುವ ಗಂಗಯ್ಯ ಕಾನೂನು ಹೋರಾಟ ಮುಂದುವರೆಸಿದ್ದಾರೆ.

ಆದರೆ ಉಳುವವನಿಗೆ ಭೂಮಿ ಕಾಯಿದೆ, ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ಹಂಚುವ ಕಾಯಿದೆ, ಕಾರ್ಮಿಕ ಕಾಯಿದೆ, ಅಕ್ರಮ ನಿವಾಸಿಗಳ ಕಾಯಿದೆ ಮುಂತಾದ ಕಾಯಿದೆಗಳಲ್ಲಿ ಯಾವ ಕಾಯಿದೆಯನ್ನು ಅನ್ವಯಿಸುತ್ತದೆ ಎಂಬುದೇ ದೊಡ್ಡ ಪ್ರಶ್ನೆಯಾಗಿದೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ವೀರಸಂಗಯ್ಯನವರಿಗೆ ನಿಮ್ಮ ನೆರವು ಅಗತ್ಯವಾಗಿದೆ

ರೈತಸಂಘ ಮತ್ತು ಕರ್ನಾಟಕ ಕೋಮುಸೌಹಾರ್ದ ವೇದಿಕೆಗಳೊಂದಿಗೆ ತಮ್ಮನ್ನು ತೊಡಗಿಸಿಕೊಂಡು ಹಲವಾರು ದಶಕಗಳಿಂದ ಹೋರಾಟ ಮಾಡುತ್ತಾ ಬಂದಿರುವ ನಮ್ಮೆಲ್ಲರ ಮಿತ್ರ ಮತ್ತು ಕೃಷಿಕ ವೀರಸಂಗಯ್ಯನವರಿಗೆ ಸದ್ಯದಲ್ಲೇ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಶಸ್ತ್ರಚಿಕಿತ್ಸೆ ನಡೆಯಲಿದೆ.

2003ರ ಜೂನ್‌ನಲ್ಲಿ ಮೀಟರ್ ಅಳವಡಿಕೆಯ ವಿರುದ್ಧ ಮತ್ತು ಸಮಾನ ವಿದ್ಯುತ್ ಹಂಚಿಕೆಯ ಬೇಡಿಕೆಯನ್ನು ಮುಂದಿಟ್ಟುಕೊಂಡು ಸಹಸ್ರಾರು ರೈತರ ಬೆಂಬಲದಲ್ಲಿ ಹೋರಾಟಕ್ಕಿಳಿದಿದ್ದ ಇವರನ್ನು ಅಕ್ರಮವಾಗಿ ಬಂಧಿಸಿದ ಪೊಲೀಸರು ಟಿ.ಆರ್.ಗೌಂಡಿನಲ್ಲಿ ರಾತ್ರೋರಾತ್ರಿ ಮನಬಂದಂತೆ ಥಳಿಸಿದ್ದರು. ಪೊಲೀಸ್ ದೌರ್ಜನ್ಯದ ಅವತ್ತಿನ ಬಹುಪಾಲು ಏಟುಗಳು ಬಿದ್ದದ್ದು ವೀರಸಂಗಯ್ಯನವರ ಬೆನ್ನಿನ ಕೆಳಭಾಗಕ್ಕೆ. ಅವರ ಕಿಡ್ನಿಯನ್ನೇ ಡ್ಯಾಮೇಜು ಮಾಡಿಬಿಡುವಷ್ಟು ಬಲವಾದ ಏಟುಗಳಾಗಿದ್ದವು. ಅದರ ಪರಿಣಾಮವಾಗಿ ಈಗ ಅವರ ಎರಡೂ ಮೂತ್ರಪಿಂಡಗಳು ವೈಫಲ್ಯವಾಗಿವೆ. ಅದಕ್ಕಾಗಿ ಅವರಿಗೀಗ ಬದಲೀ ಮೂತ್ರಪಿಂಡ ಜೋಡಣೆ ಆಗಬೇಕಿದೆ. ಎಲ್ಲರಿಗೂ ಗೊತ್ತಿರುವಂತೆ ಇದು ದುಬಾರಿ ಚಿಕಿತ್ಸೆ.

ಬದುಕಿನ ಉದ್ದಕ್ಕೂ ನಿಸ್ವಾರ್ಥ ಚಳವಳಿ, ಹೋರಾಟಗಳನ್ನೇ ರೂಢಿಸಿಕೊಂಡಿರುವ ವೀರಸಂಗಯ್ಯನವರಾಗಲಿ ಅವರ ಕುಟುಂಬವಾಗಲಿ ಚಿಕಿತ್ಸೆಯ ವೆಚ್ಚವನ್ನು ಭರಿಸುವಷ್ಟು ಶಕ್ತವಾಗಿಲ್ಲ ಎಂಬುದನ್ನು ಒತ್ತಿ ಹೇಳುವ ಅಗತ್ಯವಿಲ್ಲ.

ಈ ವೈದ್ಯಕೀಯ ವೆಚ್ಚ ಭರಿಸಲು ಆಪ್ತರು, ಸಮಾನ ಮನಸ್ಕರು, ಜೀವಪರ ಕಾಳಜಿವುಳ್ಳವರು ಮುಂದಾಗಬೇಕಿದೆ. ಹೋರಾಟ ಜೀವವೊಂದನ್ನು ಉಳಿಸಿಕೊಳ್ಳುವ ಸಲುವಾಗಿ ನಮ್ಮ ಕೈಲಾದಷ್ಟು ಸಹಾಯ ಮಾಡುವುದು ನಮ್ಮೆಲ್ಲರ ಕರ್ತವ್ಯವಲ್ಲವೆ?


ಆಸಕ್ತರು ಕೆಳಗೆ ನೀಡಿರುವ ವೀರಸಂಗಯ್ಯನವರ ಅಕೌಂಟ್ ನಂಬರ್‌ಗೆ ಹಣವನ್ನು ವರ್ಗಾಯಿಸಬಹುದು. ಅವರನ್ನು ಖುದ್ದಾಗಿ ಸಂಪರ್ಕಿಸಿಯೂ ತಮ್ಮ ಸಹಾಯದ ನೆರವನ್ನು ನೀಡಬಹುದು. ಅಥವಾ ಅವರ ವಿಳಾಸಕ್ಕೆ ಚೆಕ್, ಮನಿ ಆರ್ಡರ್‌ಗಳನ್ನೂ ಕಳುಹಿಸಬಹುದು.

ಪ್ಲೀಸ್, ಇದೊಂದು ಜವಾಬ್ದಾರಿಯನ್ನು ಜೊತೆಯಾಗಿ ನಿಭಾಯಿಸೋಣ ಬನ್ನಿ......

ಅಕೌಂಟ್ ನಂಬರ್ 31226667581
ಎಸ್.ಬಿ.ಐ, ಗಾಂಧಿನಗರ ಶಾಖೆ, ಬೆಂಗಳೂರು.
ಮೊಬೈಲ್ ನಂಬರ್: 9342658829

ಜೆ.ಎಂ. ವೀರಸಂಗಯ್ಯ
ಪಿಂಜಾರ ಹೆಗ್ಡಾಳು (ಅಂಚೆ)
ಹಗರಿಬೊಮ್ಮನಹಳ್ಳಿ ತಾಲ್ಲೂಕ್
ಬಳ್ಳಾರಿ ಜಿಲ್ಲೆ 583212

ಯಾರದಾದರೂ ಆಗಲಿ, ಸಾವು ಸೂತಕವೇ...



ಏಕೋ ಅಜ್ಮಲ್ ಕಸಬ್ ಮರಣದಂಡನೆಗೆ ಇಡೀ ದೇಶವೇ ಸಂಭ್ರಮಿಸುತ್ತಿರುವುದನ್ನು ಮಾಧ್ಯಮಗಳು ವರದಿ ಮಾಡುತ್ತಿರುವಾಗ ಮನಸ್ಸು ಖಿನ್ನವಾಗುತ್ತಿದೆ. ಒಂದು ಜೀವಹರಣವನ್ನು ಸಂಭ್ರಮಿಸುವುದಾದರೂ ಹೇಗೆ? ನೋಡೋಣವೆಂದು ಬಿಬಿಸಿ ನ್ಯೂಸ್ ಹಾಕಿದರೆ ಮರಣ ದಂಡನೆ ಬೇಕೇ ಬೇಡವೇ ಎಂಬ ಆನ್ಲೈನ್ ವೋಟಿಂಗ್ ನಡೆಯುತ್ತಿತ್ತು. 17% ಜನ ಬೇಡವೆಂದು ಮತ ಹಾಕಿದ್ದರೆ 80% ಬೇಕು ಎಂದು ಹೇಳಿದ್ದರು. ತಪ್ಪಿತಸ್ಥನನ್ನು ಶಿಕ್ಷಿಸುವ ಈ ಉನ್ಮಾದ ಯುದ್ಧೋನ್ಮಾದಕ್ಕಿಂತ ಹೇಗೆ ಭಿನ್ನ ಎಂದು ಅಚ್ಚರಿಪಡುವಾಗ ಕಸಬ್ ರಕ್ಷಣೆಗಾಗಿ ಖರ್ಚು ಮಾಡಿದ ಕೋಟ್ಯಂತರ ರೂಪಾಯಿ ವೆಚ್ಚ ವರದಿಯಾಗುತ್ತಿದೆ. ಕೋಟ್ಯಂತರ ಖರ್ಚು ಏತಕ್ಕಾಯಿತು? ಅದೇನು ಕಸಬ್ ಬಟ್ಟೆಬರೆ, ಊಟತಿಂಡಿಗಾಗಿ ಖರ್ಚಾಯಿತೆ? ಅದನ್ನು ಪಡೆದವರು ಸೆಕ್ಯುರಿಟಿ ಏಜೆನ್ಸಿ ಹೆಸರಿನ ಪೊಲೀಸ್ ಮತ್ತಿತರ ಆಂತರಿಕ ರಕ್ಷಣಾ ವ್ಯವಸ್ಥೆಯಲ್ಲವೆ? ಖರ್ಚು ಮಾಡಿದ್ದು ಕಸಬ್‌ನನ್ನು ಜೀವಂತ ಉಳಿಸಿ ಗಲ್ಲಿಗೇರಿಸಬೇಕಾದ ಭಾರತದ ರಾಜಕೀಯ ಹಿತಾಸಕ್ತಿಗಾಗಿ ಅಲ್ಲವೆ? ಹಾಗಿರುವಾಗ ಅದರ ಭಾರ ಕಸಬ್ ತಲೆಯ ಮೇಲೆ ಹೇರಲಾಗುವುದಿಲ್ಲ. ಕೋಟ್ಯಂತರ ಮಕ್ಕಳು ಅಪೌಷ್ಟಿಕತೆ-ಹಸಿವಿನಿಂದ ನಾನಾ ರೋಗರುಜಿನಗಳಿಗೆ ತುತ್ತಾಗುತ್ತಿರುವಾಗ ಭಯೋತ್ಪಾದಕನೊಬ್ಬನ ರಕ್ಷಣೆಗೆ ಕೋಟಿಗಟ್ಟಲೆ ಖರ್ಚು ಮಾಡಿರುವುದಕ್ಕೆ ಈ ವ್ಯವಸ್ಥೆ ಕಾರಣವೇ ಹೊರತು ನೂರಾರು ಜನರನ್ನು ಕೊಂದು ಜೈಲು ಸೇರಿದ್ದ ಕಸಬ್‌ನಲ್ಲ.

ಅಪ್ಪನಿಂದ ಒಂದೂವರೆ ಲಕ್ಷ ರೂಪಾಯಿಗೆ ಮಾರಲ್ಪಟ್ಟ ಅತಿ ಬಡವ ಅಜ್ಮಲ್ ಕಸಬ್ ಹಸಿವಿನಿಂದ ಮಿಠಾಯಿ ಅಂಗಡಿಯಲ್ಲಿ ಕಳ್ಳತನ ಶುರುಮಾಡಿ ಕರುಣೆಯಿಲ್ಲದ ಅಪರಾಧ ಜಗತ್ತಿಗೆ ಕಾಲಿಟ್ಟವನು. ನಂತರ ಅವರಿವರ ಕಿಸೆ ಎಗರಿಸುವುದು, ಕಳ್ಳತನ ಅವನ ದಂಧೆಯಾಗಿತ್ತು. ಕರಾಚಿಯ ಶಸ್ತ್ರಾಸ್ತ್ರ ಎಕ್ಸಿಬಿಷನ್ನಲ್ಲಿ ಆಸೆಯ ಕಂಗಳಿಂದ ಪಿಸ್ತೂಲುಗಳನ್ನು ನೋಡುತ್ತ, ಕೊಳ್ಳಲು ದುಡ್ಡಿರದಿದ್ದುದಕ್ಕಾಗಿ ಪರಿತಪಿಸುತ್ತ, ಎಗರಿಸಬಹುದೇ ಎಂದು ಸಂಚು ಹಾಕುತ್ತಿದ್ದವ ಬಿದ್ದದ್ದು ತಾಲಿಬಾನಿನ ಕಣ್ಣಿಗೆ. ಅವನನ್ನು ಕ್ಯಾಂಪಿಗೊಯ್ದು ಸರಿಯಾಗಿ ಉಣಿಸಿ, ತಿನಿಸಿ, ಧಾರ್ಮಿಕ ಪಠಣ ಕಲಿಸಿ, ಐದು ಲಕ್ಷ ರೂಪಾಯಿಗಾಗಿ ಮತ್ತು ಸತ್ತರೆ ಸೀದಾ ಸ್ವರ್ಗದ ಆಸೆಗಾಗಿ ಭಾರತಕ್ಕೆ ಇನ್ನಿತರ ಒಂಭತ್ತು ಜನರೊಡನೆ ಕಳಿಸಲ್ಪಟ್ಟ. ದುಡ್ಡು ಕೊಡುವುದಾದರೆ ಪಾಕಿಸ್ತಾನದ ಮೇಲೆ ಬೇಕಾದರೂ ದಾಳಿ ನಡೆಸಲು ಸಿದ್ಧನಿದ್ದ ಕಸಬ್‌ಗೆ ಮುಂದೇನಾಯಿತು ಎನ್ನುವುದು ಸರ್ವವಿದಿತ.

ಕೊನೆಗಳಿಗೆಯ ತನಕ ಗಲ್ಲಿಗೇರುತ್ತಿರುವುದು ಅವನಿಗೆ ತಿಳಿದಿರಲಿಲ್ಲ. ಆದರೆ ಹಾಗೆಂದು ತಿಳಿದ ಬೆಳಗ್ಗೆ ಪ್ರಾರ್ಥನೆ ಮುಗಿಸಿ, ಮೌನವಾಗಿದ್ದರೂ ಅಧೀರನಾಗಿದ್ದುದು ಅವನ ಚಹರೆಯಿಂದ ತಿಳಿದುಬರುತ್ತಿತ್ತೆಂದು ಜೈಲು ಅಧಿಕಾರಿಗಳು ಹೇಳಿದ್ದಾರೆ. ಯರವಾಡ ಜೈಲು ಭಾರತೀಯರ ಭಾವಕೋಶದಲ್ಲಿ ಬೇರೆಬೇರೆ ಕಾರಣಗಳಿಗೆ ನೆನಪಿನಲ್ಲುಳಿದಿದೆ. ಈಗದಕ್ಕೆ ಒಂದು ಸಾವಿನ ಸೂತಕವೂ ಸೇರಿಕೊಂಡಿದೆ.

ಆದರೂ...

'ಅಮ್ಮಿಗೆ ವಿಷಯ ತಿಳಿಸಿ' ಎನ್ನುವುದು ಬಿಟ್ಟರೆ ಕೊನೆ ಆಸೆಯೊಂದೂ ಇಲ್ಲದೇ ಗಲ್ಲಿಗೇರಿದ ಕಸಬ್ ನೆನೆದರೆ ಸಂಕಟ...

ಈಗೆರಡು ವರ್ಷದ ಕೆಳಗೆ ಬರೆದ ಈ ಪ್ರಕಟಿತ ಕವಿತೆ ನೆನೆದು ಕಣ್ಣು ಮಂಜುಮಂಜು..

ಅದಕ್ಕೂ ಮುನ್ನ..
ಗಲ್ಲುಶಿಕ್ಷೆಯ ನೇಣು
ಕಣ್ಣೆದುರು ತೂಗುತ್ತಿರುವಾಗಲೂ
ಮನಬಿಚ್ಚಿ ಅಳಲಾರದ
ಅಜ್ಮಲ್ ಕಸಬ್ ಎಂಬ
ಚಂಚಲ ಉಡಾಫೆ ಕಣ್ಣುಗಳ ಹುಡುಗ
ಸತ್ತ ಮೇಲಿನ ಸ್ವರ್ಗದಾಸೆಗೆ
ಸೊಂಟಕ್ಕೆ ಬಾಂಬು ಕಟ್ಟಿಕೊಂಡ
ನಂಬರ್ ಒನ್ ಭಯೋತ್ಪಾದಕ..

ಅದಕ್ಕೂ ಮುನ್ನ
ಲಕ್ಷಗಳ ಕನವರಿಕೆಯಲ್ಲಿ
ಅಮ್ಮಿಗೂ ತನ್ನ ಜೊತೆ
ಸ್ವರ್ಗದಲ್ಲೊಂದು ಸೀಟು ಕಾದಿರಿಸಿ
ಧರ್ಮಾರ್ಥ ಚಿಂತಿಸುತ್ತಿದ್ದ
ಭಾವೀ ಭಯೋತ್ಪಾದಕ..

ಅದಕ್ಕೂ ಮುನ್ನ
ಯಾರದೋ ದ್ವೇಷದ ಬೆಂಕಿಗೆ
ಮತ್ಯಾರದೋ ಕೈಕಾಲು ಮುರಿದು
ಹಲವು ಸಾವಿರ ಗಳಿಸಿದ್ದ
ಕ್ರಿಮಿನಲ್..

ಅದಕ್ಕೂ ಮುನ್ನ
ಪುಡಿಕಾಸಿಗೆ ಅವರಿವರ ಪರ್ಸು ಎಗರಿಸಿ
ಸ್ಲೇಟು ಹಿಡಿದು ಪಟ ತೆಗೆಸಿಕೊಂಡ
ಆರ್ಡಿನರಿ ಕಿಸೆಗಳ್ಳ..

ಅದಕ್ಕೂ ಮುನ್ನ
ಕಾಸಿಲ್ಲದೇ ಕೆಲಸವಿಲ್ಲದೇ
ಗುರಿಯಿಲ್ಲದೇ ನೆಲೆಯಿಲ್ಲದೇ
ಬರಿಗೈಲಿ ಅಂಡಲೆದ
ಹಸಿದ ಪುಂಡಪೋಕರಿ..

ಅದಕ್ಕೂ ಮುನ್ನ
ಮದರಸಾದ ಮೂಲೆಯಲಿ
ನೆಲಕಚ್ಚಿ ಕುಳಿತು
ಅಲಿಫ್ ಬೆ ಪೆ ತಿದ್ದಿದ
ಎಳೆಯ ಪೋರ..

ಅದಕ್ಕೂ ಮುನ್ನ
ಅಮ್ಮಿಯ ದುಪಟ್ಟಾದ ಮರೆಯಲ್ಲವಿತು
ಬಿಸಿಲ ಕೋಲಿನ ಜಾಡ ಹಿಡಿದು
ಆಕಾಶ ದೀಪ ನೋಡಿದವ..
ಅವಳ ಮಡಿಲೊಳಾಡಿದ ಕೂಸು..
ಅವಳು ಸಹಿಸಿದ ಬೇನೆಯ ನೋವು..
ಅವಳ ಭವಿಷ್ಯದ ಕನಸು
ಮೊಳೆಯಲು ಕಾದಿದ್ದ ಒಡಲ ಬೀಜ...

ಒಂದೇ ಆಸೆ
ಈ ಕಸಾಬ್‌ನನ್ನೊಮ್ಮೆ ಹೆರಬೇಕು
ಬೆಚ್ಚಗಿನ ಮೊಲೆಹಾಲು ಕುಡಿಸಿ
ಮಗನೇ ಹಾಗಲ್ಲ ಹೀಗೆಂದು
ಕಿವಿ ಹಿಂಡಿ ಹೇಳುವ
ಅಮ್ಮನಾಗಬೇಕು..

****

ಸಾವು ನಮಗೆ ಪಾಠ ಕಲಿಸುವುದೆಂದಾದರೆ ಕಸಬ್ ಸಾವು ಎಳೆಯದು ಯಾವ ದಾರಿ ಹಿಡಿಯಬಾರದೆಂದು ತೋರಿಸುವ ಪ್ರತೀಕವಾಗಲಿ.

■ ಡಾ.ಎಚ್.ಎಸ್.ಅನುಪಮಾ


ಸೌಜನ್ಯ

ಧರ್ಮಸ್ಥಳ: ಸೌಜನ್ಯಳ ರೇಪ್ ಮತ್ತು ಮರ್ಡರ್ ಮಾಡಿದ್ದು ಹೆಗ್ಗಡೆ ಬಳಗದವರಾ?

■ ನಹುಷ


ವೀರೇಂದ್ರ ಹೆಗ್ಗಡೆ

ಧರ್ಮಸ್ಥಳ ಎಂದರೆ 'ಹೆಗ್ಗಡೆ ರಿಪಬ್ಲಿಕ್'! ಹಲವು ದಶಕಗಳಿಂದ ಜನಮಾನಸದಲ್ಲಿ ಕಾಡುತ್ತಿರುವ ಇಂಥದೊಂದು ಅನುಮಾನ ಈಗ ಸಾಕ್ಷ್ಯಾಧಾರ ಸಮೇತ ಸಾಬೀತಾಗುತ್ತಿದೆ. ಕೋಟ್ಯಾಂತರ ರೂ. ವಹಿವಾಟಿನ ಈ ಧಾರ್ಮಿಕ ದಂಧೆ ಸಾಮ್ರಾಜ್ಯದ 'ದೊರೆ' ವೀರೇಂದ್ರ ಹೆಗ್ಗಡೆ ಬಳಗದ ಅನ್ಯಾಯ-ಅನಾಚಾರ-ಅವಾಂತರದ ಬಗ್ಗೆ ಯಾರೂ ಉಸಿರೆತ್ತುವಂತಿಲ್ಲ, ಹಾಗೇನಾದರೂ ಅಂಥ ಉದ್ಧಟ ಮಾತಾಡಿದರೆ ಮಂಜುನಾಥ ಸ್ವಾಮಿ ಪಾದ ಸೇರುವುದು ಗ್ಯಾರಂಟಿ!!!

ಇಂಥ ಅಧರ್ಮದ ಸ್ಥಳದ ಅಸಲಿ ಅವತಾರ ಈಗ ಅನಾವರಣ ಆಗುತ್ತಿದೆ. ಕಳೆದ ಒಂದೂವರೆ ತಿಂಗಳಿಂದ ಒಂದರ ಹಿಂದೊಂದರಂತೆ ಈ ಕ್ಷೇತ್ರದ ಭಯಾನಕ ಮಹಿಮೆ ಬಿಚ್ಚಿಕೊಳ್ಳುತ್ತಲೇ ಇದೆ. ಸೌಜನ್ಯ ಗೌಡ ಎಂಬ ಅಮಾಯಕ ವಿದ್ಯಾರ್ಥಿನಿಯನ್ನು ಹಾಡುಹಗಲೇ ಹೊತ್ತೊಯ್ದು ನಿರಂತರ ಅತ್ಯಾಚಾರ ನಡೆಸಿ ನಂತರ ಬರ್ಬರವಾಗಿ ಕೊಂದೆಸೆದಿರುವುದು ಧರ್ಮಸ್ಥಳದಲ್ಲಿ ಯಾತ್ರಾರ್ಥಿಗಳದಿರಲಿ, ಸ್ಥಳೀಯರ ಜೀವವೂ ಸುರಕ್ಷಿತವಲ್ಲ ಎಂಬುದನ್ನು ಜಗತ್ತಿಗೆ ಸಾರಿ-ಸಾರಿ ಹೇಳುತ್ತಿದೆ; ಅಷ್ಟೇ ಅಲ್ಲ, ದೇವಧೂತನ ಗೆಟಪ್ಪಿನಲ್ಲಿ ನಾಡಿನಾದ್ಯಂತ ಕಂಗೊಳಿಸುವ ಮೃದು ಮುಖವಾಡದ ಹೆಗ್ಗಡೆಯ 'ಧರ್ಮಾಡಳಿತ'ದ ಬಗ್ಗೆ ಅನೇಕಾನೇಕ ಅನುಮಾನ ಮೂಡಿಸಿಬಿಟ್ಟಿದೆ!!!

ಅತ್ಯಾಚಾರ-ಕಗ್ಗೊಲೆ!!

ಸೌಜನ್ಯಳ ತಂದೆ ಪಿಡಬ್ಲ್ಯೂಡಿ ಕಂಟ್ರಾಕ್ಟರ್ ಚಂದ್ರಪ್ಪ ಗೌಡ ಮತ್ತು ತಾಯಿ ಕುಸುಮಾ ಕಂಗಾಲಾಗುತ್ತಾರೆ. ರಾತ್ರಿಯಿಡೀ ನೇತ್ರಾವತಿ ಸ್ನಾನಘಟ್ಟ ಮತ್ತು ಪ್ರಕೃತಿ ಚಿಕಿತ್ಸಾಲಯದ ಬಳಿಯ ಕಾಡಿನಲ್ಲಿ ಊರವರು ಹುಡುಕುತ್ತಾರೆ. ಹಠ ಹಿಡಿದು ಒಂದೇಸಮನೆ ಬೀಳುತ್ತಿದ್ದ ಮಳೆಯಲ್ಲಿ ಎಷ್ಟು ಹುಡುಕಿದರೂ ಸೌಜನ್ಯ ಸಿಗುವುದಿಲ್ಲ.

ಅವನು ಸಂತೋಷ್ ರಾವ್

ಮರುದಿನ ಮುಂಜಾನೆಯಿಂದ ಮತ್ತೆ ಸೌಜನ್ಯಳ ಪಾಲಕರು ಊರವರ ಜತೆಗೂಡಿ ಕಾಡು-ಮೇಡು-ನಾಡೆಲ್ಲಾ ಹುಡುಕುತ್ತಾರೆ. ಸುಮಾರು ಹತ್ತು ಗಂಟೆಯ ವೇಳೆ ಸೌಜನ್ಯಳ ಮೃತ ದೇಹ ನೇತ್ರಾವತಿ ನದಿಯ ದಡದಲ್ಲಿ ಯಾತ್ರಿಕರಿಗಾಗಿ ಕ್ಷೇತ್ರದವರು ಮಾಡಿರುವ ಭೀಭತ್ಸ ಸ್ನಾನಘಟ್ಟದ ಬಳಿಯ ಕಾಡಲ್ಲಿ ಗೋಚರಿಸುತ್ತದೆ. ಸೌಜನ್ಯ ಅರೆ ಬೆತ್ತಲಾಗಿ ಬಿದ್ದಿದ್ದಳು. ಆಕೆಯ ಒಳ ಉಡುಪು ಇರಲಿಲ್ಲ, ಮರ್ಮಾಂಗಕ್ಕೆ ಮಣ್ಣೆಲ್ಲ ತುಂಬಲಾಗಿತ್ತು, ಕಾಲಿಂದ ಆಗತಾನೆ ಆದಂಥ ಗಾಯದಿಂದ ರಕ್ತ ಬಸಿಯುತ್ತಿತ್ತು, ಆಕೆಯ ಪುಸ್ತಕದ ಚೀಲ ಎಡಕ್ಕೆ ಮೇಲೆ ಬಿದ್ದಿತ್ತು; ಕೈಗಳನ್ನು ಆಕೆಯದೇ ವೇಲ್‌ನಿಂದ ಪೊದೆಯೊಂದಕ್ಕೆ ಕಟ್ಟಲಾಗಿತ್ತು.

ನಿರಂತರವಾಗಿ ಸೌಜನ್ಯಳ ಮೇಲೆ ಗ್ಯಾಂಗ್ ರೇಪ್ ಆದಂತೆ ಅನ್ನಿಸುತ್ತಿತ್ತು, ಹಾಗೆಯೇ ಆಕೆಗೆ ಚಿತ್ರ ಹಿಂಸೆ ಕೊಟ್ಟು ಕೊಂದಿರುವುದು ಆ ದೇಹ ನೋಡಿದ ಹಾಗಂತ ಯಾರಿಗೂ ತೊಂದರೆ ಕೊಟ್ಟವನಲ್ಲ.

ಈತನನ್ನು ಅರೆಸ್ಟ್ ಮಾಡಿದಾಗ ಪೊಲೀಸರಿಗೆ, ತನ್ನನ್ನು ಪ್ರಶ್ನಿಸಿದವರಿಗೆ, ಈಗ ಜಿಲ್ಲಾ ಜೈಲಿನಲ್ಲಿರುವ ಸಹಕೈದಿಗಳಿಗೆಲ್ಲ ಹೇಳಿದ್ದು ಒಂದೇ ಮಾತು, "ನಾನು ಸೌಜನ್ಯಳನ್ನು ಕೊಂದಿಲ್ಲ, ರೇಪಂತೂ ಮಾಡೇ ಇಲ್ಲ, ಕಾಡಿಗೆ ಹೊತ್ತೊಯ್ದು ಮೂರು ಜನರಿಗೆ ಒಪ್ಪಿಸಿದ್ದು ನಿಜ. ಅವರೆಲ್ಲಾ ಆಕೆಯನ್ನು ಅದ್ಯಾವುದೋ ರೂಮಿಗೆ ಕರೆದೊಯ್ದರು..." ಅನ್ನುತ್ತಾನೆ ಸಂತೋಷ್. ಆ ಮೂವರು ಯಾರೆಂದು ಜನರಿಗೆ ಹೇಳುವುದಿಲ್ಲ, ಹಾಗಂತ ಪೊಲೀಸರಿಗೆ ಹೇಳಿದರೂ ಅವರು ನಿಗೂಢವಾಗಿಟ್ಟಿದ್ದಾರೆ. ಸಂತೋಷ್‌ನೊಬ್ಬನೇ ಅತ್ಯಾಚಾರಿ-ಕೊಲೆಗಡುಕ ಎಂಬ ಭಾವನೆ ಬಿತ್ತುತ್ತಿದ್ದಾರೆ.

ಸಂಶಯದ ಸರಮಾಲೆ

ಗೊಮ್ಮಟ ಬೆಟ್ಟದಲ್ಲಿ ಪುಂಡರಿಂದ ಪೆಟ್ಟು ತಿಂದು ಜರ್ಜರಿತನಾಗಿರುವ ಸಂತೋಷ್ ಕ್ಷಣಕ್ಕೊಮ್ಮೆ ಮಾತು ಬದಲಿಸುತ್ತಾನೆ. ಹಾಗಂತ ಆತ ಮಳ್ಳನೇನಲ್ಲ, ಆದರೆ ಪೊಲೀಸರು ಆತ ಮಾನಸಿಕ ಅಸ್ವಸ್ಥ ಎನ್ನುತ್ತಿದ್ದಾರೆ. ತಪ್ಪೊಪ್ಪಿಕೊಂಡಿದ್ದಾನೆ ಅನ್ನುತ್ತಾರೆ. ಆದರೆ ಅಮಾನುಷ ಹತ್ಯೆ-ಅತ್ಯಾಚಾರ ಮಾಡಿರುವ ಎಂಥ ಮಾನಸಿಕ ಮನುಷ್ಯನೇ ಆಗಲಿ, ಅಪರಾಧ ಮಾಡಿದ ನಂತರ ಅದೇ ಸ್ಥಳದಲ್ಲಿ ಮೂರ್‍ನಾಲ್ಕು ದಿನ ಇರಲು ಸಾಧ್ಯವಾ? ಮನೋರೋಗಿಗಳ ಪ್ರಕಾರ- ಮಾನಸಿಕ ರೋಗಿಗಳು ಅತ್ಯಾಚಾರ ಎಸಗುವುದು ತೀರಾ ಅಪರೂಪ.

ಸಂತೋಷ್ ನೈಜ ಆರೋಪಿ ಅಲ್ಲವೇ ಅಲ್ಲ ಎಂಬುದು ಇಡೀ ಬೆಳ್ತಂಗಡಿ ತಾಲ್ಲೂಕಿನ ಜನರ ಒಕ್ಕೊರಲ ಅಭಿಪ್ರಾಯ. ಆತನಿಗೆ ಸೌಜನ್ಯಳಂಥ ಗಟ್ಟಿ ಹುಡುಗಿಯ ಎಳೆದೊಯ್ಯುವುದಕ್ಕಾಗಲಿ, ರೇಪ್ ಮಾಡುವುದಕ್ಕಾಗಲಿ ತಾಕತ್ತೂ ಇಲ್ಲ, ಆತನ ವಿಚಿತ್ರ ಮಾತುಗಾರಿಕೆಯಲ್ಲಿ ಅಥವಾ ಧರಿಸಿರುವ ಬಟ್ಟೆಯಲ್ಲಿ, ಮೈಮೇಲಿನ ಗುರುತುಗಳಲ್ಲಿ ರೇಪ್ ಅಂಡ್ ಮರ್ಡರ್ ಮಾಡಿದ ಯಾವ ಕುರುಹುಗಳೂ ಇಲ್ಲ, ಒಂದು ಮೂಲದ ಪ್ರಕಾರ ಆತನ ಶಿಶ್ನದ ಮುಂದೊಗಲು ಲೈಂಗಿಕ ಕ್ರಿಯೆಗೆ ಅಡ್ಡಿಪಡಿಸುವಂತೆ ಅಂಟಿಕೊಂಡೇ ಇದೆಯಂತೆ. ಎತ್ತಿಂದೆತ್ತ ತಾಳೆಹಾಕಿ ನೋಡಿದರೂ ಈ ಎಡವಟ್ಟು ಆಸಾಮಿ ರೇಪ್ ಮತ್ತು ಮರ್ಡರ್ ಮಾಡುವ ಮಟ್ಟದಲ್ಲಿ ಇಲ್ಲ ಅನ್ನಿಸುತ್ತದೆ.

ಆದರೆ ಸೌಜನ್ಯಳ ಅಪಹರಣ ಆದ ದಿನ ಮೂರು ಮಂದಿ ಆಗಂತುಕರು ಪಾಂಗಾಳ ಕಾಡಿನಲ್ಲಿ ಓಡಾಡಿಕೊಂಡಿದ್ದರಂತೆ. ಕಪ್ಪಗಿನ ಆ ಮೂವರಲ್ಲಿ ಒಬ್ಬ ಗಂಧಕುಂಕುಮದ ತಿಲಕ ಇಟ್ಟುಕೊಂಡಿದ್ದನಂತೆ. "ಇಲ್ಲಿ ಏನೂ ಮಾಡಲು ಆಗದು" ಎಂದು ತುಳುವಿನಲ್ಲಿ ಮಾತಾಡಿಕೊಂಡಿದ್ದು ಕೇಳಿದವರೂ ಇದ್ದಾರೆ. ಇದಕ್ಕೆ ಸರಿಹೊಂದುವಂತೆ ಸಂತೋಷ್ ಮೂವರಿಗೆಂದು ಪಕ್ಕದ ಹೊಟೇಲಿನಿಂದ ತಿಂಡಿ ಪೊಟ್ಟಣ ಕಟ್ಟಿಸಿಕೊಂಡು ಹೋಗಿದ್ದಾನೆ. ಅಂದರೆ ಸಂತೋಷ್ ಮೂವರು ವಿಕೃತ ಪಾತಕಿಗಳ ಕೈಗೆ ಸೌಜನ್ಯಳನ್ನು ಒಪ್ಪಿಸಿದ್ದಾನೆಂದಾಯ್ತು!

ಸೌಜನ್ಯಳ ದೇಹ ಬಿದ್ದಿದ್ದ ಕಾಡಿನ ಪ್ರದೇಶ, ಆಕೆಯ ದೇಹದ ಚಹರೆ ಕಂಡರೆ ಒಂದಂತೂ ಪಕ್ಕಾ ಆಗುತ್ತದೆ. ಅದೆಂದರೆ, ಸೌಜನ್ಯಳ ರೇಪ್ ಅಂಡ್ ಮರ್ಡರ್ ಕಾಡಿನಲ್ಲಿ ಆಗಿದ್ದೇ ಅಲ್ಲ, ಆಕೆಯನ್ನು ಅದ್ಯಾವುದೋ ಅತಿಥಿಗೃಹಕ್ಕೆ ರೇಪಿಸ್ಟ್‌ಗಳು ಒಯ್ದಿದ್ದಾರೆ. ಅಲ್ಲಿ ಸಾಮೂಹಿಕ ಅತ್ಯಾಚಾರ ಎಂಥವರಿಗೂ ಅರ್ಥವಾಗುತ್ತಿತ್ತು, ಇತ್ತ ಸೌಜನ್ಯಳ ದೇಹ ಎತ್ತಿಕೊಂಡು ಹೋಗಿ ಮಹಜರು ಮಾಡುತ್ತಿರುವಾಗ, ಅತ್ತ ಧರ್ಮಸ್ಥಳದ ಗೊಮ್ಮಟಗುಡ್ಡದಲ್ಲಿ 'ಸಂಶಯಾಸ್ಪದ'ವಾಗಿ ಅಂಡಲೆಯುತ್ತಿದ್ದ ಸಂತೋಷ್ ರಾವ್ ಎಂಬ ವಿಚಿತ್ರ ಮನುಷ್ಯನನ್ನು ಜೈನರ ಪುಂಡರ ದಂಡೊಂದು ಹಿಡಿದು ಚಚ್ಚುತ್ತದೆ. ಮೈ-ಕೈ ಪರಚಿ ಹಾಕುತ್ತದೆ. ಈತನೇ ಸೌಜನ್ಯಳನ್ನು ಕೊಂದವನೆಂದು ಹುಯಿಲೆಬ್ಬಿಸಿ ಪೊಲೀಸರಿಗೆ ಒಪ್ಪಿಸುತ್ತದೆ. ತುಂಬ ವ್ಯವಸ್ಥಿತ -ಪೂರ್ವನಿಯೋಜಿತ ಸ್ಕೆಚ್‌ನಂತೆ ನಡೆಯುವ ಈ 'ಆಪರೇಷನ್ ಆರೋಪಿ' ಕಾರ್ಯಾಚರಣೆಗೆ ದರವೇಶಿ ಪೊಲೀಸರೂ ತಲೆದೂಗುತ್ತಿದ್ದಾರೆ. ಈತನೇ ಸೌಜನ್ಯಳನ್ನು ಕೊಂದವನೆಂದು ಯಾವ ವೈದ್ಯಕೀಯ ಸಾಂದರ್ಭಿಕ ವರದಿ-ತನಿಖೆಗೂ ಕಾಯದೇ 'ಫಿಕ್ಸ್' ಮಾಡುತ್ತಾರೆ ಪೊಲೀಸ್ ಪಾಪಿಗಳು!!


ಹೆಣವಾದ ಸೌಜನ್ಯ


ಸೌಜನ್ಯಳ ಮನೆ...


ಸೌಜನ್ಯಳ ತಾಯಿ-ತಂದೆ


ಸಂತೋಷ್ ರಾವ್

ಪಾಪದ ಹುಡುಗಿ ಸೌಜನ್ಯಳ ಅತ್ಯಾಚಾರ ಮತ್ತು ಕೊಲೆ ಧರ್ಮಸ್ಥಳವೆಂದರೆ ಕೊಲೆ-ಸುಲಿಗೆ-ಅತ್ಯಾಚಾರಗಳ ದುರಾಚಾರದ ತಾಣ ಎಂಬುದನ್ನು ನಿಸ್ಸಂಶಯವಾಗಿ ಸಾಬೀತುಪಡಿಸಿದೆ. ಈ ದೈವಸನ್ನಿಧಿಯಲ್ಲಿ ಹೆಣ್ಣಿನ ಮಾನ-ಪ್ರಾಣಕ್ಕೆ ಒಂಚೂರೂ ಬೆಲೆಯಿಲ್ಲ. ಅಂದು ಅಕ್ಟೋಬರ್ 9ರ ಸಂಜೆ 4.15 ರ ಹೊತ್ತು, ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ಪಿಯುಸಿ ದ್ವಿತೀಯ ವರ್ಗದಲ್ಲಿ ಕಲಿಯುತ್ತಿದ್ದ ಸೌಜನ್ಯ ಗೌಡ ತಿರುಗಿ ಮನೆಗೆ ಬರುತ್ತಿದ್ದಳು. ಕುಪ್ರಸಿದ್ಧ ನೇತ್ರಾವತಿ ನದಿಯ ಸ್ನಾನ ಘಟ್ಟದ ಬಸ್‌ಸ್ಟಾಪ್‌ನಲ್ಲಿ ಇಳಿದಿದ್ದ ಸೌಜನ್ಯ ಹತ್ತಿರದಲ್ಲೇ ಇದ್ದ ಅಪ್ಪನ ಅಂಗಡಿಗೆ ಹೋಗಿ ಮಾತಾಡಿಸಿಕೊಂಡು ಮನೆ ದಾರಿ ಹಿಡಿದಿದ್ದಳು.

ಪ್ರಕೃತಿ ಚಿಕಿತ್ಸಾಲಯದ ಪಕ್ಕದ ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದ ಸೌಜನ್ಯಳ ಜತೆಗೆ ಆ ದಿನ ದಿನವೂ ಇರುತ್ತಿದ್ದ ಗೆಳತಿಯರಿರಲಿಲ್ಲ, ಒಂದೇಸಮನೆ ಧೋ ಎಂದು ಮಳೆ ಬೇರೆ ಸುರಿಯುತ್ತಿತ್ತು, ಹೊಸ ಅಕ್ಕಿ ಊಟದ ಹಬ್ಬ ಅಂದಾದ್ದರಿಂದ ಸಂಭ್ರಮದಲ್ಲಿ ಸೌಜನ್ಯ ಕೊಡೆ ಹಿಡಿದು ದಬದಬನೆ ಮನೆಯತ್ತ ಹೋಗುತ್ತಿದ್ದಳು. ಆಕೆಯ ಮೇಲೆ ಮೂರ್‍ನಾಲ್ಕು ಪಾತಕಿಗಳ ಗ್ಯಾಂಗ್ ಬಂದು ಎರಗುತ್ತದೆ. ಎಳೆದಾಡಿ ಬಲಾತ್ಕಾರವಾಗಿ ಹೊತ್ತೊಯ್ದು ಬಿಡುತ್ತದೆ. ಜನ ನೋಡು-ನೋಡುತ್ತಿದ್ದಂತೆಯೇ ಸೌಜನ್ಯ ಕಣ್ಮರೆ ಆಗುತ್ತಾಳೆ.

ರಾತ್ರಿಯಾದರೂ ಮಗಳು ಮನೆಗೆ ಬಾರದಿದ್ದಾಗ

ಈ ಸಂತೋಷ್ ರಾವ್ ಕೃಶ ಶರೀರದ ಅರೆಅಘೋರಿಯಂಥ ಮನುಷ್ಯ. ಕಾರ್ಕಳದ ಕುಕ್ಕುಂದೂ ಈತನ ಮೂಲ ಊರು. ಕೌಟುಂಬಿಕ ಹಿನ್ನೆಲೆಯೂ ಚೆನ್ನಾಗಿದೆ. ಆದರೆ ಧರ್ಮಸ್ಥಳ-ಸುಬ್ರಹ್ಮಣ್ಯ-ಕೊಲ್ಲೂರು ಎಂದೆಲ್ಲ ದೈವಸನ್ನಿಧಿಗೆ ಹೋಗಿ ಸಿಕ್ಕಿದ್ದು ತಿಂದು, ಜಪ-ತಪ ಮಾಡುವ ಖಯಾಲಿ ಈತನಿಗೆ. ಕಳೆದ ಒಂದು ತಿಂಗಳಿಂದ ಈ ಸಂತೋಷ್ ರಾವ್ ನೇತ್ರಾವತಿ ಸ್ನಾನಘಟ್ಟದ ಬಳಿಯ ಪಾಂಗಾಳ ಕಾಡಲ್ಲಿರುವ ಒಂಥರಾ ಗುಹೆಯಂಥ ಸ್ಥಳದಲ್ಲಿ ನೆಲೆಸಿದ್ದನಂತೆ.

ನೆನಪಾದಳು ಪದ್ಮಲತಾ!!

ಅದು 1987 ರ ದುರಂತ. ಪದ್ಮಲತಾ ಎಂಬ ಹುಡುಗಿಯನ್ನು ಧರ್ಮಸ್ಥಳ ಮಾಫಿಯಾ ಅಪಹರಿಸಿ ಸತತ ಅತ್ಯಾಚಾರ ಮಾಡಿ ನೇತ್ರಾವತಿ ನದಿಗೆ ಎಸೆದಿತ್ತು! ಆ ನಿಷ್ಪಾಪಿ ಹುಡುಗಿ ದೇವಾನಂದ ಎಂಬ ಕಮ್ಯುನಿಸ್ಟ್ ಲೀಡರ್‌ನ ಮಗಳಾಗಿದ್ದೇ ಅಪರಾಧವಾಗಿ ಕಂಡಿತ್ತು ಪರಮಪಂಚಿ ಹರುಕರಿಗೆ. ಅಪ್ಪನ ಮೇಲಿನ ಸೇಡಿಗೆ ಮಾಸ್ ರೇಪ್ ಮಾಡಿ ಆ ಹುಡುಗಿಯನ್ನು ಕೊಲ್ಲಲಾಗಿತ್ತು, ಅಪ್ಪನನ್ನು ಪಳಗಿ ತಮ್ಮ ವಿರುದ್ಧದ ಧ್ವನಿ ಅಡಗಿಸುವ ಹೀನ ಹಿಕಮತ್ತು ಧರ್ಮ ದೊರೆಗಳದಾಗಿತ್ತು.

ಈ ದೇವಾನಂದನ ಜಮೀನಿನ ಮೇಲೆ ಧರ್ಮವಂತರ ಕಣ್ಣುಬಿದ್ದಿತ್ತು, ಆದರೆ ಜೀವನಾಧಾರವಾದ ಜಾಗ ಬಿಡಲು ಆತ ಸಿದ್ಧನಾಗಲಿಲ್ಲ, ಆಗಾತನಿಗೆ ನಿರಂತರ ಕಿರುಕುಳ ಕೊಡಲಾಯ್ತು, ಆತ ಕೇರ್ ಮಾಡಲಿಲ್ಲ, ಅಷ್ಟೇ ಅಲ್ಲ, ಸಣ್ಣಧನಿಯ ಎದುರು ಗ್ರಾಮ ಪಂಚಾಯ್ತಿ ಇಲೆಕ್ಷನ್‌ಗೆ ನಿಂತೂಬಿಟ್ಟ. ನಾಮಪತ್ರ ವಾಪಸಾತಿಗೆ ಎದುರಾಳಿಗಳು ತಿಪ್ಪರಲಾಗ ಹಾಕಿದರು. ದೇವಾನಂದ ಅದಕ್ಕೆ ಸೊಪ್ಪು ಹಾಕಲಿಲ್ಲ, ಆಗಾತನ ನೈತಿಕ ಸ್ಥೈರ್ಯ ಕೆಡಿಸಲು ಮಗಳು ಪದ್ಮಲತಾಳನ್ನೇ ಅಪಹರಿಸಿ ರೇಪ್ ಮಾಡಿ ಕೊಂದು ಹಾಕಿತ್ತು ಧರ್ಮಸ್ಥಳದ ಮಾಫಿಯಾ. ಆಗಿದು ದೊಡ್ಡ ಅಲ್ಲೋಲಕಲ್ಲೋಲ ಮಾಡಿದರೂ ದೇವಧೂತರು ಮಂಜುನಾಥ ಸ್ವಾಮಿ "ದಯೆ"ಯಿಂದ ಕೇಸನ್ನು ಮುಚ್ಚಿ ಹಾಕಿಸಿದ್ದರು! ಡಾ. ಹರಳೆ ಹೆಂಡತಿಯ ಕೊಲೆಯ ಕಳಂಕವೂ ಧರ್ಮಸ್ಥಳಕ್ಕೆ ಅಂಟಿದೆ. ನ್ಯಾಯಯುತವಾಗಿ ಪ್ರಮೋಷನ್ ಆ ಶಿಕ್ಷಕಿ ಕೇಳಿದ್ದೇ ಅಪರಾಧವಾಗಿತ್ತು.

ಈಗ ಸೌಜನ್ಯ ರೇಪ್ ಅಂಡ್ ಮರ್ಡರ್ ಆಗಿದ್ದಾಳೆ. ಅಂದಿನ ಪದ್ಮಲತಾ ಧರ್ಮಸ್ಥಳ ಸೀಮೆಗೆ ನೆನಪಾಗುತ್ತಿದ್ದಾಳೆ. ಅಂದು ಪದ್ಮಲತಾ ಇಂದು ಸೌಜನ್ಯ-ನಾಳೆ ಯಾರು? ಇಂಥದೊಂದು ಆತಂಕದಿಂದ ಬೆಳ್ತಂಗಡಿ ಜನ ಕಂಗಾಲಾಗಿದ್ದಾರೆ. ಸೌಜನ್ಯ ಪ್ರಕರಣವನ್ನೂ ಹಳ್ಳ ಹಿಡಿಸಲು ತರತರದ ತಂತ್ರಗಳು ತೆರೆಮರೆಯಲ್ಲೇ ನಡೆಯುತ್ತಿದೆ. ಆಕೆಯನ್ನು ಸುರಿವ ಮಳೆಯಲ್ಲಿ ಎಳೆದೊಯ್ಯುವಾಗ ನೋಡಿದ್ದ ಗೋಪಾಲ ಮತ್ತು ಶಿಕ್ಷಕಿಯೊಬ್ಬಳ ಬಾಯಿ ಮುಚ್ಚಿಸಲು ಬೆದರಿಕೆಗಳು ಬರಲಾರಂಭಿಸಿವೆ. ಧರ್ಮಸ್ಥಳದ "ಹಿತರಕ್ಷಣೆ"ಗೆ ರಹಸ್ಯ ಕಾರ್ಯಾಚರಣೆ ಬಿರುಸಾಗಿ ನಡೆಯುತ್ತಿದೆ.

ಧರ್ಮಸ್ಥಳ



..ಡಿದ್ದಾರೆ. ನಂತರ ಕೊಂದು ಆಕೆ ಮನೆಗೆ ಹೋಗುವ ..ಗುಂಟ ಇರುವ ಕಾಡಿಗೆ ತಂದು ಎಸೆದಿದ್ದಾರೆ. ..ಕೀಯ ಪರೀಕ್ಷೆಯಲ್ಲಿ ತಮ್ಮ ವೀರ್ಯದ ಪತ್ತೆಯಾಗ ..ದೆಂದು ಆಕೆಯ ಮರ್ಮಾಂಗಕ್ಕೆ- ತೊಡೆಗೆ ಮಣ್ಣು ..ಬಿದ್ದಾರೆ. ಸೌಜನ್ಯಳ ಕೊಲೆ-ಅತ್ಯಾಚಾರ ಕಾಡಿನಲ್ಲಿ ಆಗಿಲ್ಲ ..ದಕ್ಕೆ ಆಕೆಯ ಒದ್ದೆಯಾಗದ ಬಟ್ಟೆ, ಪುಸ್ತಕ-ಪಟ್ಟೆಯ ..ಗಳೇ ಪ್ರಬಲ ಸಾಕ್ಷಿ. ಅಂದು ಇಡೀ ರಾತ್ರಿ ಮಳೆ ..ದೆ. ಆದರೂ ಕಾಡಲ್ಲಿ ಸೌಜನ್ಯಳ ಮೈ-ಪುಸ್ತಕ ..ಯಾಗಿಲ್ಲ ಹೇಗೆ?

ಅಷ್ಟೇ ಅಲ್ಲ, ಕಾಡಲ್ಲಿ ರೇಪ್ ಆಗಿದ್ದಾದರೆ ಹೊರಳಾಡಿದ, ..ಡಿದ ಕಲೆ ಕಾಣಿಸಬೇಕಿತ್ತು. ತುಂಬ ಮೃದು ಮಣ್ಣಿನ ..ನ ಪ್ರದೇಶವದು. ಆದರೂ ಒಂದೇಒಂದು ಪೊದೆಯ ..ರೆಂಬೆ ಕೊಂಕಿಲ್ಲ; ಮಣ್ಣಲ್ಲಿ ಹೊರಳಾಡಿದ ಕುರುಹು ..ಲ್ಲ. ಅಂದರೆ, ಆಕೆಯನ್ನು ಎಲ್ಲೋ ರಾತ್ರಿ ಬೆಳಗಾಗು ..ರೆಗೆ ರೇಪ್‌ಮಾಡಿ ಕೊಂದು ಕಾಡಿಗೆ ತಂದೆಸೆದಿದ್ದಾರೆ. ..ಗೆಯೇ ಆಕೆಯ ಕೊಡೆ ಮಾತ್ರ ಇನ್ನೂ ಪತ್ತೆಯಾಗಿಲ್ಲ. ..ಗೆ ಮೃತದೇಹದ ಬಳಿ ಬಿದ್ದಿದ್ದ ಮೊಬೈಲ್ ಫೋನ್ ..ರಿನ ಚೀಟಿಯನ್ನು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ..ಗೀಶ್ ಬೇಕಂತಲೇ ಅಡಗಿಸಿಟ್ಟಿದ್ದಾನೆ. ಈ ನಂಬರ್ .. ಅಪರಾಧಿಗಳ ಪತ್ತೆಗೆ ನೆರವಾಗುವ ಪ್ರಬಲ ಅಸ್ತ್ರ!! .. ಇದೇ ಕಾಡಲ್ಲಿ ನೂರಾರು ಜನ ಹುಡುಕಿದಾಗ ..ದ ಸೌಜನ್ಯಳ ಶವ ಬೆಳಗ್ಗೆ ಪ್ರತ್ಯಕ್ಷವಾಗಿತ್ತು!

ಪೊಲೀಸರು ಫಿಕ್ಸ್ ಮಾಡಿರುವ ..ೋಪಿ ಸಂತೋಷ್‌ನನ್ನು ಕಾಡಿಗೆ ..ಲೀಸರು ಕರೆದೊಯ್ದು ಘಟನೆ ಬಗ್ಗೆ ..ರ ಕೇಳಿದ್ದೂ ಕೂಡ ಒಂದು ನಾಟಕ ..ತಿದೆ. ಧಾರಾವಾಹಿಯ ಶೂಟಿಂಗ್‌ಗೆ ..ದಂತೆ ಪೊಲೀಸರು ಸಂತೋಷನಿಗೆ ..ದೊಂದೇ ಡೈರೆಕ್ಷನ್ ಕೊಟ್ಟು ವೀಡಿಯೋ ..ಡಿಕೊಂಡಿದ್ದಾರೆ. ಪೊಲೀಸರೇ ಹೇಳಿ ..ಟ್ಟು ಡೈಲಾಗ್ ಹೇಳಿಸಿದ್ದಾರೆ. ಸೌಜನ್ಯಳ ..ಉಡುಪು ಎಲ್ಲಿದೆಯೆಂದೂ ಸಂತೋಷನಿಗೆ ..ತ್ತೇ ಇರಲಿಲ್ಲ. ಪೊಲೀಸರೇ ಎಲ್ಲಿದೆಯೆಂದು ಹೇಳಿ ..ನ ಕೈಯಿಂದ ತೆಗೆಸಿ ಶೂಟ್ ಮಾಡಿಕೊಂಡಿದ್ದಾರೆ.



ಹೆಗ್ಗಡೆ ಹಿಂಡಿಗೆ ಬಲಿ?

ಇಷ್ಟೆಲ್ಲ ಪ್ರಹಸನವನ್ನು ಪೊಲೀಸರು ಯಾಕೆ ..ಡುತ್ತಿದ್ದಾರೆ? ನಿಷ್ಪಕ್ಷಪಾತ-ನಿಷ್ಠೂರ ತನಿಖೆ ಯಾಕೆ ..ಡುತ್ತಿಲ್ಲ? ತನಿಖೆ ಹಳ್ಳದ ಹಾದಿ ಯಾಕೆ ಹಿಡಿಸುತ್ತಿದ್ದಾರೆ? ..ಥ ಪ್ರಶ್ನೆಗಳು ಸಹಜವಾಗೇ ಬೆಳ್ತಂಗಡಿ-ಧರ್ಮಸ್ಥಳ ..ೇ ಅಲ್ಲ, ಇಡೀ ಕರಾವಳಿಯಲ್ಲಿ ಎದ್ದಿದೆ. ಅದಕ್ಕೆ ..ತ್ತರವನ್ನು ಜನ ಕಂಡುಕೊಂಡಿದ್ದಾರೆ. ಧರ್ಮಸ್ಥಳದಲ್ಲಿ

ದುರ್ಧರ್ಮಸ್ಥಳ!!

ಧರ್ಮಸ್ಥಳದಲ್ಲಿರುವುದು 'ಹೆಗ್ಗಡೆ ರಿಪಬ್ಲಿಕ್' ನ ನೀತಿ-ನಿಯಮ! ಈ ನೆಲದ ಕಾನೂನು-ಕಟ್ಟಳೆಗೆ ಇಲ್ಲಿ ನೆಲೆ-ಬೆಲೆಯೇ ಇಲ್ಲ, ಈಗ ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ಹಿಂದೂವಾದಿಗಳ ಅನೈತಿಕ ಪೊಲೀಸ್‌ಗಿರಿಯ ಮಾದರಿ ತುಂಬ ಹಿಂದೆಯೇ ಧರ್ಮಸ್ಥಳದಲ್ಲಿ ಜಾರಿಯಾಗಿದೆ. ದೇವಧೂತರು ತಮ್ಮ ಹಿಡಿತ ಬಿಗಿಗೊಳಿಸಲು ಹುಟ್ಟುಹಾಕಿದ ಈ ಗೂಂಡಾಗಳೀಗ ಅವರ ಆಡಳಿತದ ಹದ್ದು ಮೀರಿ ಬೆಳೆದಿದ್ದಾರೆ.

ಧರ್ಮಸ್ಥಳಕ್ಕೆ ಬರುವ ಯಾತ್ರಾರ್ಥಿಗಳ ಜೀವ ಹಿಂಡುವ, ಕಾಸು ಸುಲಿಯುವ, ಹೆಂಗಸರ ಮಾನ-ಪ್ರಾಣಹರಣ ಮಾಡುವ ವ್ಯವಸ್ಥಿತ ತಂಡಗಳೇ ಇಲ್ಲಿವೆ. ಇದೆಲ್ಲಾ ದೊಡ್ಡ ಧಣಿಗೆ ಗೊತ್ತಿಲ್ಲವೆಂದೇನಲ್ಲ. ಚಿಕ್ಕ ಧಣಿಯೇ ಈ ರೌಡಿಗಳ ಬಾಸ್. ವರ್ಷಕ್ಕೆ ಸರಾಸರಿ 25 ಅಸಹಜ ಸಾವುಗಳು ಇಲ್ಲಾಗುತ್ತಿದೆ. ನೇತ್ರಾವತಿ ಸ್ನಾನಘಟ್ಟ- ಅದರ ಸುತ್ತಲಿನ ಕಾಡಲ್ಲಿ ಸಂಭವಿಸುವ ಅದೆಷ್ಟೋ ಸಂಶಯಾಸ್ಪದ 'ಆಕಸ್ಮಿಕ' ಸಾವುಗಳು ಪೋಸ್ಟ್‌ಮಾರ್ಟಮ್ ಅಷ್ಟೇ ಆಗಿ ಪೊಲೀಸ್ ಕಡತ ಸೇರುತ್ತವೆ. ಅನಾಥ ಶವಗಳಾಗುವುದೇ ಹೆಚ್ಚು.

ಕ್ಷುಲ್ಲಕ ಕಾರಣಕ್ಕಾಗಿ ಪ್ರವಾಸಿಗರ ತನಿಖೆ-ವಿಚಾರಣೆ ಇಲ್ಲಿ ಸಹಜ ನಿಯಮ. ಸ್ವಾಭಿಮಾನ ತೋರಿಸಿದರೆ, ತಮ್ಮ ಹೆಣ್ಣು ಮಕ್ಕಳ ಮಾನ ರಕ್ಷಿಸಲು ಮುಂದಾದರೆ ದೈಹಿಕ-ಮಾನಸಿಕ ಕಿರುಕುಳ, ಹಲ್ಲೆ, ಸುಲಿಗೆ 'ದೇವರ ರಿಪಬ್ಲಿಕ್'ನಲ್ಲಿ ಆಗೋದು ಗ್ಯಾರಂಟಿ! ಕ್ಷೇತ್ರದ ಯಾವುದೇ ಅಂಗಡಿ, ಫ್ಯಾನ್ಸಿ ಸ್ಟೋರ್, ವ್ಯಾಪಾರ ಮಳಿಗೆಯಲ್ಲಿ ಯಾತ್ರಾರ್ಥಿಗಳು ಕೊಂಚ ಬಿಸಿಬಿಸಿ ಚೌಕಾಸಿ ಮಾಡಿದರೂ ಸಾಕು, ರೌಡಿಗಳು ಗುಮ್ಮುತ್ತಾರೆ. ಗಿರಾಕಿಗಳ ಹೆಣ್ಣುಮಕ್ಕಳಿಗೆ ಚುಡಾಯಿಸುತ್ತಾರೆ. ರಾಜ್ಯ ಮಟ್ಟದಲ್ಲಿ ಸುದ್ದಿಯಾಗಿದ್ದ ಆಂಧ್ರ ಪೊಲೀಸರು ಮಾಡಿದ ಗೋಲಿಬಾರ್‌ಗೆ ರೌಡಿ ಗುಂಪಿನ ದೌರ್ಜನ್ಯವೇ ಪ್ರೇರಣೆಯಾಗಿತ್ತು.

ಧರ್ಮಸ್ಥಳಕ್ಕೆ ಬರುವ ಅಧಿಕೃತ ದಂಪತಿ, ಅನಧಿಕೃತ ಜೋಡಿ, ಅಣ್ಣ-ತಂಗಿ, ಪ್ರೇಮಿಗಳೆಲ್ಲ ದೇವರ ರಿಪಬ್ಲಿಕ್‌ನ ಅನೈತಿಕ ಪೊಲೀಸರ ವಿಚಾರಣೆಗೆ ಒಂದಲ್ಲ ಒಂದು ರೀತಿಯಲ್ಲಿ ತುತ್ತಾಗಬೇಕು. ಅಕ್ರಮ ಜೋಡಿ ಅಥವಾ ಪ್ರೇಮಿಗಳೆಂದು ಕಂಡುಬಂದರೆ ಈ ಅನೈತಿಕ ಪೊಲೀಸರು ತಾನೂ 'ಒಂದು ಛಾನ್ಸ್'ಗೆ ಹವಣಿಸುತ್ತಾರೆ. ಆಗ ಸಂಘರ್ಷವಾದರೆ ರೇಪ್ ಅಂಡ್ ಮರ್ಡರ್! ನಂತರ ನೇತ್ರಾವತಿ ನದಿಯಲ್ಲಿ ಅಸಹಜ-ಅನಾಥ ಹೆಣವಾಗುವುದು ಅಲಿಖಿತ ನಿಯಮ. ಇದು ನಿರಂತರವಾಗಿ ನಡೆದುಬಂದಿದೆ.

ಧರ್ಮಸ್ಥಳದಲ್ಲಿ ನಿರಂತರ-ನಿರಾತಂಕವಾಗಿ ನಡೆಯುತ್ತಿರುವ ವಿಚಾರಣೆ-ತನಿಖೆ ಹೆಸರಿನ ಚುಡಾವಣೆ-ಪ್ರವಾಸಿ ವಾಹನಗಳ ಸುಲಿಗೆ, ದೇವರ ಹೆಸರಿನ ಬ್ಲ್ಯಾಕ್‌ಮೇಲ್ ತಡೆಯುವವರು, ಪ್ರಶ್ನಿಸುವವರು ಯಾರೂ ಇಲ್ಲ. ಅಧಿಕೃತ ಖಾಕಿ ಪೊಲೀಸರು ಈ ಪೋಲಿ-ಗಳ ಎದುರು ಷಂಡರಂತಾಡುತ್ತಾರೆ. ಕಾರಣ ಈ ಅನೈತಿಕ ರೌಡಿಗಳಿಗೆ ದೇವಧೂತರ ರಾಜಾಶ್ರಯವಿದೆ ಎಂಬ ಭಯ. "ನಮ್ಮ ಧರ್ಮಸ್ಥಳ ನಮ್ಮದೇ ಸಾಮ್ರಾಜ್ಯ, ಇಲ್ಲಿ ನಮ್ಮದೇ ಕಾನೂನು. ಶಿಕ್ಷೆ-ತೀರ್ಪು ಎಲ್ಲ ನಮ್ಮದೇ. ನಮ್ಮೂರಿಗೆ ಬಂದು ನಮಗೆ ಎದುರಾಡುತ್ತೀರಾ.... ಹುಷಾರ್.... !!" ಎಂಬ ದಾದಾಗಿರಿ ಮಾತುಗಳು ದೇವರ ರಿಪಬ್ಲಿಕ್‌ನಲ್ಲಿ ಯಾವ ಎಗ್ಗಿಲ್ಲದೆ ಮೊಳಗುತ್ತವೆ.

ದೇವರ ದರುಶನಕ್ಕೆ ಭಯ-ಭಕ್ತಿಯಿಂದ ಬರುವ ಭಾವುಕ ಭಕ್ತರಲ್ಲಿ ಅದೆಷ್ಟೋ ಮಂದಿ ಕಿರುಕುಳ-ಮಾನಹಾನಿ-ಪ್ರಾಣಹಾನಿ ಮಾಡಿಕೊಂಡು ದುಃಖ-ದುಮ್ಮಾನ-ರೋಷ ನುಂಗಿಕೊಂಡು ತಮ್ಮ ವಾಹನ ಹತ್ತಿ ಊರಿಗೆ ಹೋಗಬೇಕಾಗಿ ಬರುತ್ತದೆ. ಈ ದೇವರ ರಿಪಬ್ಲಿಕ್‌ನ ಪೊಲೀಸರು ಯಾವುದೇ ಸರ್ಕಾರಿ ವ್ಯವಸ್ಥೆಯ ಅಂಕೆಗೆ ಸಿಗದ ಸೈತಾನರಂತಾಗಿ ಹೋಗಿದ್ದಾರೆ. ಇದೆಲ್ಲದರ ಒಟ್ಟು ಪರಿಣಾಮವೇ ಈಗ ಹೆಗ್ಗಡೆ ರಿಪಬ್ಲಿಕ್ ವಿರುದ್ಧ ಎದ್ದಿರುವ ಕೂಗು. ಸೌಜನ್ಯ ಸಾವಿನ ಪ್ರಕರಣ ಹೆಗ್ಗಡೆ ಬಳಗಕ್ಕೀಗ ಗಂಡಾಂತರಕಾರಿಯಾಗಿ ಹೋಗಿದೆ. ಧಾರ್ಮಿಕ ಕ್ಷೇತ್ರದ ಕಾವಿಧಾರಿಗಳೂ ಸೌಜನ್ಯ ಸಾವಿನ ಪ್ರಕರಣದಿಂದ ಕೆರಳಿದ್ದಾರೆ. ಕೇಮಾರು ಸ್ವಾಮಿ ಈಶ ವಿಠಲದಾಸರು ಮೊಟ್ಟಮೊದಲ ಬಾರಿಗೆ ರಿಸ್ಕ್ ಲೆಕ್ಕಿಸದೇ ಸಿಡಿದೆದ್ದರು!

ಕಾವಿ ಪ್ರಪಂಚದಲ್ಲೂ ಗೌರವಾನ್ವಿತ ಮಾರ್ಗದರ್ಶಕರಂತಿರುವ ಶ್ವೇತ ವೀರೇಂದ್ರ ಹೆಗ್ಗಡೆ ಸಂಸ್ಥಾನದಲ್ಲಿ ಆಗಿರುವ ಬರ್ಬರ ರೇಪ್ ಅಂಡ್ ಮರ್ಡರ್ ಸ್ವಾಮಿಗಳನ್ನು ತಬ್ಬಿಬ್ಬುಗೊಳಿಸಿದೆ. ಎಂಟೆತ್ತು ಕಾವಿ ಜೀವಿಗಳೂ ಈಗ ಸೌಜನ್ಯಳ ಸಾವು ಸಿಬಿಐ ತನಿಖೆಗೆ ಒಳಪಡಲಿ ಎನ್ನುತ್ತಿದ್ದಾರೆ. ಅಲ್ಲಿಗೆ ಹೆಗ್ಗಡೆ ಇಮೇಜು ಕಾವಿ ಪ್ರಪಂಚದಲ್ಲೂ ಪ್ರಶ್ನಾರ್ಹ- ಸಂಶಯಾಸ್ಪದವಾಗಿದೆ.

'ಧರ್ಮಸ್ಥಳ' ರೌರವ ನರಕ ಆಗುವ ಮೊದಲು ಜಿಲ್ಲಾಡಳಿತ ಎಚ್ಚೆತ್ತುಕೊಳ್ಳುವುದೇ? ಶಾಸಕ ವಸಂತ ಬಂಗೇರಾ, ಮಾಜಿ ಮಂತ್ರಿ ಜನಾರ್ದನ ಪೂಜಾರಿಯಂಥ ಛಾತಿವಂತರ ಬಿಟ್ಟರೆ ಉಳಿದೆಲ್ಲರೂ ಹೆಗ್ಗಡೆ ರಿಪಬ್ಲಿಕ್‌ಗೆ ಅಡ್ಡಬೀಳೋರೇ. ಹಾಗಾಗಿ ಸ್ಥಳೀಯರು ತಂತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕಿದೆ. ಯಾತ್ರಾರ್ಥಿಗಳು ಮಾನ-ಪ್ರಾಣದ ಎಚ್ಚರ ಇಟ್ಟುಕೊಂಡು ಮಂಜುನಾಥನ ನೋಡಲು ಬರಬೇಕಿದೆ.

ಒಂದು ಸರ್ಕಾರಿ ತಮಾಷೆಯ ಅಂಕಿಅಂಶ ನೋಡಿ: ಕಳೆದ 2001 ರಿಂದ 2012 ರ ಅಕ್ಟೋಬರ್ ತನಕ ಧರ್ಮಸ್ಥಳ-ಉಜಿರೆಯಲ್ಲಿ ನಡೆದ ಆತ್ಮಹತ್ಯೆ 434, ಕೊಲೆಗಳು ಕೇವಲ 11, ಅತ್ಯಾಚಾರ ಒಂದೂ ನಡೆದಿಲ್ಲ, ಸೌಜನ್ಯಳ ಸಾವು ಕೇವಲ ಕೊಲೆಯಷ್ಟೇ, ರೇಪ್ ಅಲ್ಲ, ಇದು ಪೊಲೀಸರು ಅಧಿಕೃತವಾಗಿ ಕೊಟ್ಟಿರುವ ಲೆಕ್ಕ. ಅರ್ಥಾತ್ ಹೆಗ್ಗಡೆ ರಿಪಬ್ಲಿಕ್‌ನ ಪ್ರತಿಷ್ಠೆ, ಮಾನ, ದೈವೀಕೃಪೆ ರಕ್ಷಿಸುವ ಸರ್ಕಾರಿ ಹಿಕಮತ್ತು ಇದು.

ಪರ್ಯಾಯ ಸರ್ಕಾರ ನಡೆಸುತ್ತಿರುವ ಧರ್ಮವ್ಯಾಪಾರಿ ವೀರೇಂದ್ರ ಹೆಗ್ಗಡೆ ಆಪ್ತ ವಲಯದವರು ಅಥವಾ ಅಧರ್ಮ ಸಂಸ್ಥಾನದ ಪಾರುಪತ್ಯಗಾರರ ಚೌನ್ಸರ್ ಬಳಗದವರು ಈ ಪಾಪಕೃತ್ಯದಲ್ಲಿ ಭಾಗಿಯಾಗಿದ್ದಾರೆ; ಸೌಜನ್ಯಳ ತಿಂದು ಹಾಕಿರುವ ಪ್ರಭಾವಿಗಳನ್ನು ಬಚಾಯಿಸಲೆಂದೇ ಪೊಲೀಸರು ತಾಳ-ಮೇಳ ಇಲ್ಲದ 'ಆಟ' ಆಡುತ್ತಿದ್ದಾರೆಂಬುದು ಬೆಳ್ತಂಗಡಿಯ ಬಹುಜನರ ಅಭಿಪ್ರಾಯ.

ಧರ್ಮಸ್ಥಳ ಮತ್ತು ಬೆಳ್ತಂಗಡಿ ಭಾಗದ ಜನರು ಸೌಜನ್ಯ ರೇಪ್ ಅಂಡ್ ಮರ್ಡರ್ ಬಗ್ಗೆ ಮೂರು ಸಂಶಯ ವ್ಯಕ್ತಪಡಿಸುತ್ತಾರೆ. ಒಂದು, ಧರ್ಮಸ್ಥಳದ ಸಕಲ ಆಗು-ಹೋಗು ನಿಯಂತ್ರಿಸುವ ವೀರೇಂದ್ರ ಹೆಗ್ಗಡೆಯ ತರಲೆ ಸಂಬಂಧಿಯೊಬ್ಬನ ಪೋಲಿ ಮಗನ ಪರಾಲಮ್ ಇದರ ಹಿಂದಿದೆಯೇ. ಎರಡು, ಧರ್ಮಸ್ಥಳದ ಅನ್ನಛತ್ರದ ಉಸ್ತುವಾರಿಯೂ ಹೆಗ್ಗಡೆ ಟೀಮಿನ ಪ್ರಮುಖ ಪರಾಕ್ರಮಿಯೂ ಆಗಿರುವಂಥ ಒಬ್ಬನ ಪುಂಡ ಪುತ್ರನ ಪಡೆ ಸೌಜನ್ಯಳ ಸ್ವಾಹಾ ಮಾಡಿರಬಹುದೆ? ಎಂಬುದು ಜನರ ಅನುಮಾನ. ಇದಲ್ಲದಿದ್ದರೆ ಒಂದು ಕಾಲದಲ್ಲಿ ದೇವಸ್ಥಾನದಲ್ಲಿ ಠಳಾಯಿಸುತ್ತ ಹೆಗ್ಗಡೆ ಬೆಟಾಲಿಯನ್‌ಗೆ ಹತ್ತಿರದಲ್ಲಿದ್ದ ಬಂಗಾರ ಭಟ್ಟರ ಲ್ಯಾಂಡ್ ಕಬಳಿಸುವ ಭರದಲ್ಲಿ ಧರ್ಮಸ್ಥಳದ ಪ್ರಮುಖರೇ ಭಟ್ಟರ ಮಗಳೆಂದು ಭಾವಿಸಿ ಸೌಜನ್ಯಳ ಬಲಿ ಪಡೆದಿದ್ದಾರೆಂದು ಧರ್ಮಸ್ಥಳ ಮಹಿಮೆ ಬಲ್ಲವರು ತರ್ಕಿಸುತ್ತಾರೆ!

ಸೌಜನ್ಯ ಸಾವಿನ ಹಿಂದೆ ಇವರೆಲ್ಲರ ಕೈವಾಡವಿದೆಯೆಂಬರ್ಥದ ಮೆಸೇಜ್‌ಗಳು ಬೆಳ್ತಂಗಡಿಯಲ್ಲಿ ಮೊಬೈಲ್‌ನಿಂದ ಮೊಬೈಲ್‌ಗೆ ಇವತ್ತಿಗೂ ಹರಿದಾಡುತ್ತಿದೆ.

ಬಂಗಾರ ಭಟ್ಟರ ಮಗಳೆಂದು...!

ಪಾಂಗಾಳದಲ್ಲಿ ಸೌಜನ್ಯಳ ಮನೆ ಬಳಿಯೇ ಬಂಗಾರ ಭಟ್ಟ ಎಂಬ ಬ್ರಾಹ್ಮಣನ ಮನೆಯಿದೆ. ಈತ ಮಂಜುನಾಥನ ದೇವಾಲಯದಲ್ಲಿ ಕೆಲಸಕ್ಕೆ ಇದ್ದ ದೇಗುಲದ ಪಾರುಪತ್ಯಗಾರರ ಚೇಲನೂ ಆಗಿದ್ದ. ಆತ ಒಮ್ಮೆ ದೇವಸ್ಥಾನದ ಹಣ-ಬಂಗಾರ ಕದಿಯುವಾಗ ಸಿಕ್ಕಿಬಿದ್ದು ಕೆಲಸದಿಂದ ವಜಾ ಆಗಿದ್ದನಂತೆ. ಈ ಭಟ್ಟನ 4-8 ಎಕರೆ ಜಮೀನು ಬಿಟ್ಟರೆ ನೇತ್ರಾವತಿ ನದಿತೀರದ ಸ್ನಾನ ಘಟ್ಟದಿಂದ ಧರ್ಮಸ್ಥಳದ ದೇಗುಲದವರೆಗಿನ ಸಾಮ್ರಾಜ್ಯ ಹೆಗ್ಗಡೆಗಳದು.



ಈ ನಾಲ್ಕೈದು ಎಕರೆ ಮೇಲೆ ಭೂದಾಹಿ ಹೆಗ್ಗಡೆ ವಂಶಜರ ಕಣ್ಣು ಬಿದ್ದು ಅದ್ಯಾವುದೋ ಕಾಲವಾಗಿದೆ. ಯಾವಾಗ ದೇವಸ್ಥಾನದ ಕಳ್ಳತನದಲ್ಲಿ ಭಟ್ಟ ಸಿಕ್ಕಿಬಿದ್ದನೋ ಆಗ ಆತನ ಕುಟುಂಬಕ್ಕೆ ಊರು ಬಿಟ್ಟು ಹೋಗುವಂತೆ ಧಮಕಿಗಳು ಬರತೊಡಗಿತು. ಪಾಳೆಗಾರಿ ಕ್ಷೇತ್ರಪಾಲರು ತರತರದ ಕಿರುಕುಳ ಭಟ್ಟನಿಗೆ ಕೊಟ್ಟರು. ಆತ ಎರಡು ವರ್ಷದಿಂದ ಕಣ್ಮರೆಯಾಗಿದ್ದಾನೆ. ಆತ ಜೀವಂತ ಇದ್ದಾನೋ, ಇಲ್ಲವೋ ಎಂಬುದು ಯಾರಿಗೂ ಗೊತ್ತಿಲ್ಲ. ಭಟ್ಟನ ತಂದೆಗೆ ಈಗ ಈ ಜಾಗ ಮಾರಿ ಹೋಗುವಂತೆ ಧರ್ಮೋದ್ಧಾರಕರು ಪೀಡಿಸುತ್ತಿದ್ದಾರೆ. ಆದರೆ ಆ ವಯೋವೃದ್ಧ ಜಗ್ಗುತ್ತಿಲ್ಲ; ಜಾಗ ಮಾರಲು ಸುತಾರಾಮ್ ಒಪ್ಪುತ್ತಿಲ್ಲ. ಇದು ಲ್ಯಾಂಡ್ ಲಾರ್ಡ್‌ಗಳಾಗುವ ದುರಾಸೆಯ ಧರ್ಮವಂತರ ಪಿತ್ಥ ಕೆರಳಿಸಿಬಿಟ್ಟಿದೆ.

ಹೇಗಾದರೂ ಮಾಡಿ ಭಟ್ಟರ ಕುಟುಂಬ ಒಕ್ಕಲೆಬ್ಬಿಸಲೇ ಬೇಕೆಂದು ಕುತಂತ್ರ ಮಾಡುತ್ತಿರುವ ಮಂಜುನಾಥನ ಸ್ವಾಮಿಯ 'ಒಡೆಯರ' ಟಾರ್ಗೆಟ್ ಸೌಜನ್ಯ ಆಗಿರಲಿಲ್ಲವಂತೆ. ಸೌಜನ್ಯಳಂತೆಯೇ ಕಾಣುವ, ಆಕೆಯ ಸಹಪಾಠಿಯೂ ಆದ ಭಟ್ಟರ ಮಗಳನ್ನು ಅಪಹರಿಸಿ ಭಟ್ಟರ ಬಳಗ ಬೆದರಿಸುವ ಸ್ಕೆಚ್ ಹಾಕಲಾಗಿತ್ತು, ಆದರೆ ಅಂದು ಆ ಹುಡುಗಿ ಕಾಲೇಜಿಂದ ಮುಂಚೆಯೇ ಬಂದಿದ್ದಳು. ಹೀಗಾಗಿ ಬಾಡಿಗೆ ಭಂಟರಿಗೆ ಕನ್‌ಫ್ಯೂಸ್ ಆಯ್ತು, ಸೌಜನ್ಯ ಬಲಿಯಾದಳು. ಇಲ್ಲದಿದ್ದರೆ ಭಟ್ಟರ ಮಗಳು ರೇಪ್ ಅಂಡ್ ಮರ್ಡರ್ ಆಗುತ್ತಿದ್ದಳು. ಇದು ಊರಿಗೆ ಊರೇ ಸಂಶಯಿಸುವ ಮತ್ತೊಂದು ಸಾಧ್ಯತೆ. ಇದಕ್ಕೆ ಬೆಳ್ತಂಗಡಿ-ಧರ್ಮಸ್ಥಳದ ಜನರು ಆಧಾರವಾಗಿ 'ಪದ್ಮಲತಾ ಪ್ರಕರಣ' ವನ್ನು ಕೋಟ್ ಮಾಡುತ್ತಾರೆ!! ಅದಾಗಿದ್ದು 1987 ರಲ್ಲಿ.

ಹೆಗ್ಗಡೆ ಸಂಸ್ಥಾನಕ್ಕೆ ಸಂಕಟ!

ಸೌಜನ್ಯಳ ಬರ್ಬರ ಹತ್ಯೆ-ಅಮಾನುಷ ಅತ್ಯಾಚಾರದಿಂದ ಇಡೀ ಬೆಳ್ತಂಗಡಿ ತಾಲ್ಲೂಕು ಕೆರಳಿದೆ. ಈ ಪ್ರಕರಣದಲ್ಲಿ ದೇವಧೂತರ ಕೃಪಾಶೀರ್ವಾದದಲ್ಲಿರುವವರ ಕೈವಾಡ ಇದೆ ಎಂದು ಜನರು ದೃಢವಾಗಿ ನಂಬಿದ್ದಾರೆ. ವಿದ್ಯಾರ್ಥಿ ಸಂಘಟನೆಗಳಿಂದ ಹಿಡಿದು ತಾಲ್ಲೂಕಿನ ಅಷ್ಟೂ ಎಡ-ಬಲ ಸಂಘಟನೆಗಳು, ಕೇಮಾರು, ಈಶ ವಿಠಲದಾಸರಂಥ ಸ್ವಾಮೀಜಿ ಬೀದಿಗಿಳಿದು ಸಿಬಿಐ ತನಿಖೆ ನಡೆಸಬೇಕೆಂದು ಕೇಳುತ್ತಿದ್ದಾರೆ. ಸೌಜನ್ಯಳ ಹೆತ್ತವರೂ ಸಿಬಿಐ ತನಿಖೆಯೇ ಬೇಕೆಂದು ಆರಂಭದಿಂದಲೂ ಕಂಡ-ಕಂಡ ಅಧಿಕಾರಸ್ಥರಿಗೆ ಬೇಡಿಕೆ ಇಡುತ್ತಿದ್ದಾರೆ.

ಸಿಒಡಿ ತನಿಖೆ ಬೇಡವೆಂಬುದು ಜನರ ಅಭಿಪ್ರಾಯ. ರಾಜ್ಯ ಸರ್ಕಾರದ ಮೇಲೆ ಪ್ರಭಾವ ಬೀರುವ ಸಕಲ ಶಕ್ತಿಯೂ ಇರುವ ಧರ್ಮವ್ಯಾಪಾರಿ ವೀರೇಂದ್ರ ಹೆಗ್ಗಡೆ ವಿಚಾರಣೆ ಸರಿಯಾಗಿ ನಡೆಯಲು ಬಿಡದೆ ತಮ್ಮ ಹಿತಾಸಕ್ತಿ ಸಾಧಿಸುತ್ತಾರೆಂಬುದು ಬೆಳ್ತಂಗಡಿಗರ ಆತಂಕ. ಯಾವಾಗ ಸಿಬಿಐ ತನಿಖೆಯೇ ಬೇಕೆಂದು ತಾಲ್ಲೂಕಿನ ಎಲ್ಲರೂ ಆಗ್ರಹಿಸಹತ್ತಿದರೋ ಆಗ ಹೆಗ್ಗಡೆ ರಿಪಬ್ಲಿಕ್


→ 13

ಗುಲಾಮಾಭಿವೃದ್ಧಿ ಯೋಜನೆ

ಗ್ರಾಮಾಭಿವೃದ್ಧಿ ಎಂಬ ಗೋಲ್‌ಮಾಲ್ ಯೋಜನೆಯ ಹಂಗಿನಲ್ಲಿರುವ ಒಂದಿಷ್ಟು ಅಸಹಾಯಕರನ್ನು ಬಿಟ್ಟರೆ ದೇವಧೂತ ವೀರೇಂದ್ರ ಹೆಗ್ಗಡೆಯನ್ನು ನಂಬುವವರು ಈಗ ಯಾರೂ ಇಲ್ಲ. ಜೈನ ಪಾಳೆಗಾರಿಕೆಯ ..ಪಳೆಯುಳಿಕೆಯಂತಿರುವ ಧರ್ಮಸ್ಥಳ ಸಂಸ್ಥಾನದ ಕಳೆದ 50 ವರ್ಷದ ಇತಿಹಾಸವೇ ಭೀಭತ್ಸವಾಗಿದೆ. ಈ ಶೋಷಣೆ-..ದಗಾ-ದಗಲ್‌ಬಾಜಿ ಧರ್ಮಾಧಾರಿತ ದಂಧೆಗಳು ಈಗ ತಾರ್ಕಿಕ ಅಂತ್ಯಕ್ಕೆ ತಲುಪಿದೆ. 'ಧರ್ಮಸ್ಥಳ' ಎಂಬ ಹೆಸರೇ ಈಗ ಭೀತಿಯ ಉಪಮೆಯಂತಾಗಿದೆ.

ಇದಕ್ಕೆ ಮೂಲಕಾರಣ ಹೆಗ್ಗಡೆ ರಿಪಬ್ಲಿಕ್‌ನ ಭೂ ದಾಹ, ಮಾನ-ಪ್ರಾಣಹರಣ, ಬಡ್ಡಿ ವ್ಯವಹಾರ. ಗ್ರಾಮಾಭಿವೃದ್ಧಿ ಯೋಜನೆ ಎಂದರೆ ಇದೊಂದು ಪಕ್ಕಾ ಗುಲಾಮಾಭಿವೃದ್ಧಿ ಯೋಜನೆ. ಜನರನ್ನು ಗೊಂದಲಗೊಳಿಸಿ ಹೆಗ್ಗಡೆ ..ಸ್ಥಾನಕ್ಕೆ ಶರಣಾಗಿಸುವ ಕುತಂತ್ರಗಾರಿಕೆಯಿದು. ಜನರ ಸ್ವಂತಿಕೆ-ಸ್ವಾಭಿಮಾನ-ದುಡಿವ ಶಕ್ತಿ ಹಾಳು ಮಾಡಿ ಬೇಡುವ ..ಕಲಿಸುವ ಯೋಜನೆಯಿದು. ನಬಾರ್ಡ್‌ನಿಂದ ಈ ಯೋಜನೆಗೆ ಶೇಕಡಾ 5-6 ಬಡ್ಡಿದರದಲ್ಲಿ ಹಣ ತರುವ ..ಧರ್ಮದಾತರು ಶೇ. 15-16 ಬಡ್ಡಿಗೆ ಹಣ ಬಿಡುತ್ತಾರೆ. ಇದು ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿಗೆ ತದ್ವಿರುದ್ಧ ..ಯೋಜನೆ.

ಧರ್ಮಸ್ಥಳ ದೊರೆಗಳ ಭೂದಾಹದ ಕತೆಗಳಂತೂ ಒಂದಕ್ಕಿಂತ ಮತ್ತೊಂದು ಭೀಭತ್ಸ. ಸುಮಾರು 500-600 ..ಜಮೀನು ಕ್ಷೇತ್ರಪಾಲರ ಕಬ್ಜಾದಲ್ಲಿದೆ. ಆದರೂ ಕಂಡ-ಕಂಡವರ ಭೂಮಿ ಕಬಳಿಸುವ ದುರಾಸೆ. ಕಮ್ಯುನಿಸ್ಟ್ ..ದರ್ ದೇವಾನಂದರನ್ನು ಓಡಿಸಿದ ಉಜಿರೆ ಕಾಲೇಜು ಬಳಿಯ ಮುಸ್ಲಿಂ ಹೆಂಗಸೊಬ್ಬಳ ತೆನಕ, ಅಲ್ಲಿಂದ ಮೊನ್ನೆ ..ಗೂಢವಾಗಿ ಹತ್ಯೆಯಾದ ದೇವಳದ ಆನೆ ಮಾವುತನಾಗಿದ್ದ ನಾರಾಯಣ ಮತ್ತು ಆತನ ತಂಗಿಯ ಜೋಡಿ ಹತ್ಯೆ ..ಬಂಗಾರ ಭಟ್ಟರ ಕಣ್ಮರೆ ತನಕ ಅನೇಕ ದೌರ್ಜನ್ಯ ಬೆಳ್ತಂಗಡಿ-ಉಜಿರೆ-ಧರ್ಮಸ್ಥಳ ಸುತ್ತಮುತ್ತಲಲ್ಲಾಗಿದೆ. ಉಜಿರೆಯ ..ಹಾಸ್ಟೆಲ್ ಇರುವುದೇ ದಲಿತರಿಗಾಗಿ ಮೀಸಲಿಟ್ಟ ಸ್ಥಳದಲ್ಲಿ. ಆದರೂ ಸರ್ಕಾರಿ ಮಂಟ-..ಕಾರರು ದೇವರ ಕಾಣಿಕೆ ಹೆದರಿ ಸುಮ್ಮನಿದ್ದಾರೆ. ಯಾರ್‍ಯಾರದೋ ಜಮೀನಿಗೆ ಬೇಲಿ ಹಾಕೋದು, ದಾರಿ ..ಬಂದ್ ಮಾಡೋದು ನಂತರ ಆ ಜಾಗ ಕಬಳಿಸುವುದು ಸಂಸ್ಥಾನಸ್ಥರಿಗೆ ತುಂಬ ಸುಲಭ.





ಭಾಗ 2

ಕಾಡಿನ ಪ್ರವಾಸ



•ಡಾ.ರೀಟಾ ರೀನಿ

ಹಸಿರು ಹಾಸಿನ ಮೇಲೆ ಕಪ್ಪು ಚುಕ್ಕಿ

ಡಾನ್ ಕಾಡನ್ನು ಪ್ರೀತಿಸಿದಷ್ಟು ಓದನ್ನು ಪ್ರೀತಿಸಲಿಲ್ಲವಂತೆ. ಅದಕ್ಕೆ ಇರಬೇಕು ಓದು ನೀಡಲಾಗದ ಆ ಅದಮ್ಯ ಅನುಭವ ಕಾಡು ನೀಡಿದೆ. ಡಾನ್ ಬಾಲ್ಯದಿಂದಲೂ ಆಡಿ ಬೆಳೆದದ್ದು ನಾಯಿ, ಕರಡಿ, ಹಾವುಗಳ ಜೊತೆ. ಕರಡಿ, ಹಾವುಗಳಂಥ ಪ್ರಾಣಿಗಳನ್ನು ಸಾಕುವುದೆಂದರೆ ತಮಾಷೆ ಮಾತಲ್ಲ, ಆದರೆ ಇಡೀ ಕುಟುಂಬವೇ ಅವುಗಳ ಆರೈಕೆಯಲ್ಲಿ ತೊಡಗಿರುತ್ತಿದ್ದುದು, ಅವುಗಳ ಕೀಟಲೆ, ಹೋಗಿಬರುವವರ ಕೆಂಗಣ್ಣು ಇದೆಲ್ಲಾ ಮಾಮೂಲಿನಂತೆ ಇತ್ತು, ಹೀಗೆ ಮಾತು, ನಗು....

ಈ ಕಬ್ಬು ಮತ್ತು ಕುಂಬಳಕಾಯಿ ಯಾಕೆ ತಗೊಂಡು ಹೋಗ್ತಿದ್ದೀವಿ ಅನ್ನೋದು ಸ್ಪಷ್ಟವಾಗಿ ನನಗೆ ಅರ್ಥವಾದದ್ದು ಕಾಡಿಗೆ ಹೋದ ಮೇಲೇನೇ. ಕಾಡಲ್ಲಿ ಓಡಾಡೋವಾಗ ಆನೆಗೇನೆ ಅಟ್ಟಿಸಿಕೊಂಡು ಬಂದ್ರೆ, ಒಂದು ಕುಂಬಳಕಾಯಿನೋ, ಕಬ್ಬಿನ ತುಂಡನ್ನೋ ಎಸೆದು ತಪ್ಪಿಸಿಕೊಳ್ಳುವ ತಂತ್ರದ ಒಂದು ಭಾಗದ ಸಿದ್ಧತೆಯಾಗಿ ನಾವು ಇದನ್ನು ತೆಗೆದುಕೊಳ್ಳಬೇಕಾಗಿದೆ ಅಂತ ಭಾವಿಸಿದ್ದೆ.

ನಾವು ಹೋಗುವ ಜಾಗದಲ್ಲಿ ಊಟಕ್ಕೆ ನಾವೇ ವ್ಯವಸ್ಥೆ ಮಾಡಿಕೊಳ್ಳಬೇಕು ಅಂತಿತ್ತು, ಅದಕ್ಕೆ ಸಂಬಂಧಪಟ್ಟಂತೆ ಬಾಲಾಜಿ ಮತ್ತು ಚಂದನ್ ಪುಟ್ಟ ಅಡುಗೆಮನೆಯನ್ನೇ ಅಚ್ಚುಕಟ್ಟಾಗಿ ಪ್ಯಾಕ್ ಮಾಡಿಕೊಂಡಿದ್ರು. ಜೊತೆಗೆ ಒಂದು ಗ್ಯಾಸ್ ಸ್ಟೌವ್ ಬೇರೆ! ಐದು ಜನರ ಬಟ್ಟೆಬರೆಗಳ ಲಗೇಜು, ಪುಟ್ಟ ಅಡುಗೆ ಮನೆ, ಕುಂಬಳಕಾಯಿ ಚೀಲ, ಅದರ ಮೇಲೆ ಈಗ ಈ ಕಬ್ಬಿನ ತುಂಡುಗಳು.

ಒಂದು ಸ್ವಲ್ಪ ದೂರಹೋಗುತ್ತಿದ್ದ ಹಾಗೆ ಯಾವುದೋ ಗಾಡಿಗೆ ಅಡ್ಡ ಬಂದು ಆತ್ಮಹತ್ಯೆ ಮಾಡಿಕೊಂಡಿದ್ದ ನಾಯಿಯ ದೇಹವೊಂದು ರಸ್ತೆಯ ಮಧ್ಯದಲ್ಲಿ ಅನಾಥವಾಗಿ ಬಿದ್ದಿತ್ತು. ಸತ್ತ ನಾಯಿಯನ್ನು ನೋಡಿದ ನಾವು 'ತ್ಚು ತ್ಚು' ಅಂತ ಲೊಚಗುಟ್ಟಿದರೆ ಖುರ್ಷಿದ್, 'ಅಯ್ಯೋ ಪಾಪ ಕಣ್ರೀ, ಸಚ್ ಎ ನೈಸ್ ಡಾಗ್, ನೋಡ್ರಿ..' ಅಂದ್ರು. ನಾಯಿ ಬಗೆಗಿನ ನಮ್ಮ ಅನುಕಂಪವನ್ನು ಅನುಕಂಪದಿಂದ ನೋಡುತ್ತಿದ್ದ ಡಾನ್ ತಕ್ಷಣ, 'ಅದು ನೈಸ್ ಡಾಗ್ ಅಂತ ಹೇಗೆ ಹೇಳ್ತೀಯಾ? ಪೂರ್ತಿ ಅಪ್ಪಚ್ಚಿ ಆಗಿ ಬಿದ್ದಿದೆಯಲ್ಲಾ?' ಅಂದ್ರು. ಮುಖಕ್ಕೆ ಒಡೆದಂಗಾಯ್ತು ನನಗೆ.

ಸುಮ್ಮಸುಮ್ಮನೆ ನೋಡ್ ನೋಡಿದಕ್ಕೆಲ್ಲಾ, 'ಅಯ್ಯೋ ಪಾಪ, ಛೇ, ಛೇ' ಅಂತೀವಿ. ಅಗತ್ಯವಾಗಿ ಕ್ರಿಯಾಶೀಲವಾಗಿ ಪ್ರತಿಕ್ರಿಯಿಸೋದು ಅಷ್ಟರಲ್ಲೇ ಇರುತ್ತೆ. ಹಾಗಾಗಿ ಸತ್ತು ಹೋಗಿರೋ ನಾಯಿನ ನೋಡಿ ಅಯ್ಯೋ ಪಾಪ ಅಂತ ಹುಸಿ ಅನುಕಂಪ ತೋರಿಸೋದು ಎಷ್ಟು ಹಾಸ್ಯಾಸ್ಪದ ಅಲ್ವಾ ಅನಿಸ್ತು. ಖುರ್ಷಿದ್ ಮಾತಿಗೆ ಪ್ರತಿಕ್ರಿಯಿಸೋ ಮೂಲಕ ನಮ್ಮ ಹುಸಿ ಅನುಕಂಪದ ಮೂತಿಗೂ ರಫ್ ಅಂತ ಹೊಡೆದಿದ್ದು ಡಾನ್.

ಸರಿಸುಮಾರು ಎಪ್ಪತ್ತು ವರ್ಷಗಳಷ್ಟು ಹಳೆಯದಾದ ಹಲವು ಘಟನೆಗಳನ್ನು ನಿನ್ನೆಮೊನ್ನೆ ನಡೆದಿದೆಯೇನೋ ಎಂಬಂತೆ ವಿವರಿಸುವ ಡಾನ್, ತಮ್ಮನ್ನು ನೋಡಿಕೊಳ್ಳುತ್ತಿದ್ದ ಆಯಾಗಳು, ತಾವು ಕೆಲಸ ಮಾಡುತ್ತಿದ್ದ ಬಿನ್ನಿಮಿಲ್ಲಿನ ದಿನಗಳು, ಅಪ್ಪ ಕೆನೆತ್ ಆಂಡರ್‌ಸನ್‌ರೊಂದಿಗಿನ ದಿನಗಳನ್ನು ಮೆಲುಕು ಹಾಕುತ್ತಾ ಸಾಗಿತ್ತು ನಮ್ಮ ದಾರಿ.

ಡಾನ್ ಕಾಡನ್ನು ಪ್ರೀತಿಸಿದಷ್ಟು ಓದನ್ನು ಪ್ರೀತಿಸಲಿಲ್ಲವಂತೆ. ಅದಕ್ಕೆ ಇರಬೇಕು ಓದು ನೀಡಲಾಗದ ಆ ಅದಮ್ಯ ಅನುಭವ ಕಾಡು ನೀಡಿದೆ. ಅವರು ಓದಿದ್ದು ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ, ಶಾಲೆಗೆ ಹೋಗುವುದಿಲ್ಲ ಎಂದು ತುಂಬಾ ಹಠ ಮಾಡುತ್ತಿದ್ದರಂತೆ. ಜೊತೆಗೆ ಆಯಾ ಬಂದರೆ ಮಾತ್ರ ಶಾಲೆಗೆ ಹೋಗುತ್ತೇನೆ ಎಂದು ಪಟ್ಟು ಹಿಡಿಯುತ್ತಿದ್ದರಂತೆ. ಈ ಪಟ್ಟಿಗೆ ಅನಿವಾರ್ಯವಾಗಿ ಬಗ್ಗಲೇಬೇಕಿತ್ತು. ಅವರ ಆಯಾ ಡಾನ್ ಜೊತೆ ತರಗತಿಯಲ್ಲಿ ಹೋಗಿ ಕೂರುತ್ತಿದ್ದರಂತೆ. 'ನಾನು ಏನು ಕಲಿತೆನೋ ಇಲ್ಲವೋ ನನ್ನ ಆಯಾ ಅಂತೂ ಎಬಿಸಿಡಿ ಕಲಿತರು' ಎನ್ನುತ್ತಾ ಆ ದಿನಗಳ ನೆನಪಿನ ಸುರುಳಿ ಬಿಚ್ಚುತ್ತಾರೆ.

ತಮ್ಮ ತಂದೆ ಕೆನೆತ್ ಆಂಡರ್‌ಸನ್‌ರ ಬಗ್ಗೆ ಮಾತು ಬಂದಾಗಲೆಲ್ಲಾ ಡಾನ್ ಅವರನ್ನು ಸಂಬೋಧಿಸುತ್ತಿದ್ದುದ್ದೇ 'ದಟ್ ಓಲ್ಡ್ ಮ್ಯಾನ್' ಎಂದು. ಮೊದಲನೇ ಸಲ ನನಗೆ ಆ ಓಲ್ಡ್ ಮ್ಯಾನ್ ಯಾರು ಎಂದು ಅರ್ಥವಾಗದೆ ಕೇಳಿತಿಳಿದುಕೊಂಡೆ. ಬಹಳ ಖಡಕ್ ವ್ಯಕ್ತಿತ್ವದ ಕೆನೆತ್ ಬಗ್ಗೆ ಅಭಿಮಾನದಿಂದ ಮಾತಾಡುತ್ತಾರೆ ಡಾನ್. ಆಗ ಎರಡನೆ ಮಹಾಯುದ್ಧದ ದಿನಗಳು. ಅವರ ಅಪ್ಪ ಟೆಲಿಗ್ರಾಫ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದವರು. ಅಪ್ಪ, ಅಮ್ಮ, ಅಕ್ಕ ಮತ್ತು ಡಾನ್ ನಾಲ್ಕು ಜನ ಪ್ರತಿದಿನವನ್ನು ಒಂದು ರೂಪಾಯಿ ಎಂಟು ಆಣೆಯಲ್ಲಿ ನಡೆಸುತ್ತಿದ್ದರಂತೆ. "ನಮ್ಮಪ್ಪ ಆಯಾ ಬಂದಕೂಡಲೇ ಅವರ ಕೈಗೆ 'ತಗೋ ಒಂದೂವರೆ ರೂಪಾಯಿ' ಎಂದು ಕೊಡುತ್ತಿದ್ದರು. ಅದರಲ್ಲಿ ಏನಾದರೂ ಉಳಿಸಿ ತರಬೇಕು ಎಂಬುದು ಅಪ್ಪನ ನಿರೀಕ್ಷೆಯಾಗಿದ್ದರೂ ಆಯಾಗಳು ತುಂಬಾ ಬುದ್ಧಿವಂತರು. ಒಂದೂವರೆ ರೂಪಾಯಿಯಲ್ಲಿ ಒಂದು ಪೈಸೆಯೂ ಉಳಿಯದಂತೆ ಸಾಮಾನು ತರುತ್ತಿದ್ದರು. ಅಷ್ಟರಲ್ಲೇ ನಾವು ಒಂದು ದಿನದ ಎರಡು ಒಳ್ಳೆಯ ಊಟ ಮಾಡಲು ಸಾಧ್ಯವಾಗುತ್ತಿತ್ತು" ಎನ್ನುತ್ತಾರೆ. ಒಂದೂವರೆ ರೂಪಾಯಿಯಲ್ಲಿ ಮನೆಗೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ದಂಡಿಯಾಗಿ ತರಬಹುದಿತ್ತಂತೆ. ಆಗ ಅವರಿಗೆ ಮನೆ ಬಾಡಿಗೆ *50* ರೂಪಾಯಿಗಳು ಇದ್ದು ಅದು ಹಾಗೆ ಮುಂದುವರಿಯುತ್ತದೆ ಅಂದುಕೊಂಡಿದ್ದರಂತೆ ಡಾನ್. ಹುಚ್ಚಿನ ವೇಗದಲ್ಲಿ ಬೆಂಗಳೂರು ಬೆಳೆಯುತ್ತಿರುವುದನ್ನು ಬೆರಗು, ನಿರಾಶೆ, ಸಿಟ್ಟಿನಿಂದ ಕಾಣುವ ಡಾನ್, "ಇನ್ನು ಮುಂದಿನ ಹತ್ತು ವರ್ಷಗಳಲ್ಲಿ ಈ ಬೆಂಗಳೂರಲ್ಲಿ ಹೇಗೆ ವಾಸಿಸುತ್ತೀರಿ? ಉಸಿರಾಡಲು ಸರಿಯಾಗಿ ಗಾಳಿ ಇಲ್ಲ, ಈ ದಟ್ಟನೆ, ಮಾಲಿನ್ಯ ಕೊಳಚೆ... ಐ ಪಿಟಿ ಯು" ಅನ್ನುತ್ತಾರೆ.

ಡಾನ್ ಬಾಲ್ಯದಿಂದಲೂ ಆಡಿ ಬೆಳೆದದ್ದು ನಾಯಿ, ಕರಡಿ, ಹಾವುಗಳ ಜೊತೆ. ಕರಡಿ, ಹಾವುಗಳಂಥ ಪ್ರಾಣಿಗಳನ್ನು ಸಾಕುವುದೆಂದರೆ ತಮಾಷೆ ಮಾತಲ್ಲ, ಆದರೆ ಇಡೀ ಕುಟುಂಬವೇ ಅವುಗಳ ಆರೈಕೆಯಲ್ಲಿ ತೊಡಗಿರುತ್ತಿದ್ದುದು, ಅವುಗಳ ಕೀಟಲೆ, ಹೋಗಿಬರುವವರ ಕೆಂಗಣ್ಣು ಇದೆಲ್ಲಾ ಮಾಮೂಲಿನಂತೆ ಇತ್ತು, ಹೀಗೆ ಮಾತು, ನಗು....


ಶ್ರೀರಂಗಪಟ್ಟಣದಲ್ಲಿ ಕಾಲುಸೂಪು ಮುದ್ದೆ ತಿನ್ನಲು ನಿಲ್ಲಿಸಿದೆವು. ಊಟ... ಮುಗಿಸಿ ಮೈಸೂರು ರಸ್ತೆಯಲ್ಲಿ ಸಾಗುತ್ತಾ ಮೈಸೂರು ಪ್ರವೇಶಿಸದೆ ಗುಂಡ್ಲುಪೇಟೆಯಿಂದ ಕೊಯಮುತ್ತೂರು- ಊಟಿ ರಸ್ತೆಯಲ್ಲಿ ನಾವು ಹೋಗಬೇಕಾಗಿತ್ತು. ಆ ದಾರಿಯಲ್ಲೆಲ್ಲೋ ಸಿಗುವುದಿತ್ತು ನನ್ನ ಕಲ್ಪನೆಯ ದಟ್ಟಕಾರಣ್ಯ! ತಮಿಳುನಾಡಿನ ಸಮುದ್ರದಲ್ಲಿ ನೀಲಂ ಚಂಡಮಾರುತ ಅಪ್ಪಳಿಸುತ್ತಿದ್ದರೆ ನಾವು ಹೋಗುತ್ತಿದ್ದ ದಾರಿಗುಂಟ ಹಿತ ಎನಿಸುವ ತುಂತುರು. ಇಕ್ಕೆಲಗಳ ಹಸಿರು, ಆಕಾಶ-ಭೂಮಿ ಕೂಡಿ ನಿಂತಂತೆ ಕಾಣುತ್ತಿದ್ದ ದೂರದ ಬೆಟ್ಟಸಾಲುಗಳು ನಾವು ಹೋಗುತ್ತಿರುವ ಕಾಡಿನ ಪ್ರವೇಶಕ್ಕೆ ಒಳ್ಳೆಯ ಮೂಡ್ ಸೃಷ್ಟಿಸಿತ್ತು. 'ಬ್ರೀದ್ ವೆಲ್' ಬಂದಿತ್ತು ಡಾನ್ ಸೂಚನೆ. ಒಳ್ಳೆಯ ಗಾಳಿ ಇದೆ, ಸಾಧ್ಯವಾಗಿದ್ದರೆ ಅದನ್ನು ತೆಗೆದುಕೊಂಡೂ ಹೋಗಿಬಿಡುವ ಇಂಗಿತ ಇತ್ತು ಆ ದನಿಯಲ್ಲಿ.

ನಾವು ಬಂಡೀಪುರ ಪ್ರವೇಶಿಸುತ್ತಿದ್ದಂತೆ ಡಾನ್, 'ಕ್ಯಾಮರಾ ರೆಡಿ ಇಟ್ಕೊಳ್ಳಿ, ಇಲ್ಲಿ ನಿಮಗೆ ನೋಡಲು ಪ್ರಾಣಿಗಳು ಸಿಗುತ್ತವೆ' ಎಂದರು. ಅಲ್ಲಿಗೆ ಶುರುವಾಯಿತು ನೋಡಿ! ದೂರದ ದಟ್ಟ ಪೊದೆ, ಮರಗಳ ಸಂದುಗಳಲ್ಲಿ ಕಣ್ಣಿನ ಹುಡುಕಾಟ! ಏನಾದರೂ ನೋಡಲು ಸಿಗಬಹುದು ಎಂಬ ಕಾತರ. ಅದೆಷ್ಟೊಂದು ಸಾರಿ ಬಂಡೀಪುರದ ಈ ದಾರಿಯಲ್ಲಿ ಓಡಾಡಿದ್ದೆ. ಆದರೆ ಈ ಬಾರಿ ಅದನ್ನು ಅನುಭವಿಸುತ್ತಿರುವ ರೀತಿ, ಅದರ ರೋಮಾಂಚನ ಎಲ್.ಕೆ.ಜಿ. ಮಕ್ಕಳಿದ್ದಂತಿದೆಯಲ್ಲಾ ಅಂತ ನನಗೇ ಆಶ್ಚರ್ಯವಾಗಲಾರಂಭಿಸಿತು. ದಾರಿಯಲ್ಲಿ ಬರುವಾಗ ಕ್ಯಾಮರ ಬಳಕೆ ಆರಂಭಿಸಬೇಕೆಂಬ ಕಾರಣಕ್ಕಾಗಿ ಒಂದೆರಡು ಲ್ಯಾಂಡ್‌ಸ್ಕೇಪ್‌ಗಳನ್ನು ಕ್ಲಿಕ್ಕಿಸಿದ್ದು ಬಿಟ್ಟರೆ ಈಗ ಅದರ ಸರಿಯಾದ ಪ್ರಯೋಗ ಮತ್ತು ಉಪಯೋಗದ ಪರೀಕ್ಷೆ ಎದುರಾಗಿತ್ತು. ಬೊಲೆರೋದ ಹಿಂದಿನ ಸೀಟಿನಲ್ಲಿ ಆ ಕಿಟಕಿಗೊಬ್ಬ, ಈ ಕಿಟಕಿಗೊಬ್ಬಳು ಚಂದನ್ ಮತ್ತು ನಾನು ಯೋಧರಂತೆ ಕೂತು ಇಬ್ಬರು ಕ್ಯಾಮರಾ ರೆಡಿ ಇಟ್ಕೊಂಡು ದೂರಕ್ಕೆ ಕಣ್ಣು ನೆಟ್ಟಿದ್ದೆವು.

ಚಂದನ್, ಬಾಲಾಜಿ ಇದ್ದಾರಲ್ಲಾ ಅವರು ವೈಲ್ಡ್ ಲೈಫ್ ಬಗ್ಗೆ ತುಂಬಾ ತಿಳ್ಕೊಂಡಿದ್ರು. ಚಂದನ್ ಕಣ್ಣುಗಳಂತೂ ತುಂಬಾ ಸೂಕ್ಷ್ಮ. ಒಂದು ಸ್ವಲ್ಪ ದೂರಹೋಗುತ್ತಿದ್ದ ಹಾಗೆ ಚಂದನ್ ಮೆಲುದನಿಯಲ್ಲಿ 'ಬೇರ್ ಬೇರ್' ಅಂದ. ಆ ಕರಡಿ ನಮ್ಮ ದನಿಯಾಗಲಿ, ಶಬ್ದವಾಗಲಿ ಕೇಳದಷ್ಟು ದೂರದಲ್ಲಿತ್ತು. ಆದರೂ ಆತನ 'ಪ್ರಾಣಿಗಳಿಗೆ ಡಿಸ್ಟರ್ಬ್ ಆಗಬಾರದು' ಎಂಬ ಎಚ್ಚರಿಕೆ ಅದನ್ನು ಕೊನೆವರೆಗೂ ಪಾಲಿಸಿದ ಪರಿಗೆ ಹ್ಯಾಟ್ಸ್ ಆಫ್ ಹೇಳಲೇಬೇಕು. ಕ್ಯಾಮರಾ ಕ್ಲಿಕ್ಕಿಸಿದೆ. ಹಸಿರು ಹಾಸಿನ ಮೇಲೆ ಒಂದು ದೊಡ್ಡ ಕಪ್ಪುಚುಕ್ಕೆಯಂತೆ ಆ ಕರಡಿ ಕ್ಯಾಮೆರಾದಲ್ಲಿ ದಾಖಲಾಗಿತ್ತು.

ಕರ್ನಾಟಕದ ಬಂಡೀಪುರ ನ್ಯಾಷನಲ್ ಪಾರ್ಕ್ ಮತ್ತು ತಮಿಳುನಾಡಿನ ಮುದುಮಲೈ ನ್ಯಾಷನಲ್‌ಪಾರ್ಕ್‌ನ ನಡುವೆ ಮಸಿನಗುಡಿ ಎಂಬ ಕಾಡಿನ ಹರವು ಇದೆ. ಸುತ್ತಮುತ್ತಲ ಒಂದು ಇಪ್ಪತ್ತು ಕಿಲೋಮೀಟರ್ ವ್ಯಾಪ್ತಿಯ ಕಾಡಿನ ರೆಸಾರ್ಟ್‌ಗಳಿಗೆ ಇದೇ ಕೇಂದ್ರ ಸ್ಥಳ. ಸಣ್ಣಪುಟ್ಟ ಹೋಟೆಲ್‌ಗಳು, ಲಾಡ್ಜ್‌ಗಳು ಸಾಕಷ್ಟು ಇವೆ. ನಾವು ಹೋಗುವುದು ಇನ್ನಷ್ಟು 'ಒಳಕಾಡಿಗೆ' ಆದ್ದರಿಂದ ಏನಾದರೂ ಬೇಕಾದರೆ ಮತ್ತೆ ಬರುವ ಮಾತಿರಲಿಲ್ಲ, ಕೊಂಡುಕೊಳ್ಳಲು ಉಳಿಕೆ ಇದ್ದ ಇನ್ನೊಂದಷ್ಟು ವಸ್ತುಗಳನ್ನು ಖರೀದಿ[illegible] ಹೊರಟೆವು.

ಕಾಡಿನ ಪ್ರಾಣಿಗಳನ್ನು ಹತ್ತಿರದಿಂದ ನೋಡುವ, ಸ್ವ[illegible] ಗಾಳಿ ಉಸಿರಾಡುವ ತವಕದಿಂದ ಬಹಳಷ್ಟು ಜನ ಕಾಡಿ[illegible] ಕಡೆ ಹೆಜ್ಜೆ ಹಾಕುತ್ತಿದ್ದಾರೆ. ಜೊತೆಗೆ ಪ್ರಾಣಿ ಪಕ್ಷಿಗ[illegible] ಮೇಲಿನ ಪ್ರೀತಿಯನ್ನು ಅಭಿವ್ಯಕ್ತಿಸಲು ಕಾಡುಗಳಿ[illegible] ಹೋಗುವುದು, ಅವುಗಳನ್ನು ಕಂಡೆವೆಂದು ಆನಂದಿಸುವುದು[illegible] ವಾಹನಗಳಲ್ಲಿ ಸಫಾರಿ ಹೋಗುವುದು, ಆ ನೆನಪುಗಳನ್[illegible] ಕ್ಯಾಮರಾಗಳಲ್ಲಿ ಸೆರೆಹಿಡಿದು ತರುವುದು... ಇದು ಜಂಗಲ[illegible] ಪ್ರವಾಸದ ಪ್ರಮುಖ ಉದ್ದೇಶ ಮತ್ತು ಆಕರ್ಷಣೆ. ಈಗಾಗಲೆ[illegible] ಬಂಡೀಪುರದ ಒಂದು ಖಾಸಗಿ ರೆಸಾರ್ಟ್‌ಗ[illegible] ಹೋಗಿಬಂದಿದ್ದೇನೆ. ಇದು ಹಾಗೆ ಇರಲಾರದು ಎಂಬುದ[illegible] ನನ್ನ ಬಯಕೆ ಮತ್ತು ನಿರೀಕ್ಷೆಯಾಗಿತ್ತು. ಒಂದು ಹಂತ[illegible] ನನ್ನ ನಿರೀಕ್ಷೆ ಸುಳ್ಳಾಗಲಿಲ್ಲ, ಆದರೆ ಕಾಡಿನಲ್ಲಿರುವ ಇಂಥ[illegible] ರೆಸಾರ್ಟ್‌ಗಳನ್ನು ನೋಡಿದಾಗ, ಮತ್ತು ಕೆಲವು ಖಾಸ[illegible] ವ್ಯಕ್ತಿಗಳು ಮೂವತ್ತು ಎಕರೆ, ಅರವತ್ತು ಎಕರೆ, ನೂರು





ಡೊನಾಲ್ಡ್ ಆಂಡರ್‌ಸನ್

ಎಕರೆ ಕಾಡಿನ ಪ್ರದೇಶವನ್ನು ತಮ್ಮದೆಂದು ಹೇಳಿಕೊಳ್ಳುತ[illegible] ಅದಕ್ಕೆ ವಿದ್ಯುತ್ ತಂತಿಬೇಲಿಯನ್ನು ಅಳವಡಿಸಿರುವುದನ[illegible] ಕಂಡಾಗ ಕಾಡು ಕೂಡ ಶ್ರೀಮಂತರ ನಡುವ[illegible] ಹಂಚಿಹೋಗಿರುವುದು ಎದ್ದು ಕಾಣುತ್ತದೆ. ನಾನು ಸಂಗಮ[illegible] ದಾರಿಯಲ್ಲಿ ಹೋಗುವಾಗಲಂತೂ ಈ ವಿಚಾರ ಇನ್ನಷ[illegible] ಕಾಡುತ್ತಿರುತ್ತದೆ.

ಮಸಿನಗುಡಿಯಿಂದ ಸುಮಾರು 20 ಕಿಲೋಮೀಟರ[illegible] ದೂರದಲ್ಲಿತ್ತು ನಾವು ಹೋಗಬೇಕಿದ್ದ ಜಾಗ. ಕುರುಚಲು ಕಾಡು, ಕಪ್ಪುಮಣ್ಣಿನ ಹಸಿ ರಸ್ತೆ, ಕಣ್ಣು ಹಾಯಿಸಿದಷ್ಟೂ[illegible] ದೂರ ದಟ್ಟವಾದ ಮರಗಳು, ಬಿದಿರು ಮೆಳೆಗಳು. ನಾವು[illegible] ಹೋಗುತ್ತಿದ್ದುದು ಕೂಡ ಇಂಥಾ ಒಂದು ಖಾಸಗಿ ಪ್ರದೇಶವೇ. ಆದರೆ ಇದು ಯಾವುದೇ ತಂತಿಬೇಲಿಗಳನ್ನು ಹೊಂದಿರದೆ, ಕಾಡಿನ ನಡುವೆ ಇರುವ ಒಂದು ಪುಟ್ಟ








ಮನೆ. ಶೀಟಿನ ಆ ಮನೆ ಬಿಟ್ಟರೆ ಸುತ್ತಲೂ ಕಾಡೆ[illegible] ಕಾಡು! ಇದರ ಮ್ಹಾಲಿಕ ಹುಚ್ಚೆನ್ನುವಷ್ಟು ಕಾಡು, ಪ್ರಾಣಿಗ[illegible] ಪ್ರಿಯ. ಆತನ ಬದುಕೇ ಈ ಕಾಡು, ಪ್ರಾಣಿಗಳ ಸು[illegible] ನಿಂತಿದೆ. ಮಾಲಿಕನದು ಒಂದೇ ಷರತ್ತು - ಹೆಚ್ಚು ಶಬ[illegible] ಮಾಡುವಂತಿಲ್ಲ, ಕ್ಯಾಮೆರಾ ಬಳಸುವಾಗ ಫ್ಲಾಶ[illegible] ಹಾಕುವಂತಿಲ್ಲ, ರಾತ್ರಿ ರೂಮ್ ಒಳಗೆ ಹೊರತು ಬೇ[illegible] ಲೈಟ್ ಹಾಕುವುದಿರಲಿ, ಬೇರೆಲ್ಲೂ ಲೈಟ್ ಇಲ್ಲವೇ ಇಲ್ಲ[illegible] ನಾವೇನೋ ರೂಮಿನೊಳಗೆ ಇರಲು ಅವಕಾಶವಿತ್ತು, ಆದ[illegible] ಗಾಡಿ! ಎರವಲು ತೆಗೆದುಕೊಂಡು ಹೋಗಿದ್ದ ಕಾರ[illegible] ಬೇರೆ!



ಇತ್ತೀಚೆಗೆ 'ಸುವಿಸಿ' ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ ಲೇಖಕಿ ... ಅವರು ಕರಾವಳಿಯಲ್ಲಿ ಬೆಳೆಯುತ್ತಿರುವ ಕೋಮುವಾದ ಮತ್ತು ಸಾಹಿತ್ಯ ಕಲೆಗಳನ್ನು ಕುರಿತು ಮನಮುಟ್ಟುವಂತೆ ಮಾತನಾಡಿದರು. ... ವಿನಯಾ ಅವರನ್ನು ಕಾಡಿದ ಆತಂಕ ಮತ್ತು ಕಾಳಜಿ ಹಾಗು ... ಆಡಿದ ಮಾತುಗಳು ಇಲ್ಲಿವೆ.



ವರ್ತಮಾನದ ಸವಾಲುಗಳು ಮತ್ತು ಸಂವೇದನಾಶೀಲತೆಯ ಎದುರಿರುವ ಬಿಕ್ಕಟ್ಟುಗಳು

ಸಣ್ಣ ಮಾತು

ಗೌರಿ ಲಂಕೇಶ್ ಪತ್ರಿಕೆಯಲ್ಲಿ ಜಿ.ರಾಜಶೇಖರ ಮತ್ತು ಕೆ.ಫಣಿರಾಜ್ ಲೇಖನಗಳನ್ನು (ನವೆಂಬರ್ 21, 2012ರ ಸಂಚಿಕೆ) ಓದಿದ ಮೇಲೆ ...ಥಿಯ ಕವಿಗೋಷ್ಠಿಗೆ ಒಪ್ಪಿದ್ದ ನನಗೆ ದಿಗಿಲಾಯಿತು. ಎಲ್ಲ ಸಂದಿಗ್ಧಗಳಾಚೆ ...ಗೂ ಭಾಗವಹಿಸಿದೆ. ಆ ವೇದಿಕೆ, ಆ ಶಿಸ್ತು, ಆ ಸಂಭ್ರಮ, ಎಲ್ಲ ... ಎಂಬ ಭಾವಮೂಡಿಸುವ ಪರಿಸರದಲ್ಲಿ ನನ್ನ ತಲೆಮಾರಿನ ಬರಹಗಾರರ ...ಗಿರುವ ತಲ್ಲಣವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಹೇಗೆ ನಿರೂಪಿಸಲಿ? ...ದು ಬೀಜ ಮೊಳೆದೋರುವ ಸಂಕಟವನ್ನು ಅನುಭವಿಸಿದೆ. ವೇದಿಕೆಯ ...ದ್ದ ಅನಂತಮೂರ್ತಿಯವರನ್ನು, ನಿಸಾರ್ ಅಹಮದ್ ಅವರನ್ನು ಬರಗಟ್ಟು ...ಸುತ್ತಿದ್ದೆ. ದೊಡ್ಡವರು ಒಂದು ಸುಳುವು ಕೊಟ್ಟರೆ ಆ ಸೂರು ಹಿಡಿದು ...ಕೊತ್ತು ಸಂಭಾಳಿಸಿಯೇನು. ಅಂತಹ ಯಾವ ಸುಳುವೂ ಸಿಗಲಿಲ್ಲ. ... ಧಿಕ್ಕಣುವಿಕೆ. ಮತ್ತೊಮ್ಮೆ ಅನ್ನಿಸಿತು. ಎಲ್ಲ ಅವರೇ ಮಾಡಬೇಕೆ? ಈ ...ಯಸ್ಸಿನಲ್ಲೂ? ನಮಗೆಲ್ಲ ಏನಾಗಿದೆ? ನನ್ನೊಳಗೆ ಕಡಲ ಅಲೆಯಂತೆ ...ದ ಬೀಳುವ ಅರಗುವ ಮತ್ತೆ ಏಳುವ ಪ್ರಶ್ನೆಗಳು, ಮಾತುಗಳು.

...ರಾವಳಿಯಲ್ಲಿ ಕೋಮುವಾದ ಸಹಜ ಜೀವನ ಶೈಲಿಯಾಗಿ ಬೆಳೀತಿರುವ ...ಯ ಮತ್ತು ಸಾಹಿತ್ಯ ಕಲೆಗಳನ್ನು ಜನಬದುಕಿನಿಂದ ಹೊರತೆಗೆದು ...ರ ಮೂರ್ತಿಯಂತೆ ಪವಿತ್ರಗೊಳಿಸಿ ಪ್ರತಿಷ್ಠಾಪಿಸುವ ಸಂಕಟವನ್ನು ...ಹರಿಸಿಕೊಳ್ಳಬೇಕಿತ್ತು. ಬಾಲ್ಯದಲ್ಲಿ ಕಂಡ ಕೂಡುಕಟ್ಟಿನ ಕಡಲ ಸಂಸ್ಕೃತಿ ...ಕೋಶದಲ್ಲಿ ಜೀವಂತವಾಗಿತ್ತು. ಕಾವ್ಯವು ವರ್ತಮಾನದಲ್ಲಿ ಪ್ರೇರಕಗೊಳ್ಳುವ ...ಡಿದು ಕರಾವಳಿಯಲ್ಲಿ ಕೋಮುವಾದ ಬೆಳೆಯಲು ನಾಗರಿಕ ಪ್ರಜ್ಞೆಯ ...ಯ ಪಾಲುದಾರಿಕೆಯನ್ನು ನೆನಪಿಸಿದೆ.

...ಜನ ಸ್ಪಂದಿಸಿದ ರೀತಿ ಅಚ್ಚರಿಯದಾಗಿತ್ತು. ವೇದಿಕೆಯಲ್ಲಿದ್ದ ಡಾ. ಮೋಹನ ...ಅವರು 'ಏನನ್ನಬೇಕೋ ತಿಳೀತಿಲ್ಲ' ಅಂತ ವಾತ್ಸಲ್ಯ ಮತ್ತು ಗೌರವದಿಂದ ...ದರು. ವಿದ್ಯಾರ್ಥಿಗಳು ತುಂಬ ಭಾವೋದ್ವೇಗಗೊಂಡಿದ್ದರು. ಒಂದಿಬ್ಬರು ...ಕ್ಕಿ ಅಳುತ್ತಿದ್ದರು. ಎಲ್ಲಿಂದಲೋ ಬಂದವರು ಅಲ್ಲಿಯವರು ಎಷ್ಟೆಲ್ಲ ತುಂಬ ಡಿಸ್ಟರ್ಬ್ ಆಗಿದ್ದರು. ಮಾರನೇ ದಿನದ ಸಂವಾದದಲ್ಲಿ ಡಾ. ...ಹನ ಆಳ್ವ ಅವರು ಕೋಮುವಾದವನ್ನು ತಡೆವ ಪ್ರಯತ್ನದಲ್ಲಿ ನಿಮ್ಮೊಂದಿಗೆ ...ದಾರ ಅಂತ ಖಚಿತವಾಗಿ ಹೇಳಿದರಂತೆ.

...ಂತಹ ಬಂಡವಾಳಶಾಹಿಯೂ ಒಂದು ಕ್ಷಣದ ಉದ್ವೇಗದಲ್ಲಿ ಕ್ರಾಂತಿಗೆ ...ವಾಗಲಿ ಎಂದುಬಿಡಬಲ್ಲ' ಎಂಬ ಹುಡುಸತ್ಯವನ್ನು ನೆನಪಿಟ್ಟುಕೊಂಡೂ ...ಘಟನೆ ನನ್ನೊಳಗೊಂದು ಅಭಿಪ್ರಾಯವನ್ನು ರೂಪಿಸಿದೆ. ಜನ ...ದುಕೊಂಡಷ್ಟು ನಿರ್ದಯಿಗಳಲ್ಲ, ಮನುಷ್ಯನ ಸಾಮರಸ್ಯದ ತುಡಿತ ...ಯದ್ದು ಸಜೀವವಾದದ್ದು. ಅದನ್ನು ಕೋಮುವಾದದ ಎಂತಹ ಹತಾರವೂ ...ರ್ಮಲನ ಮಾಡಲಾರದು. ಬರಹಗಾರರಾದ ನಾವು ನಮ್ಮ ನಿಜತುಡಿತವನ್ನು ...ಜನರೊಂದಿಗೆ ಹಂಚಿಕೊಳ್ಳುತ್ತಿಲ್ಲ. ಸಾಹಿತ್ಯ-ಕಲೆಯ ಕುರಿತು ಮಾತನಾಡುವಾಗೆಲ್ಲ ...ೂ ತಿಳಿಯದ ಅಮೂರ್ತ ಮಾತುಗಳನ್ನೇ ಆಡುತ್ತೇವೆ. ಆಗೆಲ್ಲ ಜನರಿಂದ ...ನ್ನು ಬೇರೆಯಾಗಿಸಿಕೊಳ್ಳುವ ಅಹಂಕಾರವು ಬುಸುಗುಡುತ್ತಿರುತ್ತದೇನೋ. ...ವ ಮಗುವೂ ಜಾತಿ-ಧರ್ಮದ ಸಂಕೋಲೆಯನ್ನು ಹೊತ್ತು ಜನಿಸಲಾರದು. ... ಉಸಿರಾಡುವ ಗಾಳಿ ಪ್ರತಿಯೊಂದು ಜೀವಿಯ ಒಳಹೊಕ್ಕು ...ಬರುತ್ತದೆಂಬ ವಿಜ್ಞಾನದ ಮೊದಲ ಪಾಠವನ್ನು ನೆನಪಿಸಲು ನಮ್ಮ ... ಅಡ್ಡಬರುತ್ತದಲ್ಲವೇ? ಕಾರ್ನಾಡರು ನೈಪಾಲ್‌ರನ್ನು ಆಕ್ಷೇಪಿಸಿರುವುದು ...ಗಾರನಿಗಿರಬೇಕಾದ ... ಬದ್ಧತೆಯ ಕುರಿತು. ಆದರೆ ಚರ್ಚೆಯ ...ವನ್ನು ತಪ್ಪಿಸುವ, ಸಾಹಿತ್ಯ ಕ್ಷೇತ್ರದಲ್ಲಿ ಆಗಾಗ ನಡೆಯುವ ಸರಳ ...ದ ಮಟ್ಟಕ್ಕೆ ಇಳಿಸುವ ಪ್ರಯತ್ನಗಳು ಬೋಗದಸ್ತಾಗಿಯೇ ನಡೆಯುತ್ತಿವೆ. ...ತಹ ಸ್ಥಿತಿಯಲ್ಲಿ ಮೌನ ಎಂಬ ಮಹಾಪಾಪದಿಂದ ನಮ್ಮನ್ನು ...ಚಿಕೊಳ್ಳುವುದು ಆತ್ಮ ಅಲ್ಲವೇ? ಚಾಮ್ಸ್ಕಿ - ಮನುಷ್ಯರ ಬದುಕಿಗೆ ...ಬಂಧಿಸಿದ ವಾಸ್ತವಿಕ ಸತ್ಯಗಳನ್ನು ತಿಳಿಸುವ ಮಧ್ಯವರ್ತಿಯಾಗಿ ಕೆಲಸ ...ಸುವುದು ಬರಹಗಾರರ ನೈತಿಕ ಜವಾಬ್ದಾರಿ ಎಂದಿದ್ದು ನೆನಪಾಗ್ತಿದೆ. ...ವತ್ತು ನಾನೇನೂ ಮಹಾ ಹೇಳಿರಲಿಲ್ಲ. ಸೇರಿದ್ದ ಸಂವೇದನಾಶೀಲರು ... ತಮ್ಮ ಅನುಭವಗಳಲ್ಲಿ, ಮನಸ್ಸುಗಳಲ್ಲಿ ಮಾತನ್ನು ಮರುಸೃಷ್ಟಿಸಿಕೊಂಡರು. ಆಡದೇ ಉಳಿದ ಎಲ್ಲವನ್ನೂ ಅವರು ತಮ್ಮೊಂದಿಗೆ ತಾವು ಮಾತಾಡಿಕೊಂಡರು. ನನ್ನ ಕವಿತೆಯ ಅರ್ಥಲಯವನ್ನು ಮಿದ್ದು ನಾದದ ಉಸಿರು ತುಂಬಿ ಹಾಡಿದ ಕಲಾವತಿ ದಯಾನಂದ್ ಮತ್ತು ತಂಡದವರು ಮಾತನ್ನು ಮುಂದುವರಿಸಿದ್ದೇ ಅಲ್ಲವೇ? ದೇವನೂರು ಹೇಳುವ 'ನನ್ನ ಕಿರುಬೆರಳಗಾತ್ರದ ಬರಹ...' ಎಂಬ ಮಾತು ಅಯಾಚಿತವಾಗಿ ನೆನಪಾಗ್ತಿದೆ. ಕಿರುಬೆರಳ ಉಗುರಿನಷ್ಟೂ ಅಲ್ಲದ ಅಲ್ಪ ಮಾತು ಮನಸ್ಸುಗಳಾಳಕ್ಕಿಳಿದು ಮೀಟಬಲ್ಲುದಾದರೆ, ನಾವೆಲ್ಲ ಮಾತಾಡುವುದು, ಬರೆಯುವುದು ಯಾವ ಕಂಪನವನ್ನೂ ಉಂಟು ಮಾಡದು ಎನ್ನಬಹುದೆ?

ಕವಿಸಮಯ - ಕವಿ ನಮನ: ನನ್ನ ಕಾವ್ಯ ಪ್ರೇರಣೆಗಳು

ಬರಹ ನನಗೆ ಜೀವದ್ರವ್ಯ. ಈ ಜೀವದ್ರವ್ಯಕ್ಕೆ ಧಾತುವನ್ನು ಎರೆದ ಸಂಗತಿಗಳು ಅಗಣಿತ. ಆ ಅಸಂಖ್ಯ ಜೀವಸೆಲೆಗಳನ್ನು ನೆನೆಯುವುದು ಹೇಗೆ? ನೆನೆಯದಿರುವುದು ಹೇಗೆ? ನಾನು ಕಡಲ ದಂಡೆಯಲಿ ಬೆಳೆದವಳು. ಉಪ್ಪುನೀರ



ಹೊಳೆಯ ದಡದಲ್ಲೇ ಸಿಹಿನೀರ ಬಾವಿಯನ್ನು ಕಂಡಿದ್ದೆ. ಗಜನಿ ಭೂಮಿಯ ಉಪ್ಪು ಉಂಡೇ ನೂರಾರು ತೆಂಗುಗಳನ್ನು ಹೆತ್ತ ಮರದ ನೆರಳಲ್ಲಿ ಬೆಳೆದಿದ್ದೆ. ಕರಾವಳಿಯ ಕೂಡು ಬದುಕಿನ ಅಸಂಖ್ಯ ನೆನಹುಗಳು ನನ್ನೊಳಗಿವೆ.

ನನಗೆ ಓದಿನ ರುಚಿ ಹಚ್ಚಿ ಕಾವ್ಯ ಪರಂಪರೆಯೊಂದಿಗೆ ಸಂಬಂಧ ಹಚ್ಚಿದವ ನನ್ನ ಅಜ್ಜ, ತಿಳಿಯಲಾರದ ವಯದಲ್ಲಿಯೇ ಕುಮಾರವ್ಯಾಸ ಭಾರತ ಓದಲು ಹಚ್ಚಿದ್ದ. ನನ್ನ ಅಜ್ಜಿ ದೊಡ್ಡ ಜಮೀನ್ದಾರೀ ಕುಟುಂಬದಲ್ಲಿ ಹನ್ನೆರಡು ಮಕ್ಕಳ ತಾಯಿ, ತನ್ನ ಮಕ್ಕಳು ದೊಡ್ಡ ದೊಡ್ಡ ಕುಳಗಳಾಗಿದ್ದ ಕಾಲದಲ್ಲಿ ತನ್ನ ಹರಿದ ಸೀರೆಗೆ ತೇಪೆ ಹಚ್ಚುತ್ತಿದ್ದಳು. ಅಂಗಳದಲ್ಲಿ ಬೆಳೆಸಿದ್ದ ಅಬ್ಬಲಿಗೆ ಹೂದಂಡೆ ಕಟ್ಟಿ ಬುಟ್ಟಿಯಲ್ಲಿಟ್ಟು ಹೊರಗೆ ಕಟ್ಟೆಯ ಮೇಲಿಡುತ್ತಿದ್ದಳು. ರಸ್ತೇಲಿ ಹೋಗಿ ಬರೋರು ಒಂದು ದಂಡೆಗೆ ಹತ್ತು ಪೈಸೆಯಂತೆ ಬುಟ್ಟೀಲಿ ಹಾಕೋರು. ಎಂದೂ ಲೆಕ್ಕ ತಪ್ಪಿದ್ದಿಲ್ಲ! ಎಂಥ ನಿಯತ್ತಿತ್ತು ಬದುಕಿಗೆ. ಒಮ್ಮೆ ನಮ್ಮ ಮಾವಂದಿರೆಲ್ಲ ಸೇರಿ ಅಜ್ಜಿಯನ್ನು 'ಇಂಥ ಅಪಮಾನದ ಕೆಲಸಕ್ಕಾಗಿ ತರಾಟೆಗೆ ತಗೊಂಡಿದ್ರು. ಅಜ್ಜಿ ಮಾತ್ರ ತಣ್ಣಗೆ ಹೇಳಿದಳು. 'ನಂಗೂ ಸಾಕಾಗಿದೆ. ನನ್ನ ಹೆಣಕ್ಕಾಕೋ ವಸ್ತ್ರ ಆದ್ರೂ ನನ್ನದಾಗಿರ್ಲಿ.' ಪ್ರಾಯಶಃ ನಾ ಕೇಳಿದ ಸ್ತ್ರೀವಾದದ ಮೊದಲ ಪಾಠ ಅದು. ಇವೆಲ್ಲ ನನ್ನ ಭಾವಕೋಶವನ್ನು ರೂಪಿಸಿದ ಸಂಗತಿಗಳು.

ಇವತ್ತು ನನ್ನ ಅಜ್ಜನ ಮನೆಯ ಕೋಲುಗಂಭವಷ್ಟೇ ಮುರಿದಿಲ್ಲ, ಬದುಕಿನಲ್ಲಿ ನಿಯತ್ತು ವಿಶ್ವಾಸಗಳು ಛಿದ್ರಗೊಂಡಿವೆ. ನೆಲ ಸುಡುಭೂಮಿಯಾಗಿದೆ. ಜಾತಿ, ಉಪಜಾತಿ, ಧರ್ಮಗಳು ಮನುಷ್ಯ ಸಂಬಂಧದ ಆಧಾರಗಳಾಗಿವೆ. ಕಳೆದೆರಡು ದಶಕಗಳಿಂದ ಬರಹದೊಂದಿಗೆ ಅನುಸಂಧಾನಿಸ್ತಿರೋ ನಮ್ಮ ತಲೆಮಾರಿಗೆ ತುಂಬ ಬಿಕ್ಕಟ್ಟಿನ ಕಾಲವಿದು. ಹಿಂಸೆಯ ಸೂಕ್ಷ್ಮ ಸ್ಥೂಲ ಸ್ವರೂಪಗಳು ಮೋಸದ ವಿವಿಧ ಚಹರೆಗಳು ನಮ್ಮ ಪ್ರಜ್ಞೆಯನ್ನು ಅಧೀರತೆಗೂ ಮರೆವಿನ ಮಹಾರೋಗಕ್ಕೂ ತಳ್ತಾ ಇದೆ. ಇಂತಹ ಹಿಂಸೆಯ, ಕ್ರೌರ್ಯದ ವರದಿಗಳಿಲ್ಲದ ದಿನ ಓದುವ ನೋಡುವ ವಾರ್ತೆ ಚಪ್ಪೆ ಅನ್ನಿಸುವಷ್ಟು ಹಿಂಸಾರತಿಯ ಕಡೆ ಚಲಿಸ್ತಾ ಇದ್ದೇವೆಯೇ? ಸೃಜನಶೀಲತೆಗಿದು ಬಿಕ್ಕಟ್ಟಿನ ಕಾಲ.

ಜಗತ್ತು ಕೊಳ್ಳುವವ-ಮಾರುವವ ಎಂಬ ವರ್ಗೀಕರಣದಲ್ಲಿ ಕಳೆದುಹೋಗುವ ಕಡುಕಾಲದಲ್ಲಿ ಬರಹಗಾರನಿಗೆ ತನ್ನ ಸಮುದಾಯ, ಭಾಷೆಗಳೊಂದಿಗೆ ಇರುವ, ಇರಬೇಕಾದ ಸಂಬಂಧದ ಸ್ವರೂಪವೇನು? ಎಂಬ ಪ್ರಶ್ನೆ ನನ್ನನ್ನು ತೀವ್ರವಾಗಿ ಕಾಡುತ್ತದೆ. ಬರಹಗಾರ ಕೂಡ ಬಳಕೆದಾರಿಕೆಯ ಅಸೂಕ್ಷ್ಮವನ್ನು ತನ್ನದಾಗಿಸಿಕೊಳ್ಳುವನೇ? ಬಂಡವಾಳಶಾಹಿ ಮತ್ತು ಪ್ರಭುತ್ವ ಕಲೆ-ಸಾಹಿತ್ಯಗಳಿಗೆ ಪೋಷಣೆಯನ್ನು ನೀಡ್ತಾ ಅದರ ನಿರ್ದೇಶಕ ಯಾಜಮಾನ್ಯವನ್ನು ಪ್ರಕಟಿಸುತ್ತಿರೋದನ್ನ ಕನ್ನಡ ಕಾವ್ಯ ಅನುಭವಿಸಿದೆ.

ವಿರಾಮ ಕೊಡಿ ಕವಿಗಳಿಗೆ ಕವಿತೆ ಬರೆಯಲು ಆದೇಶಿಸುತ್ತಿದ್ದಾನೆ ಹಿಟ್ಲರು. ಇತ್ತೀಚೆಗೆ ಗಿರೀಶ ಕಾರ್ನಾಡರು ಮುಂಬೈಯ 'ಲಿಟರೇಚರ್ ಅಲೈವ್' ಎಂಬ ಸಂಸ್ಥೆಯಲ್ಲಿ ನೈಪಾಲ್ ಬಗ್ಗೆ ಎತ್ತಿದ ಪ್ರಶ್ನೆಯನ್ನು ಒತ್ತರಿಸಿ, ಲೇಖಕನು ವಿಷಯದಾಚೆ ಮಾತಾಡಿದ್ಯಾಕೆ? ಎಂಬ ಪ್ರಶ್ನೆಯು ಮುಖ್ಯವಾಗುತ್ತಿರೋದು ಕೂಡ ಇಂತಹದೇ ಬೆಳವಣಿಗೆಯಾಗಿದೆ.

ಸಾಹಿತ್ಯ-ಕಲೆಯ ಸಂಗತಿಗಳು ಸಂಭ್ರಮದ, ಶುದ್ಧತೆಯ ಕಲಾತ್ಮಕ ವಿನ್ಯಾಸವನ್ನು ಪಡೆದುಕೊಂಡಷ್ಟೂ ಒಟ್ಟು ಜನಸಮುದಾಯದಿಂದ ಬೆನ್ನು ತಿರುಗಿಸುವುದು ವಿಪರ್ಯಾಸವಲ್ಲವೇ? ಇವತ್ತು ನಾನು ನನ್ನ ತಲೆಮಾರಿನ ಸಂವೇದನಾಶೀಲರ ವಕ್ತಾರಳಾಗಿ ಅವರ ತಲ್ಲಣಗಳನ್ನು ಉಡಿಯಲ್ಲಿ ಕಟ್ಟಿಕೊಂಡು ಬಂದು ನಿಂತಿದ್ದೇನೆ. ನೂರಾರು ನದಿಗಳನ್ನು ಒಡಲೊಳಗಿಟ್ಟುಕೊಂಡು ಕಡಲೆಂಬ ಮತ್ತೊಂದೇ ಘನತೆಯನ್ನು ಬಿತ್ತರಿಸುವ ಸಂಸ್ಕೃತಿಯ ಕೊಡ್ಲ ಇಂದು ಹೊರಜಗತ್ತಿಗೆ ಕೋಮುವಾದದ ಮತೀಯವಾದದ ಉನ್ಮಾದಗಳ ತಾಣವಾಗುತ್ತಿರೋದು ಅತ್ಯಂತ ನೋವಿನ, ಹೇಸಿಗೆಯ ಸಂಗತಿಯಾಗಿದೆ. ಯಾರು ಯಾರೊಂದಿಗೆ ಮಾತನಾಡಬೇಕು; ಯಾರು ಏನನ್ನು ಉಣ್ಣಬೇಕು? ಯಾರು ಏನು ತೊಡಬೇಕು, ಯಾರೊಂದಿಗೆ ಒಡನಾಡಬೇಕು, ಯಾವ ಆಚರಣೆಗಳು ಮೇಲ್ಪಂಕ್ತಿಗೆ ಬರಬೇಕು, ಯಾವುದು ರದ್ದಾಗಬೇಕು... ಇಂತಹ ಜನಬದುಕಿನ ಲಯವನ್ನೇ ತುಂಡರಿಸಿ ನಿಯಂತ್ರಿಸುವ ದಮನಕಾರಿ ಪ್ರವೃತ್ತಿ ಬೆಳೀತಿದೆ. ವಿಚಾರವಂತರೂ, ಪ್ರಜ್ಞಾವಂತರೂ ಆಗಿರುವ ನನ್ನ ಕರಾವಳಿಯ ಜನ ಹಿಟ್ಲರನ ಕಾಲದ ಪ್ರಜೆಗಳಂತೆ ಸಭ್ಯತೆಯ ಮೌನದ ಮಹಾಪಾಪವನ್ನು ಹೊರಬೇಕೆ? ಕೂಡುಕಟ್ಟಿನ ಈ ಬದುಕು ಹೀಗೆ ಧ್ವಂಸಗೊಳ್ಳಬೇಕೆ? ನಮ್ಮ ವರ್ತಮಾನದ ಇಂತಹ ಸವಾಲುಗಳು ಸಂವೇದನಾಶೀಲತೆಯ ಎದುರಿರಿರುವ ಬಿಕ್ಕಟ್ಟುಗಳೇ. ನನ್ನ ಕವಿತೆಯ ಒಂದು ಸಾಲು;

ರಸ್ತೆಯಲಿ ಚೆಲ್ಲಿದ್ದ ರಕ್ತ ಯಾರದೋ
ನನಗೆ ಮಾತ್ರ ಹರಿಗೆ ಕೋಣೆಯದೇ ನೆನಪು.

ಅಲ್ಲಮ ಹೇಳುವ 'ಹಿಂದಣ ಅನಂತವನು ಮುಂದಣ ಅನಂತವನು ಒಳಗೊಳ್ಳೋ ಅನ್ವೇಷಕತೆಯನ್ನು ಒಡಲುಗೊಳ್ಳುವುದೆಂತು? ಬೇಟೆಗಾರ ಬಾಣ ಹೂಡಿದ್ದಾನೆ. ಬಾಣ ನಾಟುವವರೆಗೂ ಹಾರುವ ರೆಕ್ಕೆ ಮುರಿದ ಹಕ್ಕಿ ಹಾಡಬೇಕು. ಆ ಹಾಡಿಗೆ ಯಾವ ಛಂದ? ಯಾವ ಲಯ? ಯಾವ ವ್ಯಾಕರಣ?"

ಕಳೆದೊಂದು ವಾರದಿಂದ ಆಳ್ವಾಸ್ ನುಡಿಸಿರಿಯ ಬಗ್ಗೆ ಎದ್ದ ಚರ್ಚೆಗಳು ನನ್ನಂತಹ ಕಿರಿಯಳನ್ನ ತುಂಬ ಡಿಸ್ಟರ್ಬ್ ಮಾಡಿದೆ. ಕಿರಿಯಳಾದ ನಾನು ಹಿರಿಯರಾದ ತಮ್ಮಲ್ಲಿ ಒಂದು ವಿಜ್ಞಾಪನೆಯನ್ನು ಸಲ್ಲಿಸ್ತಿದ್ದೇನೆ. ಇದು ನಾನು ನನ್ನ ತವರಿಗೆ ಮಾಡೋ ಹಕ್ಕೊತ್ತಾಯ. ಮಂಜುನಾಥನಂತಹ ಮಹಾಜ್ಞಾನಿ ನೆಲೆಯೂರಿದ ಈ ನೆಲದಲ್ಲಿ, ಅಬ್ಬಕ್ಕನ ವೀರಾಳ್ತನದ ಈ ಗಾಳಿಯಲ್ಲಿ, ಸಿರಿಯೆಂಬ ಧೀಮಂತೆಯ ಈ ಮಣ್ಣಲ್ಲಿ ಕೋಮುವಾದ ಹೆಣ್ಣಿನ ಬದುಕಿನ ಹಕ್ಕನ್ನೆಲ್ಲ ಕಸಿಯುತ್ತಿದೆ. ನಮಗೆ ಕೊಡ್ಲ ಎಂದರೆ ಕಾರಂತರು, ವೈದೇಹಿ, ಸಾರಾ... ಆಗಿರಬೇಕೆ ವಿನಃ ದಿನಕ್ಕೊಂದು ವಿಪ್ಲವಗಳಿಂದಲ್ಲ. ಡಾ. ಮೋಹನ ಆಳ್ವ ಅವರು ಸಜ್ಜನರು, ಸದ್ವಿವೇಕಿಗಳು, ಸಂಘಟಕರು, ಕರ್ತೃತ್ವಶಾಲಿಗಳು. ಅವರು ಈ ನೆಲದಲ್ಲಿ ಬೆಳೀತಿರೋ ಕೋಮುವಾದವನ್ನು ತಡೆವ ತಡೆಗೋಡೆಯಾಗಬೇಕು. ಇಲ್ಲದಿದ್ದರೆ ನನ್ನಂತಹ ಸಾಮಾನ್ಯ ಕಿರಿಯ ... ಈ ವೇದಿಕೆಯಲ್ಲಿ ಭಾಗವಹಿಸಿದ್ದೆ ಎನ್ನುವುದಕ್ಕೆ ಬದುಕಿರುವಷ್ಟು ಕಾಲವೂ ಪಶ್ಚಾತ್ತಾಪ ಪಡುವಂತಾದೀತು. ನಾಮ್ ಚಾಮಸ್ಕಿಯಂತಹ ಚಿಂತಕ ಹೇಳ್ತಾನೆ "ಭಯೋತ್ಪಾದನೆಯನ್ನು ತಡೆಯುವುದು ಎಂದರೆ ಭಯೋತ್ಪಾದನೆಯಲ್ಲಿ ಭಾಗವಹಿಸುವುದನ್ನು ತಡೆಯುವುದು". ಇವತ್ತು ಭಯೋತ್ಪಾದನೆ ಹೊಸ ಸತ್ಯವಾದರೆ ಅದನ್ನ ಎದುರಿಸಬಹುದು. ನಾವೇ ಭಯೋತ್ಪಾದಕರಾಗುವ ವಿಚಾರವನ್ನು ಎದುರಿಸುವುದು ಹೇಗೆ? ಸಾಹಿತ್ಯ ಇದರಿಂದ ಆಚೆಗಿನದಲ್ಲ ಅಂತ ನನ್ನ ನಂಬಿಕೆ. ನಮಸ್ಕಾರ.

■ ಡಾ. ವಿನಯಾ

ಸೌಜನ್ಯಳ ರೇಪ್ ಮತ್ತು ಮರ್ಡರ್...


▶▶ 11

...ವಾಗಿಹೋಯ್ತು, ಸರಣಿ ರಹಸ್ಯ ಸಭೆ ನಡೆಸಿತು. ...ಕ್ಷೇತ್ರಕ್ಕೆ ಕಳಂಕ ತರಲು ಕೆಲವರು ಮಾಡುತ್ತಿರುವ ...ಪಿತೂರಿ ಇದೆಂದು ಬಿಂಬಿಸಲು ನೋಡಿದರು. ಮೊದಲು ... ತಮ್ಮ ಹರ್ಷೇಂದ್ರ ಹೆಗ್ಗಡೆ ಕರೆಸಿದ್ದ ಉಜಿರೆಯ ...ದಲ್ಲಿ ಹೆಗ್ಗಡೆ ಪಡೆಗೆ ಅಪಶಕುನವೇ ಎದುರಾಯ್ತು ... ಬೆಂಬಲಿಸುವ ಗೋಜಿಗೆ ಹೋಗಲಿಲ್ಲ.

...ಎರಡನೇ ಪ್ರಯತ್ನ ಹರ್ಷ ನಡೆಸಿದರು. ಆಗಲೂ ...ಕ್ಷ ಸಿಗಲಿಲ್ಲ, ಸಿಬಿಐ ತನಿಖೆ ನಡೆಸಿದರೆ ಕ್ಷೇತ್ರದ ...ಮರ್ಯಾದೆಗೆ ಕುಂದು ಅದ್ಹೇಗೆ ಬರುತ್ತದೆಂದು ಜನ ...ಗೇಟು ಕೊಟ್ಟರು. ಆಗ ಸಾಕ್ಷಾತ್ ವೀರೇಂದ್ರ ... ಅಖಾಡಕ್ಕೆ ಇಳಿದರು. ಧರ್ಮಸ್ಥಳದಲ್ಲಿ ... ಮಾಡಿದರು. ಸೌಜನ್ಯ ಮಾನಭಂಗ-ಪ್ರಾಣಹರಣವಾಗಿ ಒಂದೂವರೆ ತಿಂಗಳಾದ ನಂತರ ಅನಿವಾರ್ಯವಾಗಿ ಬಾಯ್ಬಿಟ್ಟರು! ಸಿಬಿಐ ತನಿಖೆಗೆ ನಮ್ಮದೇನೂ ಅಭ್ಯಂತರವಿಲ್ಲ ಎಂದರು. ಸಿಬಿಐ ತನಿಖೆಯಾದರೆ ಧರ್ಮಾಡಳಿತದ ಗೋಲ್‌ಮಾಲ್-ಶ್ರೀಮಂಜುನಾಥನ ಸನ್ನಿಧಿಯಲ್ಲಾಗುವ ಸಾಲು-ಸಾಲು ಅಸಹಜ ಸಾವುಗಳ 'ಹೂರಣ' ಹೊರಬರುತ್ತದೆ. ಆಗ ತಮ್ಮ ಪ್ರತಿಷ್ಠೆ ನೇತ್ರಾವತಿ ನದಿಯಲ್ಲಿ ಕೊಚ್ಚಿಕೊಂಡು ಹೋಗುತ್ತದೆಂಬ ಭೀತಿ ಹೆಗ್ಗಡೆ ರಿಪಬ್ಲಿಕ್‌ಗೆ. ಆದರೂ ವೀರೇಂದ್ರ ಹೆಗ್ಗಡೆ ಈಗ ಒಲ್ಲದ ಮನಸ್ಸಿನಿಂದಲೇ ತಮ್ಮ ಪರಿವಾರ ಪರಿಶುದ್ಧ ಎಂದು ತೋರಿಸಿಕೊಳ್ಳಲು ಸಿಬಿಐ ತನಿಖೆಗೆ ಸಮ್ಮತಿಸಿದ್ದಾರೆ. ಆದರೆ ಹೆಗ್ಗಡೆ ಕೇಂದ್ರ ಸರ್ಕಾರವನ್ನೂ ಪಳಗಿಸಬಲ್ಲ ದೇವಮಾನವನೆಂಬುದು ಬೇರೆ ಮಾತು. ಬಿಡಿ!!

ಈಗ ಹೆಗ್ಗಡೆ ಬಗ್ಗೆ ತಾಲ್ಲೂಕಿನಲ್ಲಿ ಮೊದಲಿನ ಗೌರವಾದರವಿಲ್ಲ. ಹೆಗ್ಗಡೆ ಎಂದರೆ ಒಂಥರಾ ಭಯ, ಅನುಮಾನ, ನಿಗೂಢತೆ ಜನರನ್ನು ಆವರಿಸುತ್ತಿದೆ. ಧರ್ಮಸ್ಥಳದ ಸ್ಟಾಲ್ ಏರಿಯಾದಿಂದ ಗರ್ಭಗುಡಿ ತನಕ-ಅಲ್ಲಿಂದ ಅನ್ನಛತ್ರದವರೆಗೆ, ವಸತಿಗೃಹದಲ್ಲೆಲ್ಲ ನಡೆಯುವ ಹೆಗ್ಗಡೆ ಬಳಗದ ಪಂಟರ್-ಬೌನ್ಸರ್‌ಗಳ ಭಾನ್ಗಡಿ ಮತ್ತು ಗ್ರಾಮಾಭಿವೃದ್ಧಿ ಯೋಜನೆಯಲ್ಲಿನ ನಯವಂಚನೆಗಳಿಂದ ಇಡೀ ತಾಲ್ಲೂಕಿನ ಜನ ರೋಸತ್ತುಹೋಗಿದ್ದಾರೆ. ಹೊರಗೆ ಕಾಣುವ ಹೆಗ್ಗಡೆ ಮುಖವೇ ಬೇರೆ; ಒಳಗಿನ ಕ್ರೌರ್ಯ-ಕಾಸು ಮಾಡುವ ದಂಧೆ-ಭೂದಾಹದ ದಾದಾಗಿರಿಗಳ ರಹಸ್ಯ ಕಾರ್ಯಾಚರಣೆಯೇ ಬೇರೆ ಎಂಬುದು ಜನರಿಗೆ ಖಾತ್ರಿಯಾಗಿದೆ. ಬಿಜೆಪಿಯ ಪ್ರತಾಪಸಿಂಹ ನಾಯಕ್ ಮತ್ತು ವಿಜಯರಾಘವ ಪಡುವೆಟ್ನಾಯನಂಥವರನ್ನು ಬಿಟ್ಟರೆ ಹೆಗ್ಗಡೆ ಒಳ್ಳೆಯವರೆಂದು ಹೇಳೋರು ಈಗ ಬೆಳ್ತಂಗಡಿಯಲ್ಲಿ ಇಲ; ಇಡೀ ಕರಾವಳಿಯಲ್ಲೂ ಇಲ್ಲ. ಡ್ಯಾಮೇಜು ಕಂಟ್ರೋಲ್‌ಗೆ ಕ್ಷೇತ್ರಪಾಲರೀಗ ತಮ್ಮ ಗ್ರಾಮಾಭಿವೃದ್ಧಿ ಯೋಜನೆಯ ನೌಕರರನ್ನು ಬಳಸಬೇಕಾಗಿ ಬಂದಿದೆ, ಪಾಪ.


ಒಂದಂತೂ ಖರೆ; ಹೆಗ್ಗಡೆ ರಿಪಬ್ಲಿಕ್ ವಿರುದ್ಧದ ಆಕ್ರೋಶ ಈಗ ಧರ್ಮಸ್ಥಳ ಸೀಮೆಯಲ್ಲಿ ಮಡುಗಟ್ಟಿದೆ. ವೀರೇಂದ್ರ ಹೆಗ್ಗಡೆ ಅದೆಷ್ಟೇ ಸಾಚಾ ಎಂದರೂ ಧರ್ಮಸ್ಥಳ ಕ್ಷೇತ್ರದಲ್ಲಿ ಒಂದೇ ಒಂದು ಹುಲ್ಲುಕಡ್ಡಿ ಅಲುಗುವುದಿದ್ದರೂ ಅದು ದೊಡ್ಡ ಧಣಿಗಳಿಗೆ ಗೊತ್ತಾಗಿಯೇ ಆಗಿರುತ್ತಾರೆ. ಹೀಗಾಗಿ ಧರ್ಮಸ್ಥಳದಲ್ಲಿ ನಡೆಯುತ್ತಿರುವ ಸುಲಿಗೆ, ಕೊಲೆ, ದಾದಾಗಿರಿ, ಭೂಮಾಫಿಯಾ ಮಸಲತ್ತು, ರೇಪ್‌ಗಳ ಸಮಗ್ರ ಚಿತ್ರಣ ಹೆಗ್ಗಡೆಗೆ ಗೊತ್ತೇ ಇರುತ್ತದೆ. ಇನ್ನಾದರೂ ಹೆಗ್ಗಡೆ ಎಚ್ಚೆತ್ತುಕೊಂಡು ಜನಪರವಾಗಿ ಚಿಂತಿಸುವುದನ್ನು ರೂಢಿಸಿಕೊಳ್ಳಬೇಕಿದೆ. ಇಲ್ಲದಿದ್ದರೆ ಹೆಗ್ಗಡೆ ಹಿಂಬಾಲಕರ ಶೋಷಣೆ, ಸುಲಿಗೆ, ಹಿಂಸೆ ಅನುಭವಿಸಿದವರು, ಮಾನ-ಪ್ರಾಣ ಭಂಗವಾದವರು, ಭೂಮಿ-ಮನೆ ಕಳೆದುಕೊಂಡವರು ಒಟ್ಟಾಗಿ 'ಕುಡುಮಪುರ' ಸಂಸ್ಥಾನ ಪತನಗೊಳಿಸದೇ ಬಿಡರು!! ■


ಮುಕ್ಸಿಕ ವಾಸಿಸದ ಐಷಾರಾಮಿ ಅಧ್ಯಕ್ಷರ ಭವನ ...


ತಮ್ಮ ತೋಟದ ಸಾಮಾನ್ಯವಾದ ಮನೆ



ಜಗತ್ತಿನ ಅತಿ ಬಡವ ಅಧ್ಯಕ್ಷ



ಆತನಿಗೆ ಮಾಧ್ಯಮಗಳು ಕೊಟ್ಟಿರುವ ಅಡ್ಡ ಹೆಸರು 'ಜಗತ್ತಿನ ಅತಿ ಬಡವ ಅಧ್ಯಕ್ಷ'. ಆ ವ್ಯಕ್ತಿಯ ನಿಜ ಹೆಸರು ಹೋಸೆ ಮುಕ್ಸಿಕ. ಆತ ದಕ್ಷಿಣ ಅಮೆರಿಕ ಖಂಡದಲ್ಲಿರುವ ಉರುಗ್ವೆ ದೇಶದ ಅಧ್ಯಕ್ಷ.

ಉರುಗ್ವೆ ಬಡ ದೇಶವೇನಲ್ಲ. ಸಾಕಷ್ಟು ನೈಸರ್ಗಿಕ ಸಂಪತ್ತು ಮತ್ತು ಜನಪರ ಆರ್ಥಿಕ ನೀತಿಯನ್ನು ಹೊಂದಿರುವ ಉರುಗ್ವೆ ತನ್ನ ನೆರೆಹೊರೆಯ ದೇಶಗಳಿಗಿಂತ ಹೆಚ್ಚು ಅಭಿವೃದ್ಧಿಯನ್ನು ಕಂಡಿದೆಯಲ್ಲದೆ 'ದಕ್ಷಿಣ ಅಮೆರಿಕದ ಸ್ವಿಟ್ಜರ್‌ಲ್ಯಾಂಡ್' ಎಂಬ ಖ್ಯಾತಿಯನ್ನೂ ತನ್ನದಾಗಿಸಿಕೊಂಡಿದೆ.

ಇಂತಹ ದೇಶದ ನಾಯಕ ಇತರ ದೇಶಗಳ ಅಧ್ಯಕ್ಷರಂತೆ ಅರಮನೆಗಳಂತಿರುವ ಅಧ್ಯಕ್ಷರ ಭವನದಲ್ಲಿ ವಾಸಿಸದೆ ಸಾಮಾನ್ಯ ರೈತನಂತೆ ತನ್ನ ಒಂದು ಸಾಮಾನ್ಯ ತೋಟದಲ್ಲಿ ವಾಸಿಸುತ್ತಿದ್ದಾರೆ. ಅಷ್ಟೇ ಅಲ್ಲ, ಜೀವನೋಪಾಯಕ್ಕೆ ತನ್ನ ಹೆಂಡತಿಯೊಂದಿಗೆ ತನ್ನ ತೋಟದಲ್ಲಿ ಹೂಗಳನ್ನು ಬೆಳೆದು ಮಾರುತ್ತಾರೆ! ಆತ ದೇಶದ ಅಧ್ಯಕ್ಷ ಎಂಬುದಕ್ಕೆ ಆತನ ತೋಟದ ಮುಂದೆ ಸಿಗುವ ಸುಳಿವು ಸದಾ ಕಾವಲು ನಿಂತಿರುವ ಇಬ್ಬರು ಪೊಲೀಸ್ ಪೇದೆಗಳು ಮಾತ್ರ.

ಇನ್ನೂ ವಿಚಿತ್ರದ ಸಂಗತಿ ಯಾವುದೆಂದರೆ ಈ ಮುಕ್ಸಿಕನಿಗೆ ಉರುಗ್ವೆ ಸರ್ಕಾರ ಕೊಡುವ ತಿಂಗಳ ವೇತನದಲ್ಲಿ (ಅಂದಾಜು ಐದೂವರೆ ಲಕ್ಷ ರೂಪಾಯಿಗಳು) ಆತ ಶೇ. 90 ಭಾಗವನ್ನು (ಸುಮಾರು ನಾಲ್ಕುಮುಕ್ಕಾಲು ಲಕ್ಷ ರೂಪಾಯಿಗಳನ್ನು) ಬಡವರ ಉದ್ಧಾರಕ್ಕೆ ಮತ್ತು ಹೊಸ ಉದ್ಯಮಗಳನ್ನು ಸ್ಥಾಪಿಸಲಿಕ್ಕೆ ದಾನ ಮಾಡುತ್ತಾರೆ. ಜೊತೆಗೆ ಸರ್ಕಾರಿ ವಾಹನಗಳ ಬದಲಾಗಿ ಆತ ತನ್ನ 25 ವರ್ಷಗಳಷ್ಟು ಪುರಾತನವಾದ ಫೋಕ್ಸ್‌ವಾಗನ್ ಕಾರ್‌ಅನ್ನು ಉಪಯೋಗಿಸುತ್ತಾರೆ.

ನಮ್ಮ ಮುಖ್ಯಮಂತ್ರಿಗಳ, ಮಂತ್ರಿಗಳ ಮಾತು ಬದಿಗಿರಲಿ, ನಮ್ಮ ರಾಜ್ಯದ ಓರ್ವ ಸಾಮಾನ್ಯ ಶಾಸಕನೂ ಇವತ್ತು ಕೋಟ್ಯಾಧಿಪತಿ. ಆತ ಓಡಾಡುವುದು ಐಶಾರಾಮಿ ಕಾರ್‌ಗಳಲ್ಲಿ, ರಾಜಕಾರಣ ಮಾಡುವುದು ಪಂಚತಾರಾ ರೆಸಾರ್ಟ್‌ಗಳಲ್ಲಿ. ಇನ್ನು ನಮ್ಮ ಶಾಸಕರು ಈಗ 'ತೆಗೆದುಕೊಳ್ಳುತ್ತಿರುವ' ಮಾಸಿಕ ಸಂಬಳ (ಟಿಎ, ಡಿಎ, ಫೋನ್, ಪೆಟ್ರೋಲ್ ಇತ್ಯಾದಿಗಳೆಲ್ಲ ಸೇರಿ) ಸುಮಾರು ಒಂದೂವರೆ ಲಕ್ಷ ರೂಪಾಯಿಗಳು. ಇದರೊಂದಿಗೆ ಕಾಂಟ್ರಾಕ್ಟ್, ಕಮೀಷನ್, ಕಿಕ್‌ಬ್ಯಾಕ್ ತರಹದ ಗಿಂಬಳಗಳು ಸೇರಿದರಂತೂ ಪ್ರತಿ ಶಾಸಕನ ತಿಂಗಳ ಆದಾಯ ಒಂದು ಕೋಟಿ ರೂಪಾಯಿಗಳನ್ನು ಮೀರುತ್ತದೆ. ಆದರೆ ಉರುಗ್ವೆಯ ಪ್ರಥಮ ಪ್ರಜೆ ಮುಕ್ಸಿಕ 'ತೆಗೆದುಕೊಳ್ಳುವ' ತಿಂಗಳ ವೇತನ ಬರೀ 54,000 ರೂಪಾಯಿಗಳು!!

2010ರಲ್ಲಿ ಮುಕ್ಸಿಕ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಉರುಗ್ವೆ ದೇಶದ ಕಾನೂನಿನಪ್ರಕಾರ ತನ್ನ ಸ್ವಂತ ಆಸ್ತಿಪಾಸ್ತಿಗಳ ಲೆಕ್ಕ ಕೊಟ್ಟಿದ್ದರು. ಆಗ ಆತ ತನ್ನ ಸ್ವಂತ ಆಸ್ತಿ ಎಂದು ಘೋಷಿಸಿಕೊಂಡಿದ್ದು 81,000 ರೂಪಾಯಿಗಳ ಮೌಲ್ಯವನ್ನು ಹೊಂದಿದ್ದ ತನ್ನ ಲಡಾಸು ಫೋಕ್ಸ್‌ವಾಗನ್ ಕಾರನ್ನು ಮಾತ್ರ.

ಆದರೆ ಈ ವರ್ಷ ಮುಕ್ಸಿಕ ತನ್ನ ಆಸ್ತಿಯ ಲೆಕ್ಕವನ್ನು ಕೊಟ್ಟಾಗ ಅದು 96 ಲಕ್ಷ ರೂಪಾಯಿಗಳಿಗೆ ಏರಿತ್ತು. ಭ್ರಷ್ಟನಲ್ಲದ, ಸರ್ಕಾರ ನೀಡುವ ಸಂಬಳವನ್ನೂ ಸಂಪೂರ್ಣವಾಗಿ ಪಡೆಯದ ಆತನ ಆಸ್ತಿ ಎರಡು ವರ್ಷಗಳಲ್ಲಿ ಹೇಗೆ ಏರಿತು ಎಂದು ನೋಡಿದವರಿಗೆ ಅಚ್ಚರಿಯೊಂದು ಎದುರಾಯಿತು. ಮುಕ್ಸಿಕ ತನ್ನ ಹೆಂಡತಿಯ ಹೆಸರಿನಲ್ಲಿದ್ದ ತೋಟ, ಅದರಲ್ಲಿರುವ ಮನೆ ಮತ್ತು ಟ್ರಾಕ್ಟರ್‌ಗಳ ಮೌಲ್ಯಗಳನ್ನೂ ಲೆಕ್ಕಹಾಕಿ ಅದರ ಅರ್ಧ ಭಾಗ ತನ್ನದೆಂದು ಘೋಷಿಸಿಕೊಂಡಿದ್ದರಷ್ಟೇ. ಅಂದರೆ ಆತನ ಹೆಸರಿನಲ್ಲಿದ್ದ ಆಸ್ತಿ ಹೆಚ್ಚಾಗಿರಲಿಲ್ಲ.

ಎಪ್ಪತ್ತರ ದಶಕದಲ್ಲಿ ಅಧಿಕಾರದಲ್ಲಿದ್ದ ಸರ್ವಾಧಿಕಾರಿ ಸರ್ಕಾರದ ವಿರುದ್ಧ ಮುಕ್ಸಿಕ ಸಶಸ್ತ್ರ ಹೋರಾಟ ಮಾಡಿದ್ದರು. ಕ್ಯೂಬಾದ ಕ್ರಾಂತಿಯಿಂದ ಸ್ಫೂರ್ತಿಪಡೆದ ಮುಕ್ಸಿಕ ಮತ್ತು ಅವರ ಗೆಳೆಯರು ವಿದ್ಯಾರ್ಥಿಗಳನ್ನು ಮತ್ತು ಕಬ್ಬು ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಕೂಲಿಕಾರ್ಮಿಕರನ್ನು ಒಗ್ಗೂಡಿಸಿ 'ಟುಪಕ್ ಅಮರು' ಎಂಬ ಎಡಪಂಥೀಯ ಗೆರಿಲ್ಲಾ ಯೋಧರ ಸೈನ್ಯವನ್ನು ಕಟ್ಟಿದ್ದರು. ಆದರೆ ಸರ್ಕಾರದ ವಿರುದ್ಧ ಯುದ್ಧ ಸಾರಿದ್ದಕ್ಕೆ ಮುಕ್ಸಿಕ ಮತ್ತು ಅವರ ಸಂಗಡಿಗರ ಮೇಲೆ ಎಗರಿ ಬಿದ್ದ ಸರ್ಕಾರಿ ಸೈನ್ಯ ಮುಕ್ಸಿಕ ಅವರ ದೇಹದ ಮೇಲೆ ಬರೋಬ್ಬರಿ ಆರು ಬಾರಿ ಗುಂಡುಗಳನ್ನು ಹಾರಿಸಿತ್ತು. ಅಷ್ಟೇ ಅಲ್ಲ, ಅವರನ್ನು 14 ವರ್ಷಗಳ ಕಾಲ ಜೈಲಿನಲ್ಲಿಡಲಾಗಿತ್ತು. ಅದೂ ಸಾಮಾನ್ಯ ಬಂಧಿಯಂತಲ್ಲ, ಬದಲಾಗಿ ಎರಡು ವರ್ಷಗಳ ಕಾಲ ಬತ್ತಿಹೋಗಿದ್ದ ಬಾವಿಯೊಂದರಲ್ಲಿ ಮುಕ್ಸಿಕ ಅವರನ್ನು ಏಕಾಂಗಿಯಾಗಿ ಇರಿಸಲಾಗಿತ್ತು. ಜೈಲಿನಲ್ಲಿ ಕಳೆದ ಸಮಯವೇ ತಮ್ಮ ಜೀವನ ದೃಷ್ಟಿಯನ್ನು ರೂಪಿಸಿತು ಎಂದು ಮುಕ್ಸಿಕ ಹೇಳಿಕೊಂಡಿದ್ದಾರೆ.

1985ರಲ್ಲಿ ಉರುಗ್ವೆಯಲ್ಲಿ ಮತ್ತೆ ಪ್ರಜಾಪ್ರಭುತ್ವ ಸ್ಥಾಪನೆಗೊಂಡಾಗ ಮುಕ್ಸಿಕ ಅವರನ್ನು ಬಿಡುಗಡೆ ಮಾಡಲಾಯಿತು. ಜೈಲಿನಿಂದ ಬಿಡುಗಡೆ ಪಡೆದ ಮುಕ್ಸಿಕ ಎಡಪಂಥೀಯ ಪಕ್ಷವನ್ನು ಸ್ಥಾಪಿಸಿ, ಸಂಸದೀಯ ಚುನಾವಣೆ... ಗೆದ್ದರು. 2010ರಲ್ಲಿ ಅವರ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿ... ಉರುಗ್ವೆ ದೇಶದ ಸಾಮಾನ್ಯ ಪ್ರಜೆಗಳಂತೆ ಸರ್ಕಾರಿ ಬಸ್‌ಗಳಲ್ಲಿ ಸಂಚರಿ... ತಮ್ಮ ಪ್ರಚಾರಕಾರ್ಯವನ್ನು ಮಾಡಿದ್ದರು. ಸಾಮಾನ್ಯನಂತೆ ಬದುಕುತ್ತಾ ಸಾಮ... ಆಶಯಗಳಿಗೆ ದನಿಯಾಗುತ್ತಾ ಹೋದ ಮುಕ್ಸಿಕರನ್ನು ಜನ ಮೆಚ್ಚಿ ಗೆಲ್ಲಿಸಿ...

ಸಾಮಾನ್ಯವಾಗಿ ಗೆದ್ದು ಅಧಿಕಾರ ಸಿಕ್ಕಿದ ನಂತರ ಜನ ಬದಲಾಗು... ಆದರೆ ಮುಕ್ಸಿಕ ಸಾಮಾನ್ಯ ವ್ಯಕ್ತಿಯಂತಲ್ಲ. ಇವತ್ತಿಗೂ ಬಟ್ಟೆ ಬರೆ, ಆಸ್ತಿ ಎಂದೆಲ್ಲ ತಲೆ ಕೆಡಿಸಿಕೊಳ್ಳದ ಮುಕ್ಸಿಕ ಅಧ್ಯಕ್ಷನಾಗುವ ಮುನ್ನ ... ಬದುಕುತ್ತಿದ್ದರೋ ಹಾಗೆಯೇ ಬದುಕುತ್ತಿದ್ದಾರೆ.

ಈಗ 77 ವರ್ಷ ಹರೆಯದ ಮುಕ್ಸಿಕ ಅವರ ತೋಟದ ಮನೆ ಸಾ... ಮನೆಯಂತಿದೆ. ಕುಡಿಯುವ ನೀರು ಸಿಗುವುದು ಒಂದು ಬಾವಿಯಿ... ಒಗೆದ ಬಟ್ಟೆಗಳನ್ನು ಒಣಗಿಸುವುದು ಅವುಗಳನ್ನು ಬಿಸಿಲಿನಲ್ಲಿ ನೇತು ಹಾ... ಮೂಲಕ. "ನನ್ನ ಈ ಜೀವನಕ್ರಮವನ್ನು ನೋಡಿ ಕೆಲವರು ನಾನ... ಹುಚ್ಚು ಮುದುಕ ಎಂದು ಭಾವಿಸಬಹುದು. ಆದರೆ ಹೀಗೆ ಬದುಕು... ನನ್ನ ಆಯ್ಕೆಯಾಗಿದೆ" ಎನ್ನುತ್ತಾರೆ ಮುಕ್ಸಿಕ.

ಸಸ್ಯಹಾರಿಯೂ, ನಾಸ್ತಿಕರೂ ಆದ ಮುಕ್ಸಿಕ ಅವರ ಸಿದ್ಧಾಂತ "ಐಶಾ... ಜೀವನಶೈಲಿಯನ್ನು ನಡೆಸಲು ಹೆಚ್ಚುಹೆಚ್ಚು ಬೇಕೆಂದು ಬಯಸುವ... ನಿಜವಾಗಲೂ ಬಡವರು. ಅವರು ಗಳಿಸಿದ್ದನ್ನೆಲ್ಲ ಉಳಿಸಿಕೊಳ್ಳಲು ... ಜೀವನಪರ್ಯಂತ ಜೀತದಾಳುಗಳಂತೆ ದುಡಿಯುತ್ತಿರುತ್ತಾರೆ. ಅಷ್ಟೇ ... ಈ ಭೂಮಿಗೆ ಹೊರೆಯಾಗದಂತೆ ಬದುಕುವುದು ಮನುಷ್ಯನ ಕರ್ತವ್ಯವಾಗಬೇ...


ಮುಕ್ಸಿಕ ಅವರ ಜೀವನಶೈಲಿಗೂ ಪರಿಸರ ರಕ್ಷಣೆ ಬಗ್ಗೆ ಅವರಿಗೆ ಇ... ಕಾಳಜಿಗೂ ಸಂಬಂಧವಿದೆ. ಪರಿಸರ ರಕ್ಷಣೆ ಕುರಿತು ರಿಯೋ ದೆ ಜನೈ... ನಗರದಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮುಕ್ಸಿಕ ಅವರು ತ... ಭಾಷಣದಲ್ಲಿ ಹೀಗೆ ಹೇಳಿದ್ದರು: "ಜನರನ್ನು ಬಡತನದಿಂದ ಹೊ... ತರಲು ಇಡೀದಿನ ಇಲ್ಲಿರುವವರೆಲ್ಲ ಸುಸ್ಥಿರ ಅಭಿವೃದ್ಧಿ ಕ್ರಮಗಳ... ಮಾತನಾಡಿದ್ದಾರೆ. ಆದರೆ ಅಭಿವೃದ್ಧಿ ಹೊಂದಿರುವ ದೇಶಗಳ ಕೊಳ್ಳುಬ... ಸಂಸ್ಕೃತಿಯನ್ನೇ ಇತರರು ಯಾಕೆ ಅಭಿವೃದ್ಧಿಯ ಮಾದರಿಯಾಗಿ ಪರಿಗಣಿಸಬೇ... ಉದಾಹರಣೆಗೆ ಇವತ್ತು ಜರ್ಮನ್ ದೇಶದ ಪ್ರತಿಯೊಂದು ಮನೆಯಲ್ಲಿರು... ವಾಹನಗಳು ಪ್ರತಿ ಭಾರತೀಯ ಮನೆಯಲ್ಲೂ ಇರುವಂತಾದರೆ ನಮ್ಮ ಭೂ... ಎಂತಹ ಹೊರೆಯಾಗುತ್ತದೆ? ಇಲ್ಲಿ ಉಸಿರಾಡಲು ಆಮ್ಲಜನಕವಾದ... ಇರುತ್ತದೆಯೇ? ಇವತ್ತು ಉಳ್ಳವರ ದೇಶಗಳಲ್ಲಿ ಉತ್ಪತ್ತಿ ಆಗುತ್ತಿರುವ... ಕಸವನ್ನು ಜಗತ್ತಿನಲ್ಲಿರುವ ಏಳೆಂಟು ಕೋಟಿ ಜನರೂ ಉತ್ಪಾದಿಸಲಾರಂಭಿ... ಈ ಭೂಮಿ ಉಳಿಯುತ್ತದೆಯೇ? ಈ ಭೂಮಿಯನ್ನು ನಾಶಮಾಡುತ್ತಿ... ಕೊಳ್ಳುಬಾಕ ಸಂಸ್ಕೃತಿಯನ್ನು ನಾವು ಪ್ರೋತ್ಸಾಹಿಸುವ ಮೂಲಕ ನಾವು ಭೂಮಿಯನ್ನು ವಿನಾಶದತ್ತ ತೆಗೆದುಕೊಂಡು ಹೋಗುತ್ತೇವೆ."

ಅಧಿಕಾರದ ಮದವನ್ನೇರಿಸಿಕೊಳ್ಳದ, ತಾನು ನಂಬಿರುವ ಸರಳಜೀ... ಕ್ರಮದಂತೆ ಬದುಕಿರುವ ಮುಕ್ಸಿಕ ತರಹದ ಜನ ಇದ್ದಾರೆ ಎಂಬುದೇ ಅಚ್ಚರಿ... ಸಂಗತಿ ಅಲ್ಲವೇ?

■ ಸಾವಂತ್ರಿ


ಮುಕ್ಸಿಕರ ಫೋಕ್ಸ್‌ವಾಗನ್ ಕಾರು...


ಕೃಷಿ ಕೆಲಸದಲ್ಲಿ ನಿರತರಾಗಿರುವುದು...




ಭೂಗತರು

ನಾವು ಬಂಡುಕೋರರು
ಹಾಗೆಂದಾಕ್ಷಣ ನಮ್ಮ ರಕ್ತ ಕಪ್ಪಲ್ಲ
ನಿಮ್ಮ ಹಾಗೆ ಕೆಂಪಗೆ ಬೆಚ್ಚಗೆ ಇದೆ
ನನ್ನ ಕೊನೆಯ ತಮ್ಮನಿಗೆ ಎದೆ ಹಾಲೂಡಿಸುವಾಗ ನಮ್ಮ ತಾಯಿ
ನಿಮ್ಮ ತಂದೆಯಂತೆ ನಮ್ಮ ತಂದೆ ಕೂಡ
ಪ್ರತಿದಿನ ಕುಡಿದು ಬಂದು
ದನಕ್ಕೆ ಬಡಿಯುವ ಹಾಗೆ ಬಡಿಯುತ್ತಾನೆ

ನಮ್ಮ ಕೂಗಿಗೆ ಕಿವುಡಾದ ಹಾಗೆ ನಮ್ಮ ದೇವರು
ನಿಮ್ಮ ಕೂಗಿಗೂ ನಿಮ್ಮ ದೇವರು ಕಿವುಡನೇ!

ನಾವೂ ಅಳುತ್ತೇವೆ
ಅಮ್ಮ ಬೈದಾಗ ಅಪ್ಪ ಅಡ್ಡಾಡಿಯಾದಾಗ
ಅಣ್ಣ ಮುನಿಸಿಕೊಂಡು ಮನೆಬಿಟ್ಟು ಹೊರಟುಹೋದಾಗ
ನಮಗೂ ಸಿಟ್ಟು ಬರುತ್ತದೆ
ವಯಸ್ಸಿಗೆ ಬಂದ ನಿಮ್ಮ ಅಕ್ಕತಂಗಿಯರಂತೆ ನಮ್ಮ ಅಕ್ಕತಂಗಿಯರು
ವರದಕ್ಷಿಣೆ ಸೀಮೆಎಣ್ಣೆ ಡಬ್ಬಕ್ಕೆ ಬಲಿಯಾದಾಗ
ಹೆಂಡತಿಯರ ಸೀರೆಗಾಗಿ
ಸರ್ಕಾರಕೆ ಅರ್ಜಿಹಾಕಿಕೊಳ್ಳುವ ನಮ್ಮಂಥವರು
ಬೆಳದಿಂಗಳಿಗೆ ಕರಕಟ್ಟಬೇಕಾಗಿದೆ.
ಚಂದ್ರನೆಂದರೆ ನಿಮ್ಮ ಹಾಗೆ ನಮಗೂ
ಕೊಳಗೇರಿ ಹುಡುಗನ ಕೈಯೊಳಗಿನ
ನಾಯಿ ಕಚ್ಚಿಕೊಂಡು ಹೋದ ಅರ್ಧರೊಟ್ಟಿ



ಓಡಾಡುವ ಆಂಬುಲೆನ್ಸ್‌ನಂತಿರುವ ನಮ್ಮ ಮನೆಯಲ್ಲಿ
ಯಾವಾಗಲೂ ಇಳಿಬಿದ್ದಿರುತ್ತದೆ ಪರದೆ ನೆಪಮಾತ್ರಕ್ಕೆ ನಮ್ಮ ನಡು...
ನಮ್ಮ ಹೆಣ್ಣುಮಕ್ಕಳು ಬಟ್ಟೆ ಬದಲಾಯಿಸುತ್ತಾರೆ ಆ ಕಡೆ
ನಾವೂ ಬಾಹುಬಲಿಗಳಂತೆ ದಿಗಂಬರರಾಗಿ ಈ ಕಡೆ
ನಮ್ಮ ಉಸಿರಿನ ಸದ್ದು ನಮಗೇ ಕೇಳುವ ದಿಗಿಲಿನಲಿ
ಕತ್ತಿಗೆ ಸುತ್ತಿಕೊಂಡು ಸಯನೈಡ್ ತಾಯತ
ನ್ಯೂಸ್ ಪೇಪರಿನಲಿ ಪಾಪಕರ್ಮದ ಪಾಕೀಟು ಕಟ್ಟಿ
ಕಾಯುತ್ತೇವೆ ರಾತ್ರಿ ಪಹರೆ
ಒಬ್ಬರಾದ ಮೇಲೆ ಒಬ್ಬರು
ನಿದ್ದೆಗೆ ನಿದ್ದೆಯನು ಖೋ ಕೊಡುತ್ತಾ
ಸೂರ್ಯ ಬರುವತನಕ ದಾರಿ ನೋಡುತ್ತಾ
ಮೈಗೇರಿಸಿಕೊಂಡು ಏಳುಕೊಂಡಿಯ ಕರಿಚೇಳು ಮಂತ್ರದಂತ

ಖಾಕಿ ಕಣ್ಣಿನ ತಲೆಹಿಡುಕರು
ಬೆನ್ನಿಗೆ ನಕ್ಷತ್ರ ಇಳಿಸುವ ಮುನ್ನ
ಭೂಗತರು ನಾವು ಭೂಗತರು

■ ಆರೀಫ್ ರಾ...

ಲಕ್ಷ್ಮಿನಾರಾಯಣ ಭಟ್ಟರು ಶಲ್ಯವನ್ನು ತನ್ನ ಭುಜದ ಮೇಲೆ ಹಾಕಿ, ...ಗಸನ್ನಿಟ್ಟಿದು ಚಪ್ಪಲಿ ಕಾಲಿಗೆ ಸಿಕ್ಕಿಸಿ, ಲಗುಬಗೆಯಿಂದ ಹೊರಡುತ್ತಿರುವುದನ್ನು ...ಗಿನಿಂದ ಹಜಾರಕ್ಕೆ ಬಂದಿದ್ದ ಅವರ ಶ್ರೀಮತಿಯವರು ಹುಬ್ಬೇರಿಸಿ ...ಡಿದಾಗ "ಮಮ್ಮುಂಞಿಗೆ ಯಾರೋ ಹೊಡೆದಿದ್ದಾರಂತೆ. ಸ್ವಲ್ಪ ಪೆಟ್ಟಾಗಿ ...ತೆಯಿಂದ ಮನೆಗೆ ಕರಕೊಂಡು ಬಂದಿದ್ದಾರಂತೆ. ನೋಡಿಕೊಂಡು ಬರುತ್ತೇನೆ" ...ದು ಹೇಳಿಹೊರಟರು.

ಅಂದಹಾಗೆ ಮಮ್ಮುಂಞಿಯನ್ನು ಭಟ್ಟರು ನೋಡಲು ಹೋಗಿದ್ದಾರೆಂದರೆ ...ನು ರಾಜಕೀಯ ಪುಢಾರಿಯೋ ಅಥವಾ ಊರಿನ ಪ್ರಮುಖನೋ ...! ಮಾತ್ರವಲ್ಲ, ಅವನು ಪಾಲ್ಯೋಡಿಯವನೇ ಆಗಿರಲಿಲ್ಲ! ...ಕೈದು ವರುಷಗಳ ಹಿಂದೆ ಬೆಳ್ತಂಗಡಿ ತಾಲೂಕಿನ ...ರ್ಮಾಡಿ ಹತ್ತಿರದ ಕಕ್ಕಿಂಜೆ ಎನ್ನುವ ಊರಿನ ತಂದೆತಾಯಿ ...ಲ್ಲದೆ ಅನಾಥನಾಗಿದ್ದ ಮೊಹಮ್ಮದ್‌ನನ್ನು, ಆಗ ಪಾಲ್ಯೋಡಿ ...ದ್ದಾ ಮಸೀದಿಗೆ ಹೊಸದಾಗಿ ಕೇರಳ ಕಡೆಯಿಂದ ಬಂದಿದ್ದ ಅಹ್ಮದ್ ...ಸ್ಲಿಯಾರರು ತನ್ನ ಶಿಷ್ಯರೊಂದಿಗೆ ಕರೆದುಕೊಂಡು ಬಂದಿದ್ದರು. ಬಡತನದ ...ಯಿಂದ ಧಾರ್ಮಿಕ ಶಿಕ್ಷಣ ಕಲಿಯಲು ಅವನು ಅವರ ಜತೆ ಬಂದಿದ್ದ. ...ರೆ ಊರಿನಿಂದ ಕಲಿಯಲು ಬಂದ ಮುತಅಲ್ಲಿಮರಿಗೆ (ವಿದ್ಯಾರ್ಥಿ) ...ಸೀದಿಯಲ್ಲಿ ಧಾರ್ಮಿಕ ಶಿಕ್ಷಣ ಸಿಗುವುದಲ್ಲದೆ ಮೂರು ಹೊತ್ತಿನ ಊಟ, ...ಡಿಯನ್ನು ಉಚಿತವಾಗಿ ಊರಿನವರು ಕೊಡುವುದು ಮುಂಚಿನಿಂದಲೂ ...ಮಾಕೊಂಡು ಬಂದ ರೂಢಿ. ಅದೇರೀತಿ ಪಾಲ್ಯೋಡಿಯಲ್ಲೂ ಮುತಅಲ್ಲಿಮರಿಗೆ ...ದಿ ಪಡಿಸಿದ ಒಂದು ಮನೆಯಲ್ಲಿ ಊಟದ ವ್ಯವಸ್ಥೆಯಾದರೆ, ಮೊಹಮ್ಮದ್‌ನಿಗೆ ...ತ್ತ ಮಸೀದಿಯ ಉಸ್ತಾದರಿಗೆ ನಿಯೋಜಿಸಿದ ಮನೆಯಿಂದ ಅನ್ನ ತರುವುದು ...ದು ಕೆಲಸವಾಗಿದ್ದರಿಂದ ಅವರ ಟಿಫಿನ್‌ನಲ್ಲಿ ಅವನಿಗೂ ಒಂದು ಪಾಲು ...ರುತ್ತಿತ್ತು. ಆ ಕೆಲಸಕ್ಕಾಗಿ ಅವನಿಗೆ ಪ್ರತೀ ತಿಂಗಳು ಸಂಬಳವೂ ಸಿಗುತ್ತಿತ್ತು.


...ಐದಾರು ವರುಷದ ನಂತರ ಅಹ್ಮದ್ ಮುಸ್ಲಿಯಾರರು ತನ್ನ ಶಿಷ್ಯರೊಂದಿಗೆ ...ದ ಸಾಗರಕ್ಕೆ ಹೊರಟಾಗ ಮೊಹಮ್ಮದ್ ಪಾಲ್ಯೋಡಿಯ ಜನರ ಪ್ರೀತಿಗೆ ...ನಸೋತು ಅಲ್ಲೇ ಉಳಿದು ಊರವರಿಂದ 'ಮಮ್ಮುಂಞಿ' ಅಂತ ...ಯಲ್ಪಡುತ್ತಿದ್ದ. ಇನ್ನು ಕೆಲವರು ಅವನ ಊರಿನ ಹೆಸರನ್ನೇ ಅವನಿಗೆ ...ಮಂ ಮಾಡಿದ್ದರು.

ಮಸೀದಿಯ ಮೊಯಿಲಾರ್ (ಮೌಲವಿ) ಬದಲಾದರೂ ಮಮ್ಮುಂಞಿಗೆ ...ಗಲೂ ಅನ್ನ ತರುವ ಕೆಲಸ ಕಾಯಂ ಆಗಿತ್ತು. ಬಿಡುವಿನ ಸಮಯದಲ್ಲಿ ...ಂಭೇರಿಯಾಗಿರದೆ ಊರವರ ಯಾವುದೇ ಕೆಲಸಗಳನ್ನು ಕ್ಲಪ್ತ ಸಮಯಕ್ಕೆ ...ಚ್ಚುಕಟ್ಟಾಗಿ ಮುಗಿಸುತ್ತಿದ್ದ. ಅದಕ್ಕೆ ಅವನಿಗೆ ಕೂಲಿ ಅಂತ ಸಿಗುತಿತ್ತು.

ಪಾಲ್ಯೋಡಿಯಲ್ಲಿ ಮಮ್ಮುಂಞಿ ಜಾತಿ ಮತ ಮೀರಿ ಎಲ್ಲರಿಗೂ ...ಕಾದವನು! ತೋಟದ ಕೆಲಸಕ್ಕೆ ಜನ ಸಿಗದೆ ಇರುವ ಈ ಸಂದರ್ಭದಲ್ಲಿ ...ಲಾಮ ಹಾಜಿ, ಲಕ್ಷ್ಮಿನಾರಾಯಣ ಭಟ್ಟರಂತವರಿಗೆ ಆಪತ್ಬಾಂದವನಾಗಿಬಿಟ್ಟಿದ್ದ! ...ರ ತೋಟದ ತೆಂಗಿನಗಿಡಗಳಿಗೆ ಬದು ನಿರ್ಮಿಸುವುದು, ಮಳೆಗಾಲದಲ್ಲಿ ...ದು ಹೋಗಲು ಚರಂಡಿ ಮಾಡುವುದು, ತರಕಾರಿ ತೋಟಕ್ಕೆ ಚಪ್ಪರ ...ಹುವುದು ಹೀಗೆ ಯಾವುದೇ ಕೆಲಸವನ್ನು ಸಹ ನಿರಾಯಾಸವಾಗಿ ಮಾಡುತ್ತಿದ್ದ. ...ನ್ನು ಹೊಟೇಲಿನ. ಗೋವಿಂದ ಭಟ್ಟರಿಗಂತೂ ತಮ್ಮ ಹೊಟೇಲಿಗೆ ಬಣ್ಣ ...ಯಬೇಕಾದರೆ ಅದು ಮಮ್ಮುಂಞಿಯೇ ಆಗಬೇಕು. ಹೊಟೇಲು ಬಂದ್ ಮಾಡಿದ ರಾತ್ರಿ ಹೊತ್ತಿನಲ್ಲಿ ತನ್ನ ಕೆಲಸವನ್ನು ಮುಗಿಸಿಕೊಡುತಿದ್ದ. ಖಾದರ್ ಹಾಜಿಯ ಮೀನಿನ ಫ್ಯಾಕ್ಟರಿಯಲ್ಲಿ ಗೋಣಿಚೀಲಕ್ಕೆ ಗೊಬ್ಬರವನ್ನು ತುಂಬಿಸುವುದು, ಲಾರಿಗಳಿಗೆ ಲೋಡು ಮಾಡುವುದು ಹೀಗೆ ಯಾವುದೇ ಕೆಲಸವನ್ನು ಸಹ ಮಾಡುವುದರಲ್ಲಿ ನಿಸ್ಸೀಮನಾಗಿದ್ದ!

ಅವನ ಕೈಗೆ ಹತ್ತೋ ಇಪ್ಪತ್ತೋ ಕೊಟ್ಟು ಅವರಿಗೆ ಬೇಕಾದ ಅಂಗಡಿ ಸಾಮಾನನ್ನು ತರಿಸದವರು ಆ ಊರಲ್ಲಿ ಯಾರು ಇರಲಿಲ್ಲ. ವನು ಅಷ್ಟೇ ಕೊಗ್ಗಣ್ಣ ಶೆಟ್ಟಿ, ಅಹ್ಮದ್ ಹಾಜಿ ಹೀಗೆ ಯಾರದೇ ಅಂಗಡಿಯಾದರೂ

ಕತೆ



ಅಪನಂಬಿಕೆ

ಅವನಲ್ಲಿ ಹೇಳಿದ ವಸ್ತುವನ್ನು ಅವನೇ ಸ್ವತಃ ಕಟ್ಟಿ ಅವರಿಗೆ ಮುಟ್ಟಿಸುತ್ತಿದ್ದ. ಹೀಗೆ ಆ ಊರಿನಲ್ಲಿ ಸದಾ ಬ್ಯುಸಿಯಾಗಿರುವ ಏಕೈಕ ವ್ಯಕ್ತಿಯೆಂದರೆ ಮಮ್ಮುಂಞಿ ಮಾತ್ರ! ಆದರೂ ಐದು ಹೊತ್ತಿನ ನಮಾಜ್‌ಗೆ ಕ್ಲಪ್ತ ಸಮಯಕ್ಕೆ ಮಸೀದಿಗೆ ಹೋಗಿಮುಟ್ಟುತ್ತಿದ್ದ. ಏಕೆಂದರೆ ಮಸೀದಿಯ ಉಸ್ತಾದರಿಗೆ ಊಟ-ತಿಂಡಿ ತರುವುದು ಅವನ ಕಡ್ಡಾಯ ಕೆಲಸವಾಗಿತ್ತು.

ಹೀಗೆ ಅವನ ಈ ಎಲ್ಲಾ ಗುಣ ನಡತೆಗಳನ್ನು ಮೆಚ್ಚಿ ಊರವರೇ ಮುಂದೆ ನಿಂತು, ಬಡವರಾದರೂ ಸುಸಂಸ್ಕೃತರಾದ ಹುಸೈನಾಕರ ದೊಡ್ಡ ಮಗಳನ್ನು ಇವನಿಗೆ ಮದುವೆ ಮಾಡಿಸಿ ಆ ಊರಿನಲ್ಲೇ ನೆಲೆಯೂರುವಂತೆ ಮಾಡಿದರು. 'ಊರಿನಲ್ಲಿ ತನ್ನವರು ಅಂತ ಯಾರು ಇಲ್ಲದೆ ಇರುವುದರಿಂದ ಅವನು ಅಲ್ಲೇ ಮಸೀದಿಯ ಕ್ವಾಟ್ರಸಿನ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿದ್ದ.

ಹಣೆಗೆ, ಗಲ್ಲಕ್ಕೆ ಮತ್ತು ಕೈಗೆ ಬ್ಯಾಂಡೇಜನ್ನು ಹಾಕಿದ್ದ ಮಮ್ಮುಂಞಿಗೆ ಸಮಾಧಾನದ ಒಂದೆರಡು ಮಾತುಗಳನ್ನಾಡಿ ಲಕ್ಷ್ಮಿನಾರಾಯಣ ಭಟ್ಟರು ಅಲ್ಲಿಂದ ಸೀದಾ ಗೋವಿಂದಣ್ಣನ ಹೊಟೇಲಿಗೆ ಹೋದರು.

ಭಟ್ಟರು ಅಷ್ಟು ಧಾವಂತದಿಂದ ಮಮ್ಮುಂಞಿಯನ್ನು ನೋಡಲು ಇನ್ನೂ ಒಂದು ಕಾರಣವಿತ್ತು. ಮಮ್ಮುಂಞಿ ಪಾಲ್ಯೋಡಿಯಿಂದ ಮಂಗಳೂರಿಗೆ ಹೋದದ್ದೇ ಭಟ್ಟರ ಕೆಲಸದ ಮೇಲೆ! ಅವರ ಮನೆಯ ಸೀರಿಸ ಪಂಪ್ ಹಾಳಾಗಿದ್ದರಿಂದ ಅವನು ಅದನ್ನು ಸರ್ವಿಸ್‌ಗೆ ಮಂಗಳೂರಿಗೆ ತೆಗೆದುಕೊಂಡು ಹೋಗಿದ್ದ.

ಬೆಳಗ್ಗೆ ಹತ್ತು ಗಂಟೆಯ ಶ್ರೀ ಗಣೇಶ್ ಬಸ್ಸನ್ನು ಹತ್ತಿ ಮಂಗಳೂರಿಗೆ ಹೊರಡುವಾಗ, ಹೊಟೇಲಿನ ಗೋವಿಂದಭಟ್ಟರ ತಮ್ಮ ಶಂಕರಣ್ಣನೂ ಅದೇ ಬಸ್ಸಿನಲ್ಲಿದ್ದರು. ಹಾಗೆ ಅವರಿಬ್ಬರೂ ಮಂಗಳೂರಿನಲ್ಲಿ ತಮ್ಮ ಕೆಲಸಗಳನ್ನು ಮುಗಿಸಿ ಸಂಜೆ ನಾಲ್ಕು ಮೂವತ್ತಕ್ಕೆ ಪಾಲ್ಯೋಡಿಗೆ ಹೋಗುವ ಅಮರ್ ಜ್ಯೋತಿ ಬಸ್ ಹತ್ತಿ ಹೊರಟಿದ್ದರು.

ಬಸ್ಸು ಬೈಕಂಪಾಡಿ ದಾಟುವಾಗ ಎದುರಿನಿಂದ ಬರುತ್ತಿದ್ದ ಬಸ್ಸಿನವರು ಸುರತ್ಕಲ್ ಬಳಿ ಅದೇನೋ ಗಲಾಟೆ ಇದೆಯೆಂದು ಡ್ರೈವರ್ ಹತ್ತಿರ ಹೇಳುತ್ತಿದ್ದರು. ಕುಳಾಯಿ ಮುಟ್ಟಿದಾಗ ಒಂದಷ್ಟು ಜನ ಬಸ್ಸನ್ನು ಹತ್ತಿದರು. ಸ್ವಲ್ಪ ಹೊತ್ತಿನಲ್ಲಿ ಬಸ್ಸಿನೊಳಗೆ ಗಲಾಟೆ ಪ್ರಾರಂಭವಾಯಿತು. ಬಸ್ಸಿನಲ್ಲಿದ್ದ ಒಂದು ಗುಂಪಿನ ಜನ ಅದ್ಯಾವುದೋ ಸಿಟ್ಟಿನಲ್ಲಿ ಒಬ್ಬ ಮುಸ್ಲಿಂ ಹುಡುಗನಿಗೆ ಹೊಡೆಯಲು ಪ್ರಾರಂಭಿಸಿದರು. ಅಲ್ಲೇ ಇದ್ದ ಮಮ್ಮುಂಞಿ ಅವರನ್ನು ತಡೆಯಲು ಹೋದಾಗ ಅವನಿಗೂ ಚೆನ್ನಾಗಿ ತದಕಿದರು. ಪುಣ್ಯಕ್ಕೆ ಶಂಕರಣ್ಣ ಅವರ ಕೈಯಿಂದ ಮಮ್ಮುಂಞಿಯನ್ನು ಬಚಾವ್ ಮಾಡದೇ ಇದ್ದಿದ್ದರೆ ಅವನು ಅಲ್ಲೇ ಗೊಟಕ್ ಅನ್ನುತ್ತಿದ್ದನೋ ಏನೋ?! ಮತಿಗೆಟ್ಟ ಗುಂಪು ಶಂಕರಣ್ಣನಿಗೂ ಹೊಡೆಯಲು ಮುಂದಾದಾಗ, ಯಾರೋ ಅವರ ಪರಿಚಯ ಇದ್ದವನೊಬ್ಬ "ಅವರು ಭಟ್ಟರು ಮಾರಾಯ್ರೇ" ಎಂದು ಹೇಳಿದಾಗ ಬಾಲ ಸುಟ್ಟ ಬೆಕ್ಕಿನಂತೆ ಹಿಂದೆ ಸರಿದಿದ್ದರು.

ಬಸ್ಸು ತನ್ನ ಪ್ರಯಾಣವನ್ನು ಅರ್ಧಕ್ಕೆ ಮೊಟಕುಗೊಳಿಸಿದರೂ, ಅದರಲ್ಲಿದ್ದ ಜನ ಬೇರೆ ಬಸ್ಸನ್ನು ಹತ್ತಿ ಲಗುಬಗೆಯಿಂದ ತಮ್ಮ ಊರಿನತ್ತ ಹೊರಟರು.

ಮುಖ, ಕೈ, ಹಣೆಯಿಂದ ರಕ್ತ ಸುರಿಯುತ್ತಿದ್ದ ಮಮ್ಮುಂಞಿಯನ್ನು ಸೀಟಿನಲ್ಲಿ ಕೂರಿಸಿ ಶಂಕರಣ್ಣ ನೀರು ಕುಡಿಸುತ್ತಿದ್ದಾಗ ಫಳ್ಳನೆ ಬಸ್ಸಿನ ಎದುರಿನ ಗಾಜು ಪುಡಿಪುಡಿಯಾಯಿತು. ಅದೆಲ್ಲಿಂದಲೋ ಮತ್ತೊಂದು ತಂಡ 'ಮುಸ್ಲಿಮನಿಗೆ' ಹೊಡೆದ ವಿಷಯ ತಿಳಿದು ಬಸ್ ಇದ್ದಲ್ಲಿಗೆ ಬಂದೇಬಿಟ್ಟರು.

ನೋವಿನ ಮಧ್ಯೆಯೂ ಮಮ್ಮುಂಞಿ ಶಂಕರಣ್ಣನಿಗೆ "ನೀವು ಇಲ್ಲಿಂದ ಬೇಗ ಹೊರಡಿ. ಇವರೀಗ ನಿಮಗೆ ಹೊಡೆಯಬಹುದು. ಇವರಿಗೆ ಭಟ್ರು, ಶೆಟ್ರು ಅಂತ ಏನೂ ಇಲ್ಲ" ಎಂದು ಹೇಳಿ ಅಲ್ಲಿಂದ ಕಳುಹಿಸಿದ. ಮಮ್ಮುಂಞಿಯನ್ನು ಅದ್ಯಾರೋ ಕೆಲವರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಊರಿಗೆ ತಲುಪಿಸಿದರು.

ಇತ್ತ ಶಂಕರಣ್ಣ ಯಾವುದೋ ಒಂದು ಬಸ್ಸಲ್ಲಿ ಪಾಲ್ಯೋಡಿಗೆ ಹೋಗುತ್ತಿರಬೇಕಾದರೆ ದಾರಿಯುದ್ದಕ್ಕೂ ಆತನಿಗೆ ಒಂದೇ ಯೋಚನೆ. "ಆ ತಂಡ ಬರುತ್ತಿದ್ದಾಗ ಮಮ್ಮುಂಞಿ ನನಗ್ಯಾಕೆ ಹೋಗಲು ಹೇಳಿದ್ದು? ಅವನನ್ನು ಪುಂಡರಿಂದ ಬಚಾವ್ ಮಾಡಿದ್ದೇ ನಾನು. ಮತ್ಯಾಕೆ ಅವರು ನನಗೆ ಹೊಡೆಯಬೇಕು? ಅಥವಾ ಅವನಿಗೆ ನನಗಿಂತ ಅವರೇ ಆಪ್ತರಂತೆ ಕಂಡರೇ?" ಹೀಗೆ ಯೋಚನೆಯಲ್ಲಿ ಆತನ ತಲೆಚಿಟ್ಟು ಹಿಡಿಯುವುದೊಂದೇ ಬಾಕಿ.

■ ಆಸಿಫ್ ಅಬ್ದುಲ್ಲ, ಮಂಗಳೂರು

...ಭೀಮಯಾನ: ಅಂಬೇಡ್ಕರ್ ಚಿಂತನೆಯ ಪರಿಣಾಮಕಾರಿ ಪ್ರವೇಶ

ಪುಸ್ತಕ ವಿಮರ್ಶೆ

■ ಡಾ: ಅರುಣ್ ಜೋಳದಕೂಡ್ಲಿಗಿ

ನಮ್ಮ ಕಾಲದ ಬಿಕ್ಕಟ್ಟುಗಳಿಗೆ ನಾವು ಜನಪರ ಚಿಂತಕರ ...ಂತನೆಗಳಲ್ಲಿ ಪರಿಹಾರಗಳನ್ನು ಹುಡುಕುತ್ತಿರುತ್ತೇವೆ. ಹಾಗೆ ...ಡುಕುವ ಮೂಲಕ ಮಾರ್ಕ್ಸರನ್ನೋ ಲೋಹಿಯಾರನ್ನೋ ...ಾಂಧಿಯನ್ನೋ ನಮ್ಮ ಕಾಲದ ನೋವಿಗೆ ...ದ್ದನ್ನಾಗಿಸಿಕೊಳ್ಳುತ್ತೇವೆ. ಬಹುಶಃ ಇದು ಎಲ್ಲ ಕಾಲಕ್ಕೂ ...ಡೆದುಕೊಂಡು ಬಂದ ಕೊಡುಕೊಳೆ. ಈ ಕಾಲದ ...ಮಾಜಿಕ ಅಸಮಾನತೆಯ ನೋವಿಗೆ ಮದ್ದನ್ನು ನಾವು ...ಬೇಡ್ಕರ್ ಅವರಲ್ಲಿ ನಿರಂತರವಾಗಿ ಹುಡುಕುತ್ತಾ ...ದಿದ್ದೇವೆ. ಇಂತದ್ದೇ ಕೆಲಸವನ್ನು ಡಾ. ...ಚ್.ಎಸ್.ಅನುಪಮಾ, ಬಸವರಾಜ ಸೂಳಿಬಾವಿ ಅವರು ...ಬೇಡ್ಕರ್ ಅವರ ಪ್ರಖರ ಚಿಂತನೆಗಳನ್ನು ಒಟ್ಟುಗೂಡಿಸಿ ...ನುವಾದಿಸಿ 'ಭೀಮಯಾನ'ವನ್ನು ರೂಪಿಸುವಲ್ಲಿ ...ಯತ್ನಿಸಿದ್ದಾರೆ.

ಭೀಮಯಾನ 104 ಪುಟದ ಪುಟ್ಟ ಪುಸ್ತಕ. ಭಗವಾನ್ ...ದಾಸ್ ಸಂಪಾದನೆಯ 'ದಸ್ ಸ್ಪೋಕ್ ಅಂಬೇಡ್ಕರ್' ...ತಿಯಿಂದಲೂ, ನಾನಕ್ ಚಂದ್ ರತ್ತೂ ಅವರ 'ದ ...ಸ್ಟ್ ಫ್ಯೂ ಇಯರ್ಸ್ ಆಫ್ ಅಂಬೇಡ್ಕರ್' ಕೃತಿಯಿಂದಲೂ ...ವು ಅಪರೂಪದ ಚಿಂತನೆಗಳನ್ನು ಒಟ್ಟುಗೂಡಿಸಲಾಗಿದೆ. ...ದಿಸಿ ಸಂದರ್ಶನ ಮೊದಲಾದ ಕನ್ನಡಕ್ಕೆ ಬರದಿರುವ ...ವು ಬರಹಗಳೂ ಇಲ್ಲಿವೆ. ಇಲ್ಲಿ ಮುಖ್ಯವಾಗಿ ...ಬೇಡ್ಕರ್ ಚಿಂತನೆಯ ಪ್ರಖರ ಎಳೆಗಳಿರುವ ಈ ಒಟ್ಟು ...ಬರಹಗಳು ಅವರ ಚಿಂತನಾ ಕ್ರಮವನ್ನೂ ಆಲೋಚನ ...ದರಿಯ ಖಚಿತತೆಯನ್ನೂ ಸೂಕ್ಷ್ಮವಾಗಿ ದಾಟಿಸುವಂತಿವೆ. ...ನ್ನಡಕ್ಕೆ ಬಂದಿರುವ ಅಂಬೇಡ್ಕರರ ಸಂಪುಟಗಳು ...ಸಿಪಟ್ಟಿಸಿ ಅವು ಮಾಡದ ಪರಿಣಾಮಕ್ಕಿಂತಲೂ ಇಂತಹ ...ರ ಚಿಂತನೆಯ ಆಯ್ದ ಪುಟ್ಟ ಪುಸ್ತಕಗಳೂ ...ಬೀರಬಹುದು ಎನ್ನುವುದರ ಪ್ರಾಯೋಗಿಕ ರೂಪ ಈ ...

...ಲ್ಲಿನ ಬರಹಗಳಲ್ಲಿ ಭಾರತದಂತ ದೇಶದ ಜಾತಿವಾದಿ ...ಸ್ಥಿತಿಯ ಆಳವಾದ ಚಿಂತನೆ ಕಾಣುತ್ತದೆ. ಹಾಗೆಯೆ ...ರತದ ಇಂದಿನ ಸ್ಥಿತಿಯ ಮುನ್ನೋಟಗಳು ಅಂಬೇಡ್ಕರ್ ...ತುಗಳಲ್ಲಿ ಬೀಜರೂಪಿಯಾಗಿ ಅಡಗಿರುವುದು ...ತೆಯನ್ನೂ ಹುಟ್ಟಿಸುತ್ತದೆ. ಗಾಂಧಿ ಅಂಬೇಡ್ಕರ್



ಭೀಮಯಾನ
ಡಾ. ಬಿ.ಆರ್. ಅಂಬೇಡ್ಕರ್ ಚಿಂತನೆಗಳು
ಕನ್ನಡಕ್ಕೆ: ಡಾ. ಎಚ್. ಎಸ್. ಅನುಪಮಾ, ಬಸೂ
ಪುಟ: 108. ಬೆಲೆ: 70/-. 2012
ಲಡಾಯಿ ಪ್ರಕಾಶನ, ಗದಗ

ಮಾತುಕತೆ ಮತ್ತು ಗಾಂಧಿ ಬಗೆಗಿದ್ದ ಅಂಬೇಡ್ಕರ್ ನಿಲುವುಗಳು ಭಾರತದಂತಹ ವೈರುಧ್ಯದ ದೇಶವನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಕಾರಿಯಾಗಿವೆ. ಅಂಬೇಡ್ಕರ್ 'ಗಾಂಧಿ ಒಬ್ಬ ಸಾಂಪ್ರದಾಯಸ್ಥ ಹಿಂದೂವೇ. ಅವರೆಂದೂ ಸುಧಾರಕರಾಗಿರಲಿಲ್ಲ, ಅವರಲ್ಲಿ ಚಲನಶೀಲತೆ ಇರಲಿಲ್ಲ' ಎನ್ನುತ್ತಾರೆ. ಈ ಕಟುವಾದ ಮಾತುಗಳು ಗಾಂಧಿ ಮತ್ತು ಅಂಬೇಡ್ಕರ್ ಭಾರತದ ಅಸ್ಪೃಶ್ಯತೆಯನ್ನು ಅರ್ಥಮಾಡಿಕೊಳ್ಳುವ ವ್ಯತ್ಯಾಸದಿಂದಾಗಿ ಬಂದಂತಹವು. ಅಂಬೇಡ್ಕರ್ ಗಾಂಧಿ ಕುರಿತಂತೆ ಕಟುವಾಗಿ ಎತ್ತುವ ಪ್ರಶ್ನೆಗಳ ಬೆಳಕಲ್ಲಿ ಅಣ್ಣಾ ಹಜಾರೆಯಂತವರ ಹೋರಾಟವನ್ನು ನೋಡುವ ನೋಟಕ್ರಮವನ್ನು ರೂಪಿಸಿಕೊಳ್ಳಬಹುದಾಗಿದೆ.


ಸ್ವತಃ ಅಂಬೇಡ್ಕರ್ ಇಂದು ದೈವೀಕರಣಗೊಂಡ ಈ ಹೊತ್ತು ಅವರದೇ ಮಾತುಗಳು ನಮ್ಮನ್ನು ಕಾಡುತ್ತವೆ. "ವ್ಯಕ್ತಿಯೊಬ್ಬನನ್ನು ದೈವೀಕರಿಸುವುದೆಂದರೆ ನಿಮ್ಮ ಸುರಕ್ಷೆ ಮತ್ತು ಮುಕ್ತಿಗಾಗಿ ಸಂಪೂರ್ಣ ಆತನನ್ನು ಅವಲಂಬಿಸುವುದು. ಇದು ನಿಮ್ಮನ್ನು ಕರ್ತವ್ಯ ವಿಮುಖರನ್ನಾಗಿಸುತ್ತದೆ. ಇದೇ ಭಾವ ಬೆಳೆಸಿಕೊಂಡರೆ ನಿಮ್ಮ ಬದುಕು ಪ್ರವಾಹದಲ್ಲಿ ತೇಲಿಹೋಗುವ ಮರದಂತಾಗಿ ಹೋರಾಟ ಶೂನ್ಯವಾಗುತ್ತದೆ. ಈ ಮೂರ್ತಿಪೂಜೆ, ದೈವೀಕರಣ ಮತ್ತು ಕರ್ತವ್ಯ ವಿಮುಖತೆ ಹಿಂದೂ ಸಮಾಜವನ್ನು ನಾಶಗೊಳಿಸಿರುವುದಲ್ಲದೆ ಈ ದೇಶ ಹಿಂದುಳಿಯಲು ಕಾರಣವಾಗಿದೆ" ಎನ್ನುತ್ತಾರೆ. ಈ ಮಾತುಗಳು ಅಂಬೇಡ್ಕರರ ದೈವೀಕರಣದಿಂದಲೂ ಆದ ಅಪಾಯವನ್ನು ನಮ್ಮ ಕಣ್ಣೆದುರು ಕಾಣಿಸುತ್ತದೆ. ಹಾಗಾಗಿಯೇ ಅಂಬೇಡ್ಕರ್ ಅವರಂತಹ ಮತ್ತೊಬ್ಬ ದಲಿತ ನಾಯಕನನ್ನು ಈ ದೇಶ ಕಾಣಲಿಲ್ಲ ಎನ್ನುವುದನ್ನು ನೆನೆಯಬೇಕು.

ಈ ಬರಹಗಳ ಆಯ್ಕೆಯಲ್ಲಿ ಮೊದಲೇ ಹೇಳಿದಂತೆ ವರ್ತಮಾನದ ಬಿಕ್ಕಟ್ಟುಗಳಿಗೆ ಮದ್ದನ್ನು ಹುಡುಕುವ ಗುಣವೂ ಇದೆ. ಪ್ರಜಾಪ್ರಭುತ್ವವೇ ಅಳಿವಿನಂಚಿನಲ್ಲಿರುವ ಭಯ ಆವರಿಸುತ್ತಿರುವ ಹೊತ್ತಲ್ಲಿ ಅಂಬೇಡ್ಕರ್ ಪ್ರಜಾಪ್ರಭುತ್ವ ಮತ್ತು ಸಂಸದೀಯ ಸರಕಾರದ ಬಗ್ಗೆ ಎತ್ತುವ ಪ್ರಶ್ನೆಗಳನ್ನು ನಾವೂ ಎತ್ತಬೇಕಾಗಿದೆ. ಸಂವಿಧಾನಿಕ ನೈತಿಕತೆಯ ಸಾಮಾಜಿಕ ಚೌಕಟ್ಟಿನ ಹಂದರದ ಅಗತ್ಯವಿದೆ ಎಂದು ಅಂಬೇಡ್ಕರ್ ಹೇಳುತ್ತಾರೆ. ಆದರೆ ಈಗ ಸಂವಿಧಾನಿಕ ನೈತಿಕತೆಯ ಬಗ್ಗೆಯೇ ಅನುಮಾನಗಳು ಮೂಡುವಂತಾಗಿದೆ. ಅಂತೆಯೇ ಪ್ರಜಾಪ್ರಭುತ್ವವು ಸಾರ್ವಜನಿಕ ಅಂತಸ್ಸಾಕ್ಷಿಯನ್ನು ಆಶ್ರಯಿಸಿರಬೇಕೆಂದು ಹೇಳುತ್ತಾರೆ. ಆದರೆ ಇಂದು ಸಾರ್ವಜನಿಕ ಅಂತಸ್ಸಾಕ್ಷಿ ಕ್ಷೀಣಿಸುವ ಹಂತದಲ್ಲಿದೆ.

ಕರ್ನಾಟಕದಲ್ಲಿ ಬೌದ್ಧಧರ್ಮವನ್ನು ಅರಸಿ ಹೋಗುವವರ ಸಂಖ್ಯೆ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ಅಂಬೇಡ್ಕರ್ ಬೌದ್ಧ ಧರ್ಮದ ಬಗ್ಗೆ ತಳೆಯುವ ನಿಲುವುಗಳು ಹೆಚ್ಚು ಪ್ರಸ್ತುತವಾಗಿದೆ. ಅಂಬೇಡ್ಕರ್ ಬೌದ್ಧಧರ್ಮದ ಮತೀಯ ಗುಣವನ್ನೂ ಕಟುವಾಗಿ ವಿರೋಧಿಸುತ್ತಾರೆ. ಅಂತೆಯೇ ಆ ಧರ್ಮವನ್ನೂ ಪರೀಕ್ಷಿಸಿ ಒಪ್ಪಿಕೊಳ್ಳುವ ಗುಣವೂ ಕಾಣುತ್ತದೆ. ಚುನಾವಣೆ ಹೊಂದಾಣಿಕೆ ಎನ್ನುವುದು ತತ್ವಾದರ್ಶಗಳಿಲ್ಲದ ಸ್ವಾರ್ಥರಾಜಕಾರಣ, ಭ್ರಷ್ಟತೆಯ ಪರಮಾವಧಿ ತಲುಪಿರುವ ಈ ಹೊತ್ತು ಅಂಬೇಡ್ಕರ್ ಹೇಳುವ ಚುನಾವಣಾ ಹೊಂದಾಣಿಕೆಯ ತತ್ವಾದರ್ಶ ಪ್ರಜಾಪ್ರಭುತ್ವದ ಘನತೆಯನ್ನು ತೋರಿಸುತ್ತದೆ. ಅಂಬೇಡ್ಕರ್ ಅವರು 'ನನ್ನ ಉತ್ತರಾಧಿಕಾರಿಗಳು ನನ್ನ ಹೋರಾಟದ ಕ್ಯಾರವಾನನ್ನು ಮುಂದೆ ತೆಗೆದುಕೊಂಡು ಹೋಗಲು ಸಾಧ್ಯವಾಗದಿದ್ದರೂ ಅಡ್ಡಿಯಿಲ್ಲ, ಅದನ್ನು ಇದ್ದಲ್ಲಿಯೇ ನಿಲ್ಲಿಸಬೇಕೇ ಹೊರತು ಹಿಂದೆಳೆಯಬಾರದು. ಇದು ನನ್ನ ಕೊನೆಯ ಪ್ರಾರ್ಥನೆ' ಎನ್ನುತ್ತಾರೆ. ಇಲ್ಲಿ ಶೋಷಿತ ಜನರ ಬಗೆಗಿದ್ದ ಅಂಬೇಡ್ಕರರ ಅತೀವ ಕಾಳಜಿ ಮತ್ತು ತಾಯ್ತನದ ಆಳ ಅರಿವಿಗೆ ಬರುತ್ತದೆ.

ಅಂಬೇಡ್ಕರ್ ಅವರನ್ನು ಪ್ರವೇಶಿಸುವ ಮೊದಲ ಓದುಗರಿಗೆ ಈ ಕೃತಿ ತುಂಬಾ ಪರಿಣಾಮಕಾರಿಯಾಗಿ ಅವರನ್ನು ದಾಟಿಸುತ್ತದೆ. ಆ ಕಾರಣಕ್ಕಾಗಿ ಈ ಪುಸ್ತಕ ಮಹತ್ವವನ್ನು ಪಡೆದಿದೆ. ಜನಪರ ಚಳವಳಿಗೆ ಬೇಕಾಗುವ ಪ್ರಗತಿಪರ ಆಲೋಚನೆಗಳನ್ನು ಪ್ರಕಟಿಸುತ್ತಾ ಬಂದಿರುವ ಲಡಾಯಿ ಪ್ರಕಾಶನ ಈ ಕೃತಿಯನ್ನು ಪ್ರಕಟಿಸಿದೆ. ಇದೊಂದು ಒಳ್ಳೆಯ ಕೆಲಸ. ಅನುವಾದಿಸಿ ಸಂಪಾದಿಸಿರುವ ಎಚ್.ಎಸ್.ಅನುಪಮಾ ಮತ್ತು ಬಸೂ ಅವರದು ಉತ್ತಮ ಪ್ರಯತ್ನ.

ಹೆಸರಲ್ಲೇನೈತೆ! ಕೆಲ್ಸ ಮಾಡ್ಕೊಂಡಿರಬೇಕು



"ಹೊರಟ್ರಿ ಮಿಸ್ಟರ್ ಠಾಕ್ರೆ. ನೀವು, ನಿಮ್ಮ ದ್ವೇಷ, ನಿಮ್ಮ ಹಿಂಸೆಯೇ ಸ್ವಾಮಿ ಎಂಟು ವರ್ಷದ ಬಾಲಕನಾಗಿದ್ದಾಗಿನಿಂದ ನನಗೆ ಪ್ರೀತಿಯ ಅರ್ಥ ಮತ್ತು ಬೆಲೆ ಏನು ಅಂತ ಕಲಿಸಿದ್ದು" ಅಂತ ಈ ಯುವಕ ಬಾಳ ಠಾಕ್ರೆ ಸಾವಿನ ಬಗ್ಗೆ ಟ್ವೀಟ್ ಮಾಡ್ತಾನೆ. ಲೆಕ್ಕದಲ್ಲಿ, ಮಹಾನಗರಗಳ ಇಂಗ್ಲಿಷ್ ಪತ್ರಿಕೋದ್ಯಮದ ವಲಯದಲ್ಲಿ ಈತ ಒಂಚೂರು ಖ್ಯಾತನೇ. ಇನ್ನು 28 ವರ್ಷದವನಾಗಿರುವ ಈತನನ್ನು ಒಂದು ಸಂದರ್ಶನದಲ್ಲಿ "ಹೊಸಬರಾದ ಪತ್ರಕರ್ತರಿಗೆ ನಿನ್ನ ಬೋಧೆ ಏನು?" ಅಂತ ಕೇಳಿದ್ದಕ್ಕೆ ಈತ "ಅಂಬೇಡ್ಕರರ ಕೃತಿಗಳನ್ನು ಓದಿ. ಹಳೆ ಪುಸ್ತಕದಂಗಡಿಗಳಿಗೆ ಹೋಗಿ, ಶಾಲೆಯಲ್ಲಿ ಕಲಿತಿದ್ದೆಲ್ಲ ಬೋಳಿಮಗಂದು ಅಳಿಸಿ ಹೋಗಿಬಿಡ್ಬೇಕು, ಅಂಥ ಪುಸ್ತಕಗಳನ್ನ ಹುಡುಕಿ ಓದಿ." ಇಷ್ಟು ಧಿಮಾಕಿಂದ ಉತ್ತರ ಕೊಡೊ ಪಡ್ಡೆ ಯಾರಿದು ಅಂತ ಅಚ್ಚರಿಪಡ್ತೀರ, ನಂಗೊತ್ತು. ಈ ಪಡ್ಡೆ, ಮುಂಬೈನ ಅನುಕೂಲಸ್ಥ ಕುಟುಂಬದೋನು. ತಂದೆ-ತಾತ ಎಲ್ಲ ಐ.ಎ.ಎಸ್. ಅಧಿಕಾರಿಗಳು. ಪದವಿ ಶಿಕ್ಷಣದವರೆಗೂ ಮುಂಬೈಯಲ್ಲಿ ಅಡ್ಡಾಡ್ಕೊಂಡು ಇದ್ದ ಹೈದನಿಗೆ, ದರಿದ್ರ ಮುಂಬೈ ಬಿಟ್ಟು ದೇಶ ಸುತ್ತಿ ಕಲಿಬೇಕು ಅನಿಸ್ತು. ಕೈಯಲ್ಲಿ ಒಂದು ಸಾಧಾರಣ ಕ್ಯಾಮರ ಮತ್ತು ಒಂದು ಸಾವಿರ ರೂಪಾಯಿ ಇತ್ತು. ಗುಜರಾತಿಗೆ ಹೋಗ್ಲ ಮಧ್ಯಪ್ರದೇಶಕ್ಕೆ ಹೋಗ್ಲ ಅಂತ ಕಾಸಿನ ನಾಣ್ಯ ಎಸೆದು ಕಣಿ ಕೇಳ್ದ. ಚಿತ್ತು ಬಿದ್ದು ಮಧ್ಯಪ್ರದೇಶಕ್ಕೆ ಹೋದ.

ಮಧ್ಯಪ್ರದೇಶ, ಛತೀಸಗಡ, ಒರಿಸ್ಸಾಗಳ ಆದಿವಾಸಿಗಳ ಬದುಕನ್ನು ಕಂಡವನಿಗೆ "ಅನುಕೂಲಸ್ಥರ ಮನೇಲಿ ಊಟಕ್ಕೆ ಕೂತಾಗ ಹರಟೋ 'ಅಭಿವೃದ್ಧಿ' ಅನ್ನೋದು ಎಂಥ ಹಾದ್ರಕುಟ್ಟಿದ್ದು ಅಂತ ಗೊತ್ತಾಗೋಯ್ತು ಕಣ್ರೀ!" ಅಂತ ಗೊತ್ತಾಗೋಯ್ತಂತೆ. ಆ ಹೊತ್ತಿಗೆ, ಕೆಲವೇ ಕೆಲವು ಪತ್ರಿಕೆಗಳ ತಲೆಕೆಟ್ಟ ಪತ್ರಕರ್ತರು ಮಾತ್ರ ಪ್ರಭುತ್ವ ಮತ್ತು ನಕ್ಸಲ್ವಾದಿ ಗೆರಿಲ್ಲಾ ಚಳವಳಿಯ ಕದನ ಭೂಮಿಯಾದ ಭಾಗದಲ್ಲಿ ಠಿಕಾಣಿ ಹೂಡಿ ವರದಿ ಮಾಡುತ್ತಿದ್ದರು. ತಾನೂ ಇದ್ದ ಈ ಪುಟ್ಟ ಪತ್ರಕರ್ತರ ಗುಂಪನ್ನು ಇವನು 'ಹಡಬೆಗಳ ಕೂಟ' ಅನ್ನೋನು. ಅಲ್ಲಿನ ವಾಸ್ತವವನ್ನು ವರದಿ ಮಾಡೋದು ಅಂದ್ರೆ, ಭಾರತದ ಪ್ರಭುತ್ವದ ಹಲ್ಲು-ಉಗುರುಗಳಾದ ಕಾನೂನು-ಸಂವಿಧಾನ-ನ್ಯಾಯ ಅನ್ನೋದೆಲ್ಲ ಬದ್ನೆಕಾಯಿ ಅಂತ, ಕಂಡವರನ್ನು ಗುಂಡಿಟ್ಟು ಕೊಲ್ಲುವ ಸಶಸ್ತ್ರ ಪೊಲಿಸುಪಡೆ ಮತ್ತು ರಾಜ್ಯದ ವಿಶೇಷ ಪೊಲೀಸರ ಕೆಂಗಣ್ಣಿಗೆ ಗುರಿಯಾಗುವುದು ಅಂತ ಗೊತ್ತಿದ್ದೂ ಇವನು ವರದಿ ಮಾಡುತ್ತಾ ಹೋದ. ಪೊಲೀಸರು ಅನೇಕ ಸಾರಿ ಮುಖ-ಮೋರೆ ನೋಡದೇ ಚಚ್ಚಿದರು. 2009-11 ರವರೆಗೆ ಇವನು 'ನ್ಯು ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ವರದಿಗಾರನಾಗಿದ್ದ. ಆ ಹೊತ್ತಲ್ಲಿ 'ಹುಜೂರ್ ಚಿದಂಬರಮ್ ಸಾಹೇಬರ ಆಪರೇಷನ್ ಗ್ರೀನ್ ಹಂಟ್' ಕಾರ್ಯಕ್ರಮ ನಡೆದಿತ್ತು. ಆದಿವಾಸಿ ಹಳ್ಳಿಗಳನ್ನು ಸುಡೋದು, ಹೆಂಗಸರ ಮೇಲೆ ಅತ್ಯಾಚಾರ ನಡೆಯೋದು, ಜನರನ್ನ ಗುಂಡಿಟ್ಟು ಕೊಲ್ಲೋದು ದೈನಂದಿನ ಸಹಜ ವ್ಯವಹಾರದ ಹಾಗೆ ನಡೆಯುತ್ತಿದ್ದದ್ದನ್ನು 'ನ್ಯು ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ವರದಿ ಮಾಡತೊಡಗಿದ. ಇವನ ವರದಿಗಳಿಂದ ಉರಿದುಹೋದ ಛತೀಸಗಡದ ಎಸ್.ಪಿ.ಯೊಬ್ಬ ಇವನಿಗೆ ಫೋನು ಮಾಡಿ "ಏನಲೇ ಬಾಂಚೋದ್! ನಕ್ರ ಮಾಡ್ತಿಯ! ಕೇಸಲ್ಲಿ ಫಿಟ್ ಮಾಡಿ, ಎಳ್ಕಬಂದು, ಕಟಿಂಗ್ ಪ್ಲೇಯರಿಂದ ಒಂದೊಂದೇ ಉಗುರು ಕಿತ್ತೀನಿ ನೋಡು ಮಗ! ಆಗ ನಿನ್ನ ನಕ್ರ ತೋರ್ಸು ನೋಡಾಣ" ಅಂತ ಧಮಕಿ ಹಾಕಿದ. ಈ ಪಂಟರ್ ಅದನ್ನೂ ಪದ ಪದ ಬಿಡದೆ 'ನ್ಯು ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ವರದಿ ಮಾಡಿದ.

ಪ್ರಭು ಚಾವ್ಲ ಅನ್ನೋ ಚೆಡ್ಡಿಪ್ರಿಯ 'ನ್ಯು ಇಂಡಿಯನ್ ಎಕ್ಸ್‌ಪ್ರೆಸ್'ನ ಸಂಪಾದಕನಾದ ಮೇಲೆ ಇವನ ಕೈಕಟ್ಟಿತು. ಕೆಲಸ ಬಿಟ್ಟ. ಸ್ವತಂತ್ರ ಪತ್ರಕರ್ತನಾಗಿ ಅಲ್ಲಿ ಇಲ್ಲಿ ಬರೀತ ಹೋದ. ಈಗ 'ಡಿ.ಎನ್.ಎ.' ಪತ್ರಿಕೆಗೆ ನಿಯೋಜಿತ ವಿಶೇಷ ವರದಿಗಾರನಾಗಿ ಬರೀತ ಇದ್ದಾನೆ. ಇವನದೇ ಆದ 'ಮೂನ್ ಚೇಸಿಂಗ್' ಅನ್ನೋ ಬ್ಲಾಗ್ ಇದೆ (www. moonchasing. wordpress.com). ತಾನು ತೆಗೆದ ಅತ್ಯುತ್ತಮ ಫೋಟೊಗಳ ಸಹಿತ 'ಅಭಿವೃದ್ಧಿ'ಯ ಹೆಸರಿನಲ್ಲಿ, ಪ್ರಭುತ್ವದ ಮೇಲುಸ್ತುವಾರಿಯಲ್ಲಿ, ಉಳ್ಳವರು ಊರೂರುಗಳನ್ನೇ ಒಕ್ಕಲೆಬ್ಬಿಸುತ್ತಿರುವುದರ ಬಗ್ಗೆ ವರದಿ ಮಾಡುತ್ತಿದ್ದಾನೆ. 'ಕಾಣೆಯಾದ ಊರುಗಳು' ಎಂಬ ಸರಣಿಯಲ್ಲಿ ಈತ ಈವರೆಗೆ ಒಕ್ಕಲೆಬ್ಬಿಸಲಾದ 12 ವಿದ್ಯಮಾನಗಳ ಕಥನ ಬರೆದಿದ್ದಾನೆ. ಈತ 28 ವರ್ಷದ ಜಾವೇದ್ ಇಕ್ಬಾಲ್.

ಜಾವೇದನ ವರದಿಗಾರಿಕೆ ಪ್ರತಿಭೆಯ ಝಲಕ್ ಕಾಣಿಸಲು 'ಪ್ರೇಂನಗರ್: ಎ ಮಾಲ್ ಟು ಹ್ಯುಮನ್ ಸಫರಿಂಗ್' (ಮನುಷ್ಯರ ಕಡುಕಷ್ಟಕ್ಕೊಂದು ಮಾಲ್) ಎಂಬ ನವೆಂಬರ್ 14 ರ ಅವನ ಬ್ಲಾಗ್ ವರದಿಯ ಆಯ್ದ ಕೆಲ ತುಣುಕುಗಳನ್ನು ಕೊಡುತ್ತಿದ್ದೇನೆ:


ಜಾವೇದ್ ಇಕ್ಬಾಲ್

(ಮುಂಬೈಯ) ಗೋರೆಗಾಂ ವಿನಲ್ಲಿರುವ ಇನ್ ಆರ್ಬಿಟ್ ಮಾಲ್ ಹಾಗು ಹೈಪರ್ ಸಿಟಿ ಪಕ್ಕದಲ್ಲಿರೊ ಪ್ರೇಂನಗರ್ ಎಂಬ 'ಅನಧಿಕೃತ' ವಸತಿಪ್ರದೇಶವನ್ನು ನೆಲಸಮ ಮಾಡುವ ಕೆಲಸ ಇದೇ ನವೆಂಬರ್ 6 ರಂದು ಶುರುವಿಟ್ಟುಕೊಂಡಿದೆ. ಹತ್ತು ವರ್ಷಗಳಿಂದ ಇಲ್ಲಿರುವ ಸಾವಿರಾರು ಮನೆಗಳನ್ನು ನೋಟಿಸು ಕೊಡದೆ, ಜನ ತಮ್ಮ ಮನೆಯ ವಸ್ತುಗಳನ್ನು ಸಾಗಿಸಲು ಅವಕಾಶ ಸಹ ಕೊಡದೆ ನೆಲಸಮ ಮಾಡಲಾಗುತ್ತಿದೆ. ಮನೆಗಳಲ್ಲೇ ಹೊಟ್ಟೆಪಾಡಿನ ವ್ಯವಹಾರ ನಡೆಸುತ್ತಿದ್ದವರು ಅಪಾರ ನಷ್ಟಕ್ಕೆ ತುತ್ತಾಗಿದ್ದಾರೆ, ಶಾಲೆಗೆ ಹೋಗುವ ಮಕ್ಕಳು ತಮ್ಮ ಪುಸ್ತಕ, ಮಾರ್ಕ್ಸ್ ಕಾರ್ಡು, ಸರ್ಟಿಫಿಕೇಟುಗಳನ್ನು ಕಳಕೊಂಡಿವೆ. ವಯಸ್ಸಾದ ಹೆಂಗಸರಿಗೆ ಹೊಡೆದುಬಡೆದು ಮಾಡಿದ್ದಾರೆ, ಮಕ್ಕಳನ್ನು ನೂಕಾಡಿದ್ದಾರೆ. ಪ್ರತ್ಯಕ್ಷದರ್ಶಿಗಳು ನೀಡಿದ ಮಾಹಿತಿಯಲ್ಲಿ ನಡೆದ ಪಾಶವೀಕೃತ್ಯದ ಚಿತ್ರ ಬಿಚ್ಚಿಕೊಳ್ಳುತ್ತದೆ; ಹೆಣ್ಣುಮಕ್ಕಳ ದೇಹದ ಮೇಲಿನ ಹಸಿ ಗಾಯಗಳು ನಡೆದ ಹಿಂಸೆಯನ್ನು ನಿಚ್ಚಳವಾಗಿ ತೋರಿಸುತ್ತವೆ.

ರಾಜಕುಮಾರಿ ಕೋರಿಯ ಮಕ್ಕಳು ತಮ್ಮ ಶಾಲಾಪುಸ್ತಕ ಮತ್ತು ಸಮವಸ್ತ್ರಗಳನ್ನು ಕಳೆದುಕೊಂಡಿವೆ. ತನ್ನ ಎಲೆಕ್ಟ್ರೋಪ್ಲೇಟಿಂಗ್ ಕಸುಬಿನ 15 ಲಕ್ಷ ರೂಪಾಯಿಯಷ್ಟು ಕಚ್ಚಾ ಮಾಲು ನಷ್ಟವಾಗಿದೆ ಎನ್ನೋದು ಲೋಕೇಶ್ ಜೈನನ ಅಂದಾಜು. ಎಲೆಕ್ಟ್ರಿಷಿಯನ್ ಪ್ರಕಾಶ್ ಗೊಂಡ್ ತನ್ನ ಕಸುಬಿಗೆ ಬೇಕಾಗಿದ್ದ ಸಕಲ ಸಲಕರಣೆಗಳನ್ನು ಕಳಕೊಂಡಿದ್ದಾನೆ, ಉಳಿಸಿಕೊಳ್ಳಲು ಪ್ರಯತ್ನಿಸಿದಾಗ ಪೊಲೀಸರು ಥಳಿಸಿದ್ದಾರೆ. ವಿವೇಕ್ ರಮೇಶ್ ಪೊವಾರ್ 15 ವರ್ಷಗಳಿಂದ ನಡೆಸುತ್ತಿದ್ದ ಅಂಗಡಿ ನಾಶವಾಗಿದೆ. ಎಂಟು ತಿಂಗಳ ಬಸುರಿ ನಜ್ರೀನ್ ಅಹ್ಮದ್ ಅನ್ನಾರಿಗೆ ತನ್ನ ಮಕ್ಕಳನ್ನು ಚಳಿಯಿಂದ ಕಾಪಾಡೋದು ಕಷ್ಟವಾಗಿದೆ. 'ಮನೆ ಕಟ್ಕೋಳಿ ಅಂತಂದ ಪೊಲೀಸರೇ ಇವತ್ತು ಮನೆ ಒಡೆದಾಕಿ ಅಂತಾರೆ' ಅನ್ನೋದು ಹೆಣ್ಣುಮಗಳೊಬ್ಬಳ ದೂರು.

ಉಸ್ತುವಾರಿಯಲ್ಲಿದ್ದ ಒಬ್ಬ 'ಮಹಾರಾಷ್ಟ್ರ ನಿವಾಸ ಅಭಿವೃದ್ಧಿ ನಿಗಮ' (MHADA) ಅಧಿಕಾರಿಯೊಬ್ಬ 'ಅಯ್ಯೋ ಇವರೆಲ್ಲ ಅನಧಿಕೃತವಾಗಿ ಇಲ್ಲಿದ್ದೋರು. ನೋಟಿಸು ಯಾಕ್ ಕೊಡಬೇಕು' ಅಂತಾನೆ. 'ನೀವಿಲ್ಲಿರ್ಬೋದು. ಏನು ತೊಂದ್ರೆ ಆಗಕ್ಕಿಲ್ಲ ಅಂತ ಈ ಜನವೇ ಹೇಳ್ತಿದ್ರು. ಈಗ ನೋಡಿ ಹೆಂಗಾಡ್ತವೆ. ಮುಂಬೈಯಲ್ಲಿ ಹಲವಾರು ಇಂಥ ಪ್ರದೇಶಗಳನ್ನ ನೆಲಸಮ ಮಾಡೋಕ್ ಮುಂಚೆ ನೋಟಿಸು ಕೊಟ್ಟವ್ರೆ' ಅಂತ ಪ್ರೇಂನಗರದ ಜನ ಹೇಳ್ತಾರೆ. ಐದು ದಿನಗಳ ನಂತರ ಪ್ರೇಂನಗರ ಮನೆವಾಳ್ತೆ ವ್ಯಾಪಾರ ವ್ಯವಹಾರದ ಸಲಕರಣೆಗಳು ತುಂಡುತುಂಡಾಗಿ ರಾಶಿಯಾಗ್ ಬಿದ್ದಿರೊ ಜಾಗವಾಗೋಯ್ತು. ಅಡುಗೆ ಮನೆಗಳ ಬೆಂಕಿ ಇನ್ನು ಉರೀತಾನೆ ಇತ್ತು.

MHADA ಅಧಿಕಾರಿ ಪ್ರಕಾರ ಈ ಜಾಗದಲ್ಲಿ ಜನಸಾಮಾನ್ಯರಿಗಾಗಿ ವಸತಿ ಸಮುಚ್ಚಯ ನಿರ್ಮಿಸ್ತಾರಂತೆ. 'ಹೆಂಗೆ ಹಂಚುತ್ತೀರ? ಲಾಟ್ರಿ ಹಾಕಿನಾ?' 'ಹೌದು ಕಣ್ರಿ.' 'ಈ ಮನೆ ಕಳ್ಕೊಂಡ ಜನರಲ್ಲಿ ಯಾರಾದ್ರು ಆ ಲಾಟ್ರಿಯಲ್ಲಿ ಗೆದ್ರೆ ಅವ್ರಿಗೂ ಸಿಗುತ್ತ?' 'ಹೌದು! ಖಂಡಿತ ಸಿಗುತ್ತೆ' ಅಂತ ಆ ಅಧಿಕಾರಿ ಸುಖವಾಗಿ ನಗ್ತಾನೆ. ಈಗಲ್ಲಿ ಮನೆ ಕಳ್ಕೊಂಡ ಜನ ಹಾಕ್ಕೊಂಡಿದ್ದ ಟೆಂಟುಗಳನ್ನೂ ನೆಲಸಮ ಮಾಡಿ 'ಅಕ್ರಮ ಪ್ರವೇಶ ನಿಷಿದ್ಧ' ಅಂತ ಬೋರ್ಡ್ ಹಾಕಿದ್ದಾರೆ.

'ಘರ್ ಬಚಾವ್ರೋ ಘರ್ ಬನಾವ್ರೋ ಆಂದೋಲನದ' ಹಿರಿಯ ಚಳವಳಿಗಾರ ಜಮೀಲ್ ಅಖ್ತಾರ್ ಷೇಕ್ ಪ್ರೇಂನಗರದಲ್ಲಿ ನಿರ್ವಸಿತರಾಗಿರೋರನ್ನ ಉದ್ದೇಶಿಸಿ ಮಾತಾಡ್ತ ಇದ್ದಾರೆ: 'ನಾವು ಪುಗಸಟ್ಟೆ ಮನೆ ಕೇಳ್ತ ಇದ್ದೇವ! ನಾವು ಸುಲಭ ಬೆಲೆಯಲ್ಲಿ ಮನೆ ಕೊಡಿ ಅಂತ ಕೇಳ್ತಾ ಇದ್ದೀವಿ. ಈ ಆರ್ಬಿಟ್ ಮಾಲ್‌ಅನ್ನು ಕಟ್ಟಿರೋ ಜಾಗ ತ್ಯಾಜ್ಯ ನಿರ್ವಹಣೆಗಾಗಿ ಉಪಯೋಗಿಸುವ ಜಾಗವಾಗಿತ್ತು, ಇನ್ಫಿನಿಟಿ ಮಾಲ್ ಇರೋ ಜಾಗದಲ್ಲಿ ಆಟದ ಮೈದಾನ ಇತ್ತು, ... ಸರಕಾರಿ ಜಾಗ. ಸರಕಾರ ಎಲ್ಲಾ ನಿಯಮಗಳನ್ನ ಗಾಳಿಗೆ ತೂರಿ ಉಳ್ಳೋ... ಕೊಟ್ಟಿದೆ. ಅಲ್ಲೀ ಸರಕಾರ ಪೊವೈನಲ್ಲಿ ಹೀರಾನಂದಾನಿಗಳಿಗೆ ಪ್ರತಿ ಎಕ... ನಲವತ್ತು ಪೈಸೆ ಕ್ರಯದಲ್ಲಿ ಜಾಗ ಕೊಟ್ಟದೆ! ನಾವು ಎಕ್ರೆಗೆ ನಲವ... ರೂಪಾಯಿ ಕೊಡೋಕೆ ತಯಾರಿದ್ದೇವೆ, ನಮ್ಗೂ ಕೊಡ್ರಪ್ಪ!' ಜನ ಅವರ ... ಮಾತಿಗೂ ಚಪ್ಪಾಳೆ ತಟ್ಟಿ, ವ್ಯಂಗ್ಯಕ್ಕೆ ಬಿದ್ದು ಬಿದ್ದು ನಗ... ಕೆಲವ್ರಿಗೆ ಏನಪ್ಪ ಯಾಕ್ ಹಿಂಗೆ ಅಂತ ಅರ್ಥ ಆಗ್ತ...

ವಿನೋದ್ ವಿಶ್ವಕರ್ಮ ಮುಂಬೈಯಲ್ಲೇ ಹು... ಬೆಳ್ದೋನು. ಮುಂಬೈ ರೀಲು ರಂಗೀಲ ದುನಿಯ... ಕಾರ್ಮಿಕ. ಇವನಂಥ ಅದೃಶ್ಯ ಕಾರ್ಮಿಕರಿಗೆ ಒಂ... ಸೂರಿನ ಕನಸು ತೋರಿದ್ದ ಮಿಥುನ್ ಚಕ್ರವ... ಅಧ್ಯಕ್ಷನಾಗಿರೊ 'ಫಿಲ್ಮ್ ಸ್ಟುಡಿಯೊ ಸೆಟ್ಟಿಂಗ್ ಮಜ್ದೂ... ಸಂಘ'ದ ನೋಂದಾಯಿತ ಸದಸ್ಯ. ಬದುಕಿನ ಬಹುಪಾ... ಬಾಡಿಗೆ ಮನೇಲಿ ಜೀವನ ಕಳೆದಿದ್ದ ವಿನೋದ್, ತನ್ನ... ಅಂತ ಒಂದು ಖೋಲಿ ಕಟ್ಟಿಕೊಳ್ಳಲು ಅಧಿಕಾರದಲ್ಲಿ... ಮಂದಿಗೆ ಲಕ್ಷಾಂತರ ರೂಪಾಯಿ ಕೊಟ್ಟಿದ್ದ. ಈಗ ಅ... ಅವನ್ನ ಬೀದಿಗೆಸೆದವ್ರೆ.

'ಶಿವಸೇನೆಯ ಲೋಚನ ಪವಾರ್ ನವ... ಏರಿಯಾದಿಂದ ಮಹಾನಗರಪಾಲಿಕೆ ಚುನಾಯಿ... ರಾಗಿರೋರು. ತಾನೂ ಕೊಳಗೇರಿಯಿಂದ ಬಂದೋ... ಸಣ್ಣ ಚಾ ಅಂಗಡಿ ಇಟ್ಕೊಂಡು ಜೀವನ ಹೊರೆಯೋ... ಬಡವರ ಕರುಳ ದುಃಖ ಏನು ಅಂತ ನಂಗೆ ಚೆನ್ನಾಗೊ... ಕಣ್ರಿ. ನಂಗ್ ಓಟಾಕಿ, ನೀವು ಚೆಂದಾಗಿರೋ... ನೋಡ್ಕೋತೀನಿ ಅಂತ ಅಂದಿದ್ಲು ಸಾ ಆವಮ್ಮ. ... ಬಿಡಪ್ಪ ಹೋದ್ ಸಾರಿ ಗೆಲಿಸಿದ ನನ್ಮಗ ಏನೂ ಮಾಡ್ಲಿ... ಈ ವಮ್ಮ ಏನಾದ್ರೂ ಮಾಡ್ಬೋದು ಅಂತ ಓಟ... ಗೆಲಿಸಿದೀವಿ ಸಾಮಿ. ನೋಡಿ ನೆಲಸಮ ಆಗ್ತಿದ್ರು ಆಯವ... ಈ ಕಡೆ ಮುಖ ಹಾಕಿಲ್ಲ' ಅಂತಾನೆ ವಿನೋದ್. 44 ವಯಸ್ಸಿನ ಲೋಚ... ಪವಾರ್ ಸಣ್ಣ ಚಾ ದುಖಾನ್ ಇಟ್ಕೊಂಡಿರೋದು ಹೌದು. 22 ವರ್ಷಗಳಿ... ಆಕೆ ಶಿವಸೇನೆ ಕಾರ್ಯಕರ್ತೆ. 'ಅಮ್ಮಂಗೆ ಹುಷಾರಿಲ್ಲ, ದೀಪಾವಳಿ ಹ... ಬೇರೆ ಇತ್ತಲ್ಲ, ಹಾಂಗಾಗಿ ಆ ಕಡೆ ಹೋಗೋಕ್ಕಾಗಿಲ್ಲ, ಹೌದ್ರಿ, ಬಡವರ... ಸಹಾಯ ಮಾಡೋಕಂತಾನೆ ನಾನು ಕಾರ್ಪೋರೇಟರ್ ಆದದ್ದು. ಆದ್ರೆ, ... ಆರ್ಡರ್ ಕೊಟ್ಟಿರೋದು ಕಲೆಕ್ಟರ್, ನಾನೇನು ಮಾಡೋಕಾಯ್ತದೆ. ಮೇಲಾ... ಅದು ಅನಧಿಕೃತವಾಗಿ ಜನ ವಾಸ ಮಾಡ್ಕೊಂಡಿರೋ ಜಾಗ. ಇಂಥ ಅನಧಿ... ವಿಷಯಗಳಲ್ಲಿ ನಂಗೆ ಮೂಗು ತೂರ್ಸೋಕಾಗಲ್ಲ ಕಣ್ರಿ' ಅಂತಾರೆ ಲೋಚ...

ತಮ್ಮ ಈ ದುರಾದೃಷ್ಟಕ್ಕೆ ಗೋರೆಗಾಂವ್ ಠಾಣೆಯ ಪೊಲೀಸ್ ಅಧಿಕಾ... ಅರುಣ್ ಜಾಧವ್ ಕಾರಣ ಅಂತ ಪ್ರೇಂನಗರದ ಜನ ಶಾಪ ಹಾಕ್ತಾರೆ. ಮ... ಕಟ್ಕೊಳ್ಳಿ, ನಾನು ರಕ್ಷಣೆ ಕೊಡ್ತಿನಿ ಅಂತ ಆ ಮನುಷ್ಯ ಸಖತ್ ಹ... ಎತ್ತಿದಾನೆ ಅಂತ ಜನ ದೂರ್ತಾರೆ. ಜಾಧವ್‌ನನ್ನು 'ನಿಜವಾ ಸಾರ್' ಅಂ... ಕೇಳಿದ್ರೆ 'ರೀ ಅವ್ರುನ್ನೇ ಕೇಳ್ಕೋ ಹೋಗ್ರಿರೀ..' ಅಂತ ಗರಂ ಆಗ್ತಾರೆ.

ಜಾವೇದ್ ಇಡೀ ವಿದ್ಯಮಾನದ ಬಗ್ಗೆ ತನ್ನ ವ್ಯಾಖ್ಯಾನ ಏನು ಅಂ... ವರದಿಯಲ್ಲಿ ಕೊರೆಯೋಲ್ಲ, ಚಿತ್ರಕಾರನ ಹಾಗೆ, ಸಿನಿಮಾ ಸಂಕಲನಕಾರ... ಹಾಗೆ, ವಾಸ್ತವಿಕ ವಿವರಗಳನ್ನು ಒಂದು ಕಟ್ಟಿನಲ್ಲಿ ಹೆಣೆಯುತ್ತ ನಮಗೆ ಇದಿ... ವಿದ್ಯಮಾನದ ಕೆಡುಕನ್ನು ಕಾಣಿಸುತ್ತಾನೆ. ತುಂಟತನ, ಕಟು ವ್ಯಂಗ್ಯಗಳನ್ನ... ಕಾಣೋ ಬುದ್ಧಿ, ಕಷ್ಟಗಳನ್ನು ಕಂಡು ಮೆತ್ತಗಾಗಿರೋ ಹೃದಯವಿರುವ ಜಾವೇದ... ಇಂಥ ಬರಹಗಳು ಅಧಿಕಾರದ ಕಟ್ಟಿನ ವರಸೆ, ಸಾಮಾನ್ಯ ಜನರ ಬದುಕಿ... ಊಹಿಸಲಾಗದ ಅನೇಕ ಮುಖಗಳು, ಇಂಥ ದುರಂತಗಳಿಂದ ನಿಜಕ್ಕ... ಮನುಷ್ಯ ಮಾತ್ರರಿಗೆ ಆಗಬೇಕಾದ ದಿಗ್ಭ್ರಮೆಗಳನ್ನು ಒಟ್ಟಿಗೆ ಕಟ್ಟಿಕೊಡು... ಬರಹಗಾರ. ಜನರ ಬದುಕಿನ ಮೇಲೆ ಈ ಬಗೆಯಲ್ಲಿ ನಡೆಯುತ್ತಿರು... ತಣ್ಣನೆಯ ಕ್ರೌರ್ಯವನ್ನು ಜಾವೇದ್ ತನ್ನ ಫೋಟೊಗಳಲ್ಲೂ ಹಿಡಿದಿಟ್ಟಿದ್ದಾ... ಸದ್ಯಕ್ಕೆ ಮುಂಬೈಯಲ್ಲಿ ಅವನ ಈ ಫೋಟೊ ಸರಣಿಗಳ ಪ್ರದರ್ಶ... ನಡೀತಿದೆಯಂತೆ. 'ಅಲ್ಲಪ್ಪ ನಿನ್ನನ್ನು ಏನಂತ ಗುರುತಿಸೋದು! 'ಛಾಯಾಚಿ... ವರದಿಗಾರ ಅಂತಲೋ, ಜನರ ಕಷ್ಟಕಾರ್ಪಣ್ಯಗಳಿಗೆ ಮಿಡಿತಿರೋ ವರದಿಗಾ... ಅಂತಲೋ!' ಅಂತ ಕೇಳಿದ್ರೆ ಜಾವೇದ್ 'ರೀ ಇಂಥ ಹಡಬೆ ವಿಂಗಡ... ಕಟ್ಕೊಂಡು ಏನ್ರಿ ಮಾಡ್ತೀರಿ! better being a verb than a noun ಹೆಸ್ರಲ್ಲೇನೈತೆ, ಕೆಲ್ಸಮಾಡ್ಕೊಂಡಿರ್ಬೇಕು ಕಣ್ರಿ' ಅಂತಾನೆ. ಜಾವೇದನಂಥೋರ... ಬೆರಳೆಣಿಕೆಯಷ್ಟಾದ್ರೂ ಒಂದು ನಾಲ್ಕೈದು ಜನ ವರದಿಗಾರರಿದ್ದಾರೆ. ಅವ... ಬಗ್ಗೆ ಮತ್ತೆ ಮಾತಾಡೋಣ ಅಲ್ವಾ! ಖುದಾಫಿಸ್.

ಜಾವೇದ್ ಇಕ್ಬಾಲ್ ಕ್ಲಿಕ್ಕಿಸಿರುವ ಚಿತ್ರಗಳು







ಮರಾಠಿ ಮತಾಂಧ ಅದ್ಯಂಗ್ಲ ದೇಶಭಕ್ತಾದನೂ

ಬಯಲುಸೀಮೆಯ ಕಟ್ಟೆಪುರಾಣ

• ಬಿ.ಚಂದ್ರೇಗೌಡ

"ಯವ್ವೇ, ಯವ್ವೆ, ಇಂತ ಸಳಿ ಯಾವಾಗ್ಲು ಬಿದಿರಲಿಲ್ಲ, ಒತ್ತುಟ್ಟಿ ಆಳುದ್ನ ಬಂದ್ರು ಕಟಬಾಯಿ ತುಗ್ತಾ ಅದೆ ಹೋಗತ್ತಗೆ" ಎಂದುಕೊಂಡು ಸ್ವೆಟರ್ ..., ಮಫ್ಲರ್ ಸುತ್ತಿ ಗುಬುರಾಕಿಕೊಂಡಿದ್ದ ಜುಮ್ಮಿ ..ದಳು. ಕಾಳಮಾವನು ದುಬಟಿಯಲ್ಲೇ ಪ್ಯಾಕ್ ಆಗಿ ..ತಿದ್ದ. ಸೀರಣನಂತೂ ಕಣ್ಣು ಮಾತ್ರ ಕಾಣುವಂತೆ ಮಾಸಲು ..ಗ್ಲಿ ಹೊದ್ದಿದ್ದ. ಉಗ್ರಿಯೂ ಸ್ವೆಟರ್ ಇಕ್ಕಿದ್ದ. ವಾಟಿಸ್ಸೆ ಮಾತ್ರ ಸಹಜವಾಗಿದ್ದು,

"ಇಂತ ಚಳಿ ಹೋಡಸಕ್ಕೆ ಶರಾಪು ಮಾತ್ರ ಮದ್ದು" ..ಂದ.

"ನಿನಿಗೇನೊ ಮದ್ದು ಉಳದೋರಿಗೆ?" ಎಂದಳು ಜುಮ್ಮಿ.

"ನೋಡಕ್ಕ, ಚಳಿ ನಿನಗೊಬ್ಬಳಿಗೇ ಆಗಿಲ್ಲ, ಇಡೀ ಜೀವರಾಶಿಗೇ ಆಗ್ಯದೆ. ಆದ್ರೆ ಅವ್ಕಂಗೆ ತಡಕಂಡವೆ ನೋಡು. ನಿಸರ್ಗದ ಏರುಪೇರಿನ ಜೊತಿಗೆ ಯಂಗೆ ..ದಾಗಿ ಅನುಭವುಸ್ತಾ ಅವೆ ನೋಡು. ಆ ಹೋಟ್ಲು ..ಣ್ಣನ ನಾಯಿ ನೋಡು ಯಂಗೆ ಮನಿಗ್ಯದೆ. ..ಗೆ ಸಿವುಡುಗಟ್ಟಿಕೊಂಡು ಮನಿಗ್ಯದೆ. ಯಾರಾರ ..ದ್ರೆ ರುಶಿಮುನಿ ತರಕಣ್ಣು ಬುಟ್ಟು ಅಂಗೆ ..ಬ್ಬಗುತ್ತದೆ. ಇಂತದ ಮನುಸ ಕಲ್ತಾಗ ಚಳಿ ಮಳಿ ..ಳಿನ್ಯಲ್ಲ ತಡಕತ್ತನೆ, ಗೊತ್ತಾ" ಎಂದು ಉಪದೇಶ ..ಟ್ಟ.

"ಇವುನ ಮಾತಂಗಿರ್ಲಿ ಬಿಸಿಯಾಗಿ ಕಾಫಿ ಕೊಡೊ ..ಣ್ಣ" ಎಂದಳು ಜುಮ್ಮಿ.

"ನನಿಗೂ ಒಂದು ಸ್ಟ್ರಾಂಗ್ ಕಾಫಿ ಕೊಡೊ ಚಿಕ್ಕಣ್ಣ ..ಡದೇಟಿಗೆ ತುಟಿ ಚ್ವಂಯ್ ಅನ್ನಬೇಕು. ಯಲ್ಲಾರಿಗೂ ..ಗೆ ಕೊಡು. ದೊಡಪ್ಪ ಇಂತ ಚಳಿ ನವೆಂಬರ್ ..ಂಗಳಲ್ಲೆ ಯಾವಾಗಾರ ಬಂದಿತ್ತೆ?"

"ಇಲ್ಲ ಕಂದ್ಯ. ಅದ್ಯಂತ ಸಳಿಯಾದ್ರು ..ವರಾತ್ರಿಗೆ ಶಿವಶಿವಾ ಅಂತ ವಂಟೋಗದು."

"ನಾನು ಕೇಳಿದ ಕ್ವಶ್ನೆಗೆ ಉತ್ತರ ಹೇಳಲಿಲ್ಲ ..ನು. ಈ ಚಳಿ ನೂರ ಇಪ್ಪತ್ತು ವರ್ಷದ ..ಕಾರ್ಡು ಮುರದದಂತೆ."

"ಏನು ಮುರುದಾಕ್ಯದ್ಲ?"


"ಇಂತ ಚಳಿ ನೂರಾರು ವರ್ಷದ ಹಿಂದೆ ಬಂದಿತ್ತಂತೆ."

"ಅಂಗರಿದೇನು ವಸದಲ್ಲ ಬುಡು. ಇಂತ ಸಳಿ ಬಂದು ..ಳು ಮಾಡೋ ಅಂತದ್ದೇನಿದ್ದತೂ. ಏನು ರಾಗಿ ..ಳದತೊ. ಇಲ್ಲ ಅವುರೆ ಕಾಳುಗಟ್ಯತೊ. ಏನಪ್ಪಾ ..ಂದ್ರೆ ರಗ್ಗು ಸಟ್ಟರು ಮಾರೋರಿಗೆ ವಳ್ಳೆ ಯಾಪಾರ."

"ಯಲಕ್ಷನ್ನಾರ ಜಲ್ದಿ ಬಂದ್ರೆ ಈ ಚಳಿಗಾಲವ ಗ್ರ್ಯಾಂಡಾಗಿ ನಿಭಾಯಿಸಬವುದು ದೊಡಪ್ಪ."

"ಬತ್ತದಿರೊ. ಯಾವುದ್ಕು ಎಡೂರಪ್ಪ ಮನಸ್ಸು ಮಾಡಬೇಕು" ಎಂದ ಉಗ್ರಿ.

"ಎಡೂರಪ್ಪ ಒಬ್ಬ ಯೂಜಲೆಸ್ ಫೆಲೊ ಕಣೊ ಉಗ್ರಿ. ಕರ್ನಾಟಕದ ಇತಿಹಾಸದಲ್ಲಿ ನಾನು ಹೊಸ ಪಾರ್ಟಿ



ಸ್ಥಾಪಿಸೋಗಂಟ ನನ್ನ ಬೆಂಬಲಿಗರು ಅಲ್ಲೇ ಇರಿ. ಆಮ್ಯಾಲೆ ಸರ್ಕಾರ ಅವಧಿ ಮುಗಸೋಗಂಟ ಅಲ್ಲೇ ಇರಿ. ಆಮ್ಯಾಲೆ ಬನ್ನಿ ಅಂತ ಹೇಳೊ ಲೀಡ್ರ ಎಲ್ಯಾರ ನೋಡಿದ್ದಿಯೇನೊ."

"ಅವುನ್ಯಾಕಂಗಂದವುನೆ ಗೊತ್ತೇನೋ? ಸಾಮಾನ್ಯವಾಗಿ ಸರ್ಕಾರದ ಅವಧಿ ಮುಗಿವಾಗ ಇದ್ದುಬದ್ದದ್ದನೆಲ್ಲಾ ಬಾಚಿಗಂಡು ಬುಡ್ತರೆ. ಮನೆ ನುಗ್ಗಿದ ಕಳ್ಳ ಹೋಗುವಾಗ ಕೈಗೆ ಸಿಕ್ಕಿದ್ದನ್ಯಲ್ಲ ತಗತನೆ ನೋಡು ಅಂಗೆ. ಅದ್ಕೆ ಎಡೂರಪ್ಪ ತನ್ನ ಬೆಂಬಲಿಗರ ಅಲ್ಲಿ ಬುಟ್ಟವುನೆ."

"ಎಕ್ಸಾಟ್ಲಿ ಕರಟ್ ಕಣೊ ಉಗ್ರಿ. ಎಡೂರಪ್ಪ ಕೊಳ್ಳೆ ಹೊಡಿಯದ್ರಲ್ಲಿ ಹೊಡಸದ್ರಲ್ಲಿ ತುಂಬಾ ಎಕ್ಸ್‌ಪೀರಿಯನ್ಸ್ ಹ್ಯಾಂಡು. ಏನೇ ಆಗ್ಲಿ ಅವುನ ಸಾಹಸನೆ ಸಾಹಸ ಕಣೊ."

"ಅದೇನು ಸಾಸ ಮಾಡಿದ್ವನ್ನ?"

"ನೋಡಕ್ಕ.. ಅವುನು ಮೊದ್ಲಿಗೆ ಕುಮಾರಸ್ವಾಮಿಯ ಮುಖ್ಯಮಂತ್ರಿ ಮಾಡಿದ. ಅಮ್ಯಾಲೆ ತಾನೂ ಆದ. ನಂತರ ಸದಾನಂದಗೌಡನ್ನ ಮಾಡಿ, ಶೆಟ್ಟರ್‌ನೂ ಮಾಡಿದ. ಇಂಡಿಯಾದ ರಾಜಕಾರಣದಲ್ಲಿ ಇಂತ ದಾಖಲೆ ಮಾಡಿರೊನು ಯಾವನಾರ ಇದ್ರೆ ತೋರಸು."

"ಅರರೆ ನಿಜ ಕಣೊ. ಮುಂದೂ ಯಾರರ್ನ ಮಾಡ್ತನೊ ಏನೊ."

"ಈ ಸಿದ್ದರಾಮಯ್ಯ, ಪರಮೇಶ್ವರ ಈಗಿನಿಂದ್ಲೆ ಅವುನ್ನ ಹೊಗಳಿಕಂಡು ಚನ್ನಾಗಿಟಗಂಡಿದ್ರೆ ವಳ್ಳೆದು. ಇಲ್ಲ ಅಂದ್ರೆ ಈ ಜನುಮದಲ್ಲಿವುರು ಏನೂ ಆಗಕ್ಯಾಗದಿಲ್ಲ."

"ಅಂಗರೆ ಮುಂದಿನ ಮುಖ್ಯಮಂತ್ರಿ ಮಾಡೋನು ಎಡೂರಪ್ಪನೆ?"

"ಮಾರಾಷ್ಟ್ರದಲ್ಲಿ ಸತ್ತೋದನಲ್ಲ ಬಾಳಾಠಾಕ್ರೆ ಅವುನೂ ಹಿಂಗೆಯಂತೆ. ಅವುನೇಳಿದೋರೆ ಮುಖ್ಯಮಂತ್ರಿ ಆಯ್ತಿದ್ದರಂತೆ."

"ಏನೊ ಉಗ್ರಿ ಆ ಮತಾಂಧ ಠಾಕ್ರೆಯ ನಮ್ಮ ಎಡೂರಪ್ಪನಿಗೆ ಹೋಲುಸ್ತಿಯಲ್ಲೊ. ಅವುನಿಗೆ ಕನ್ನಡಿಗರು, ಬಿಹಾರಿಗಳು, ಉತ್ತರ ಪ್ರದೇಶದೋರ ಕಂಡ್ರಾಯ್ತಿರಲಿಲ್ಲ. ಸಾಬರನಂತೂ ದೇಶಬುಟ್ಟು ಓಡುಸಬೇಕು ಅಂತಿದ್ದ. ಅಂಥೋನು ಸತ್ತಾಗ ಈ ಪೇಪರ್ ನನ್ನ ಮಗನವು ದೇಶ ಕಂಡ ಅಪ್ರತಿಮ ದೇಶಭಕ್ತ ಅಂತ ಬರೀತವಲ್ಲ, ಇವು ಯಂಥಾ ಪಿಂಡಗಳು ಅಂತ ನನಿಗೆ ಗೊತ್ತಾಯ್ತಾಯಿಲ್ಲ."

"ಅಷ್ಟು ಕ್ಯಟ್ಕೊನೇನ್ಲ."

"ಅಯ್ಯೋ ದೊಡಪ್ಪ, ಬಂಬಾಯಿಲಿರೊ ನಮ್ಮ ಕನ್ನಡಿಗರು ಅವುನ ಕಡಿಯೋರಿಗೆ ಎಷ್ಟು ಹೆದರತರೆ ಅಂತೀ? ಮಾರವಾಡಿಗಳು ನಮ್ಮ ನಾರಾಯಣ ಗೌಡನಿಗೆ ಹೆದರಂಗೆ ಹೆದರತರೆ. ಅದಕಿಂತ್ಲುವೆ ಈ ಪುರೋಹಿತ ಪಿಂಡದವುಕೆ ನಾನೇನು ಕೇಳ್ತಿನಪ್ಪಾ ಅಂದ್ರೆ, ಠಾಕ್ರೆಯ ಈ ದೇಶ ಕಂಡ ಮಹಾ ಸಾಂರಾಟ ಅಂತ ಬರೀತಿರಲ್ಲಾ, ಬರೀ ಮರಾಠಿಗರ ಏಳ್ಗೆ ಬಯಸೋನು ದೇಶಭಕ್ತ ಆಗಕ್ಯಾಗದಿಲ್ಲ. ಕನ್ನಡಿಗರು, ಬಿಹಾರಿಗಳು, ಉತ್ತರ ಭಾರತದೋರು ಬಾಂಬೆಗೆ ಬಂದು ಬೇರುಬುಟ್ಟವುರೆ. ಅವುರ್ಯಲ್ಲ ಊರು ಬುಡಬೇಕು ಅಂತ ಧಮಕಿ ಹಾಕೋನು ಯಾವ ಕಾರಣಕ್ಕೂ ಅಖಂಡ ಇಂಡಿಯಾ ದೇಶಕ್ಕೆ ಸೇರಿದೋನಾಗಲ್ಲ. ಅವುನೊಬ್ಬ ಕ್ಷುದ್ರ ಮನುಷ್ಯನಂಗೆ ಕಾಣ್ತನೆ. ಇದ ಮದ್ಲು ತಿಳಕಳಿ ಅನ್ನಬೇಕು."

"ಅವುನು ಸತ್ತಾಗ ಇಪ್ಪತ್ತು ಲಕ್ಷ ಜನ ಸೇರಿದ್ರಂತಲ್ಲೊ?"

"ಯಾವನೊ ಉಗ್ರಿ ಲ್ಯಕ್ಕ ಹಾಕಿದೋನು? ಯಾವನೊ ತಲಿಕೆಟ್ಟ ಭಟ್ಟ ಬೆಂಗಳೂರಲ್ಲಿ ಇದ್ದಕಂಡು ಬರದ ನೀನು ಅದ್ನೆ ನಿಜ ಅನ್ನಕತಿ. ಇಪ್ಪತ್ತು ಲಕ್ಷ ಜನ ಅಂದ್ರೆ ಏನಾಯ್ತು, ಜನ ಸೇರ್ಯವುರೆ, ನಾನು ಇಲ್ಲ ಅನ್ನದಿಲ್ಲ, ಅಂತೂ ಹೋದ್ನಲ್ಲಪ್ಪ ಅಂತ ಉತ್ತರ ಭಾರತದೋರು, ಕನ್ನಡಿಗರು, ಗುಜರಾತಿಗಳು ಸೇರಿರತರೆ. ಅವುರನ್ಯಲ್ಲ ಅಭಿಮಾನಿಗಳು ಅಂತಿಯಾ? ಮತಾಂಧರು ಸತ್ತಾಗ ಜನ ಸೇರತರೆ. ಯಾಕೆ ಕೊಮೊನಿ ಸತ್ತಾಗ ವಸಿ ಜನಿದ್ರೆ. ಅಂಗೆ ಜೇನುಗೂಡು ನೋಡಿದಂಗಾಯ್ತು, ಕನ್ನಡಿಗರಾಗಿದ್ದಕಂಡು. ಗಾಂಧಿ, ನೆಹರು, ಅಂಬೇಡಕರ್‌ಗೆ ಹೋಲಿಸಿ ಈ ಠಾಕ್ರೆ ಜನ್ಮ ಬರಿತವಲ್ಲಾ, ಅವುರಂತ ದೇಶದ್ರೋಹಿನೆ ನೋಡ್ಡಿಲ್ಲ ನಾನು."


"ಸತ್ತಾಗ ಏನೇನೊ ಬರೀತವೆ ಬುಡ್ಡ ಹೋಗ್ಲಿ."

"ಬುಡದಲ್ಲ ದೊಡಪ್ಪ, ಅವುನ್ಯಂಗಿದ್ದ ಅಂಗೇಳಬೇಕು. ಇಡೀ ಹಿಂದಿ ಸಿನುಮಾರಂಗಕ್ಕೆ ಜೀವ ಕೊಟ್ಟು ಹಣದ ವಹಿವಾಟು ನ್ಯಡಿಯಂಗೆ ಮಾಡಿದೋನು ಅಮಿತಾಬಚ್ಚನ್. ಅಂಥೋನ್ನ ಊರುಬುಟ್ಕೊಗು ಅಂದಿದ್ದ. ನಮ್ಮ ತೆಂಡೂಲ್ಕರನ್ನ ಬೋದಿದ್ದ. ಬಂಬಾಯಿಗೆ ಇವುರಿಂದೆ ಹೆಸುರು ಬಂದಿತ್ತೊ ಅಥವಾ ಠಾಕ್ರೆಯಿಂದ ಬಂದಿತ್ತೊ ಹೇಳು."

"ಸತ್ತನಲ್ಲ ಬುಡ್ಡ ಅತ್ತಗೆ." ■

ಜಡತೆಯ ಅವಾಂತರ

ಇದೇ ಸಂದರ್ಭದಲ್ಲಿ ನಾನು ಸಾಹಿತ್ಯ ವಿಮರ್ಶೆ, ಸಹೃದಯತೆ, ಅಭಿರುಚಿ ಮುಂತಾದವು ಹೇಗೆ ವೈಯುಕ್ತಿಕ ಮಟ್ಟದಿಂದ ಸಾರ್ವಜನಿಕವಾಗಲು, ಸಾರ್ವಜನಿಕ ವಲಯದಿಂದ ವೈಯುಕ್ತಿಕವಾಗಲು ಹವಣಿಸುತ್ತಿರುತ್ತದೆ ಎಂದು ನಿಮ್ಮೊಂದಿಗೆ ಚಿಂತಿಸ ಬಯಸುತ್ತೇನೆ. ಒಂದು ಪುಸ್ತಕ ಪ್ರಕಟವಾದೊಡನೆ ಅದು ಬದುಕನ್ನು ಯಾವ ರೀತಿಯಲ್ಲೂ ಸ್ಪರ್ಶಿಸದಿದ್ದರೆ ಯಾರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ; ಆದರೆ ಅನೇಕ ಪುಸ್ತಕಗಳು ಹಾಗೆ ಇರುವುದಿಲ್ಲ. 'ರೂಪದರ್ಶಿ' ಎಂಬ ಕಾದಂಬರಿಯನ್ನೇ ತೆಗೆದುಕೊಳ್ಳಿ. ಅದನ್ನು ಓದಿದವರೆಲ್ಲ ಮೆಚ್ಚಿ ಮಾತಾಡುತ್ತಾರೆ; ಒಬ್ಬ ಒಳ್ಳೆಯವನಾಗಿದ್ದಾಗ ಸುರಸುಂದರನಾಗಿದ್ದವನು ಅನೇಕ ಕೆಟ್ಟ ಕೆಲಸಗಳನ್ನು ಮಾಡಬೇಕಾಗಿ ಬಂದು ಅತ್ಯಂತ ಕುರೂಪದ ವ್ಯಕ್ತಿಯಾಗಿ ರೂಪಾಂತರಗೊಳ್ಳುತ್ತಾನೆ. ಇದು ..ವನ್ನು, ಇದು ಒಳ್ಳೆಯ ಕಾದಂಬರಿ; ಆದರೆ ಇದಕ್ಕೆ ನೀತಿಪಾಠದ, ಒಂದು ರೀತಿಯ ಬಾಲಿಶ ..ಗ್ರಹಿಕೆಯ ವಿನ್ಯಾಸವಿದೆ. ಯಾವ ರೀತಿಯಿಂದ ನೋಡಿದರೂ ಇದು ಪ್ರಬುದ್ಧ ..ಂಡ ಬದುಕಿನ ದ್ವಂದ್ವಗಳನ್ನು ಹೇಳುವುದಿಲ್ಲ.



ಇದನ್ನು ಆಮೇಲೆ ನೋಡಬಹುದು. ಈಗ ಕನ್ನಡನಾಡಿನ ಕೆಲವು ಸಾಂಸ್ಕೃತಿಕ ಸುದ್ದಿಗಳನ್ನು, ಅವು ಉಂಟುಮಾಡುವ ಕೆಟ್ಟ ಪರಿಣಾಮಗಳನ್ನು ಚರ್ಚಿಸಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಾ.ಶಿ. ಮರುಳಯ್ಯ ಎನ್ನುವವರನ್ನು ಆರಿಸಿದ್ದಾರೆ; ಈತ ಸಾಹಿತಿಯೋ ಅಲ್ಲವೋ ಎನ್ನುವುದು ಕೂಡ ಅನೇಕರಿಗೆ ಅಸ್ಪಷ್ಟವಾಗಿದೆ. ಇವರು ಮೊನ್ನೆ ಶಾಂತರಸ ಎನ್ನುವವರಿಗೆ ಸಾಹಿತ್ಯ ಪರಿಷತ್ತಿನ 'ಗೌರವ ಸದಸ್ಯತ್ವ' ನೀಡಿದ ಸುದ್ದಿ ಕೆಲವು ಪತ್ರಿಕೆಗಳಲ್ಲಿ ಅಚ್ಚಾಯಿತು. ಈ ಗೌರವ ಸದಸ್ಯತ್ವ ಎಂಥದು, ಇದಕ್ಕೆ ಅರ್ಹತೆ ಏನು, ಈ ಮರುಳಯ್ಯ, ಶಾಂತರಸ ಯಾವ ಬಗೆಯ ಸಾಹಿತಿಗಳು, ಇದೆಲ್ಲದರ ಬಗ್ಗೆ ವೃತ್ತಪತ್ರಿಕೆಗಳು ಕುತೂಹಲಗೊಳ್ಳದಿರಲು ಕಾರಣವೇನು ಎನ್ನುವುದು, ಈ ಮರುಳಯ್ಯ ಮತ್ತು ಪರಿಷತ್ತಿನ ಚಟುವಟಿಕೆಗಳು ಸಾಹಿತ್ಯದ ರುಚಿಯನ್ನು ಹರಡುವ ಬಗ್ಗೆ ನೆರವಾಗಬಲ್ಲವೆ, ಇಂಥವರ ಹಿಡಿತದಲ್ಲಿರುವ 'ಸಾಹಿತ್ಯ ಪರಿಷತ್ತು' ಕನ್ನಡ ಸಾಹಿತ್ಯಕ್ಕೆ ಯಾವ ಯಾವ ರೀತಿಯಲ್ಲಿ ಮಸಿ ಬಳಿಯಬಲ್ಲರು–ಇವೆಲ್ಲ ಮುಖ್ಯ ಪ್ರಶ್ನೆಗಳು.


ಹಾಗೆಯೇ ಸುಮತೀಂದ್ರ ನಾಡಿಗ್ ಎಂಬ 'ನ್ಯಾಷನಲ್ ಬುಕ್ ಟ್ರಸ್ಟ್'ನ ವ್ಯಕ್ತಿಯ ಸಮಗ್ರ ಕಾವ್ಯವನ್ನು ಕರ್ನಾಟಕದ ರಾಜ್ಯಪಾಲರು ಬಿಡುಗಡೆ ಮಾಡಿದ್ದಾರೆ. ಈ ಬಗ್ಗೆ ನಿಮಗೇ ಹೆಚ್ಚು ಗೊತ್ತಿರುತ್ತದೆ.

ಇದೇ ರೀತಿಯಲ್ಲಿ ಎಚ್. ಗಿರಿಜಮ್ಮ ಎಂಬ ವ್ಯಕ್ತಿಯನ್ನು 'ವರ್ಷದ ಶ್ರೇಷ್ಠ ಲೇಖಕಿ' ಎಂದು ಯಾರೋ ಗೌರವಿಸಿದ್ದಾರಂತೆ. ಇದರ ಬಗ್ಗೆ ಕೂಡ ಹೆಚ್ಚು ಹೇಳದೆ ನಿಜವಾದ ಲೇಖಕಿಯರ ಮೇಲೆ ಇದೆಲ್ಲ ಎಂಥ ಪರಿಣಾಮ ಬೀರಬಹುದು ಎಂದು ಯೋಚಿಸುತ್ತಿದ್ದೇನೆ. ವೈದ್ಯೆಯಾದ ಈ ಗಿರಿಜಮ್ಮ ತನ್ನ ಸಹೋದ್ಯೋಗಿಗಳಾದ ವೈದ್ಯರ ಅಂಗವಿಕಲ ಮಕ್ಕಳ ಮೇಲೆ ವ್ಯಂಗ್ಯವಾಗಿ ಬರೆಯುವುದು, ತನ್ನ ವೈದ್ಯಕೀಯದಲ್ಲೇ ದುರಂತಮಯ ತಪ್ಪು ಮಾಡಿ ಅನೇಕ ಸಾವುನೋವುಗಳಿಗೆ ಕಾರಣವಾಗಿರುವುದು–ತನಿಖೆಗೆ ಯೋಗ್ಯವಾದ ವಿಷಯ. ಈಕೆಯ ಸಾಹಿತ್ಯಕೃತಿಗಳು ವಿಮರ್ಶಕರ (ವಿಮರ್ಶೆಗಲ್ಲ) ವಿಚಾರಣೆಗೆ ಅರ್ಹ.

ನನ್ನೆದುರು ಮೂರು ವಾರದಿಂದ 'ನೇಪಥ್ಯ' ಎಂದು ಅಚ್ಚುಮಾಡಿಕೊಂಡ ಒಂದು ಆಹ್ವಾನ ಪತ್ರಿಕೆ ಬಿದ್ದಿದೆ. ಈ 'ನೇಪಥ್ಯ'ಕ್ಕೆ ಕಾರಣನಾಗಿರುವ ಕಪ್ಪಣ್ಣ ಒಳ್ಳೆಯ ಮನುಷ್ಯ; ತುಂಬ ದಿಟ್ಟನಾದ ಲಜ್ಜೆಯ ಮನುಷ್ಯನೆಂದೂ, ಬಹಳ ಸಹಕಾರ ಬುದ್ಧಿಯ (helping natureನ) ಮಾನವೀಯ ಮನುಷ್ಯನೆಂದೂ ನಾನು ತಿಳಿದು ಈತ ತಪ್ಪು ಮಾಡಿದಾಗ ಕೂಡ ಟೀಕಿಸಲು ಹಿಂಜರಿದಿದ್ದೇನೆ. ಈತ ಇದ್ದಕ್ಕಿದ್ದಂತೆ ಪ್ರತಿಭಾ ನಂದಕುಮಾರ್ ಎಂಬ (ಗಿರಿಜಮ್ಮನ ತರಹದ) ವ್ಯಕ್ತಿಯೊಂದಿಗೆ ಸೇರಿಕೊಂಡು ಸ್ಟೇಜ್‌ನ ಮಧ್ಯೆ ಬಂದು ಅಬ್ಬರಿಸಿದಂತಾಗಿ ನಾನು ಬೆಚ್ಚಿಬಿದ್ದಿದ್ದೇನೆ. ಕಪ್ಪಣ್ಣ ತನ್ನ ಮೌನವನ್ನು ತೊರೆದೊಡನೆ ಆಗಬಲ್ಲ ಅನಾಹುತ ನನ್ನನ್ನು ಚಿಂತೆಗೀಡುಮಾಡುತ್ತದೆ.

ಮೇಲಿನದೆಲ್ಲ ವಾದಕ್ಕೆ ಗ್ರಾಸ ಕೂಡ; ಇಂಗ್ಲಿಷ್‌ನಲ್ಲಿ ಹೇಳಬಹುದಾದರೆ arguable.

ಆದರೆ ನಾನು ವಾದವನ್ನು ಮೀರಿದ್ದನ್ನು ಗುರುತಿಸಲು ಮೇಲಿನ ಎರಡು ಟಿಪ್ಪಣಿಗಳಲ್ಲಿ ಪ್ರಯತ್ನಿಸಿರುವುದು ನಿಮಗೆ ಗೊತ್ತಾದರೆ ನನಗೆ ಸಂತೋಷವಾಗುತ್ತದೆ.



ಕೆಜೆಪಿ ಅಂದ್ರೆ ಕರ್ನಾಟಕ ಜೂಟ್ ಪಾರ್ಟೀನಾ

ಅಣಕ



• ಎಚ್.ಎಲ್.ಕೇಶವಮೂರ್ತಿ

ಲಾಯರುಗಳ ಹತ್ತಿರ ಬರುವ ಕೇಸುಗಳೆಲ್ಲ ಗಟ್ಟಿಯಾಗೇ ಇರಲ್ಲ, ಕೆಲವು ಟೊಳ್ಳು ಇರುತ್ತವೆ. ಇಂತಹವೇ ಬಹುಪಾಲು ಅಂದರೂ ಅದೀತು. ಆದರೂ ಅವುಗಳನ್ನು ತಿರಸ್ಕರಿಸಲಾಗುವುದಿಲ್ಲ, ಹೊಟ್ಟೆಪಾಡಿನ ವಿಷಯ ನೋಡಿ. ಅವುಗಳ ಸೋಲುಗೆಲುವು ಲಾಯರುಗಳ ಗಂಟಲನ್ನು ಅವಲಂಬಿಸಿರುತ್ತಂತೆ. ಕೇಸು ವೀಕಾಗಿದ್ದಷ್ಟೂ ಲಾಯರುಗಳ ಗಂಟಲು ಸ್ಟ್ರಾಂಗ್ ಆಗಿರಬೇಕು ಅನ್ನುವುದು ಅನುಭವಸ್ಥರ ಮಾತು.

ಇದನ್ನು ಯಾಕೆ ಹೇಳುವುದಕ್ಕೆ ಹೊರಟೆ ಅಂದರೆ ಮಾಜಿ ಮುಖ್ಯಮಂತ್ರಿಗಳೂ ಹಾಗೂ ಸ್ವಯಂಘೋಷಿತ ಭಾವೀ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಯಡ್ಯೂರಪ್ಪನವರು ಯಾರಾದರೂ 'ಮನುಷ್ಯನಿಗೆ ಅತ್ಯಂತ ಪ್ರಮುಖ ಅಂಗ ಯಾವುದು' ಅಂತ ಏನಾದರೂ ಪ್ರಶ್ನಿಸಿದರೆ 'ಗಂಟಲು' ಅನ್ನಬಹುದೇನೋ ಅನ್ನುವ ಅನುಮಾನ ಮೊದಲಿನಿಂದಲೂ ಇದ್ದಿತು. ಅದೆಂತಹದ್ದೊ ಪಕ್ಷ ಕಟ್ತೀನಿ ಅಂತ ಸುಡುಗಾಡು ಸಿದ್ಧನಂಗೆ ಊರೂರು ಅಲೀವಾಗ ಅವರ ಕೂಗುಮಾರಿ ಅವತಾರ ನೋಡಿದರೆ ಈ ಅನುಮಾನ ಖಚಿತ ಆಗಬಹುದೇನೋ ಅನ್ನಿಸುತ್ತೆ. ಯಾಕೆ ಅಂದರೆ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆಯವರ ಮೇಲೆ 'ನಾನರಿಯನೆ ಅವನ' ಅಂತೆಲ್ಲ ಪೌರಾಣಿಕ ನಾಟಕದ ರಾಕ್ಷಸನಂತೆ ಕೂಗಾಡಿದರು. 'ಇದೇನಪ್ಪ ಹಿಂಗಂತ ಅವ್ನೆ, ಭ್ರಷ್ಟಾಚಾರ ಮಾಡಿದ್ದ ತೋರಿಸಿದ್ದೇ ತಪ್ಪಾ' ಅಂತ ಸಭಿಕರಲ್ಲಿ ಕೆಲವರು ಯೋಚಿಸುವಷ್ಟರಲ್ಲೇ ಅಡ್ವಾಣಿಯವರ ಮೇಲೆ ಎಗರಿಬಿದ್ದರು. ಅವರು ಬೆಂಗಳೂರಿಗೆ ಬಂದಿದ್ದಾಗ 'ಕರ್ನಾಟಕ ನಂಬರ್ ಒನ್' ಅಂದಿದ್ದರು. 'ಯಾವುದರಲ್ಲಿ ಅಂದ್ರೆ ಭ್ರಷ್ಟಾಚಾರದಲ್ಲಿ' ಅಂತ ಒಗ್ಗರಣೆ ಹಾಕಿದ್ದರು. ಪಾಪ ಆಗ ಯಡ್ಯೂರಪ್ಪನವರು ಶ್ರೀಕೃಷ್ಣ ಜನ್ಮಸ್ಥಾನದಲ್ಲಿ ಕೊಳೆಯುತ್ತಾ ಬಿದ್ದಿದ್ದರಂತೆ. ಜೈಲಿನಲ್ಲಿದ್ದಾಗ ಆ ಮುದಿಯ ಹಿಂಗೆಲ್ಲ ಅಂದನಲ್ಲ ಅಂತ ಅಪ್ಪನವರಿಗೆ ಉರೀಬಾರದ ಕಡೆ ಉರಿ ಹತ್ತಿಕೊಂಡಿತಂತೆ. ಅದು ಇನ್ನೂ ಆರೇ ಇರಲಿಲ್ಲವೇನೋ. ಅಡ್ವಾಣಿಗೆ ಧಿಕ್ಕಾರ, ಧಿಕ್ಕಾರ, ಧಿಕ್ಕಾರ ಅಂತ ಮೂರು ಸಲ ಕೂಗು ಹಾಕಿದರು. ಚಪ್ಪಾಳೆನೂ ಗಿಟ್ಟಿಸಿದರು ಅನ್ನಿ.

ಆಮೇಲೆ ಏನಾಯಿತು ಅಂತೀರಿ. 'ಸರಿಯಾಗಿ ಜಾಡಿಸಿದ್ರಿ ಸಾ' ಅಂತ ಚೇಲಾಗಳ ಮಾತಿನ ಸವಿ ಅನುಭವಿಸುತ್ತಾ ಆ ಮುದಿಯನ ಮುಖಕ್ಕೆ ಸಗಣಿ ನೀರು ಹೇಗೆ ಎರಚಿದೆ ಅಂತೆಲ್ಲ ಎದೆ ಉಬ್ಬಿಸುತ್ತಿರುವಾಗ... ಜನಾದ ಜನ ಎಲ್ಲ 'ಅಂತ ಹಿರೀಕನಿಗೆ ಇಂತ ಮಾತ ಹೇಳೋದ ಇವನು' ಅಂದುಬಿಟ್ಟರು! ಅರೆರೆ ಇದೇನಯ್ಯ ಹಿಂಗಾಯ್ತ ಕುಂತದೆ. ಮುದಿಯನ ಮಕ್ಕೆ ಎಸೆದ ಸಗಣಿ ನೀರು ನನ್ನ ಮೇಲೆ ಬೀಳ್ತಾ ಅದಲ್ಲ ಅಂತ ಯಡ್ಯೂರಪ್ಪನವರು 'ಅಡ್ವಾಣಿ ನನ್ನ ಗುರುಗಳು. ಅವರಿಗಲ್ಲ ನಾನಂಗಂದದ್ದು. ಅನಂತಕುಮಾರ್‌ಗೆ' ಅಂತೇನೋ ಬಡಬಡಿಸಿದರು ಅನ್ನಿ.

ಸಿಟ್ಟಿನ ಕೈಗೆ ಬುದ್ಧಿ ಒಪ್ಪಿಸಿ ಆಡಬಾರದ ಮಾತ ಬಹಿರಂಗವಾಗಿ ಆಡಿ ನಂತರ ಹೇಗೋ ತಿಪ್ಪೆ ಸಾರಿಸಿದರಲ್ಲ, 'ಅಲ್ಲಾ ಈವಯ್ಯ ಗಂಟೆಗೊಂದು ಗಳಿಗೆಗೆ ಒಂದು ಮಾತಾಡ್ತನಲ್ಲ ತಲೆಗಿಲೆ ಕೆಟ್ಹೋಗಿದ್ದತ' ಅಂತೆಲ್ಲ ಯೋಚಿಸಿ ಹತ್ತಿರಕ್ಕೆ ಹೋಗಬೇಕು ಅನ್ನುವವರೂ ಹಿಂದೇಟು ಹಾಕಬಹುದಾ ಎಂಬ ಆಲೋಚನೆ ಕೆಲವರಿಗೆ ಬರ ಬಹುದು. ಹಂಗೇನೂ ಆಗಲ್ಲ, ಯಡ್ಯೂರಪ್ಪನವರ ಜಾಯಮಾನವೇ ಹಾಗೆ. ಬ್ರಹ್ಮಾಂಡ ಭ್ರಷ್ಟಾಚಾರ ಮಾಡಿದರೂ 'ನಾನು ಸತ್ಯ ಹರಿಶ್ಚಂದ್ರನ ವಂಶಜ' ಅಂತಾರೆ. ಅನೈತಿಕತೆಯ ಕೂಪದಲ್ಲಿ ಮುಳುಗಿದ್ದರೂ 'ಸತ್ ಚಾರಿತ್ರ್ಯಕ್ಕೆ ಇನ್ನೊಂದು ಹೆಸರೇ ನನ್ನದು' ಅಂತಾರೆ. ಅವರ ಹುಟ್ಟುಗುಣ ಕಣ್ರಿ ಅದು. 'ಹಂಗಾದ್ರೆ ಯಡ್ಯೂರಪ್ಪನವರನ್ನ ಸುಳ್ಳೂರಪ್ಪ ಅನ್ನಬಹುದೆ' ಅಂತ ಕೇಳ್ತೀರಾ. ನಾನೇನೂ ಹೇಳಲಾರೆ. ಏನೋ ನಿಮಗೆ ತಿಳದಂಗೆ ಮಾಡಿ.



ಸುಳ್ಳೂರಪ್ಪ ಅಂದಾಗ ನೆನಪಾಯಿತು. ಅದು ಯಾವುದೋ ದೇಶದಲ್ಲಿ ಸುಳ್ಳು ಹೇಳುವವರ ಸ್ಪರ್ಧೆ ನಡೆಸುತ್ತಾರಂತೆ. ಇವರನ್ನ ಸ್ಪರ್ಧಿಯಾಗಿ ಕಳುಹಿಸಿದರೆ ಬಹುಮಾನ ಕಟ್ಟಿಟ್ಟಬುತ್ತಿ ಅಂತೀರಾ. ಸಾಧ್ಯನೇ ಇಲ್ಲ ಕಣ್ರಿ. ಇವರ ಅಪ್ಪನಂತಹ ಸುಳ್ಳು ವೀರರು ಇದಾರೆ ಅಂತ ಅಲ್ಲ, ಲಾಯರುಗಳು, ರಾಜಕಾರಣಿಗಳು ಆ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ. 'ಇದೇನ್ರಿ ಇಂತಹ ಅನ್ಯಾಯ' ಅಂತ ಕೇಳಿದರೆ ಅವರು 'ಅವರಿಗೆ ಅವಕಾಶ ನೀಡಿದರೆ **other competitors will be handicapped'** ಅಂತಾರಂತೆ!

ಇಂತಹ ಗೊಬ್ಬರವನ್ನೆಲ್ಲ ತಲೆಯಲ್ಲಿ ತುಂಬಿಕೊಂಡು ಟಿವಿ ಮುಂದೆ ಕುಳಿತು ಹಾಗೇ ಕಣ್ಣುಮುಚ್ಚಿದೆ. ಗಂಟಲ ಕುಮಾರ್ ಅರ್ಥಾತ್ ಧನಂಜಯಕುಮಾರ್ ಕಾಣಿಸಿಕೊಂಡರು.

'ಯಡ್ಯೂರಪ್ಪ ಯಾವ ಪಾರ್ಟಿ' ಅಂತ ಕೇಳಿದೆ.

'ಯಾಕ್ರೀ ಈ ಅನುಮಾನ' ಅಂದರು ಅವರು. ನಯವಾಗೇ ಮಾತನಾಡಿರಬೇಕು. ಆದರೂ ಗದರಿಸಿದಂತೆ ಕೇಳಿಸಿತು.

'ಭಾಜಪನಾ' ಅಂದೆ.

'ಅದೆಲ್ಲಿದೇರೀ. ಅದಕ್ಕೆ ಎಳ್ಳು ನೀರು ಬಿಟ್ಟಾಯಿತಲ್ಲ.'

'ಕೆಜೆಪಿನಾ.'

'ಕಣಿಕೇಳ್ರಿ.'

'ಹಂಗಂದ್ರೇನು ಸಾ.'

'ಹಂಗಂದ್ರೆ?'

'ಕೆಜೆಪಿ ಅಂದ್ರೆ?'

'ಕರ್ನಾಟಕ ಜನತಾ ಪಾರ್ಟಿ'

'ಹಂಗಾ?'

'ಹ್ಞೂಂ. ಯಾಕೆ?'

'ಅದು ಯಾರೋ ಇನ್ನೇನೋ ಹೇಳಿದ್ರಲ್ಲಾ ಸಾ.'

'ಏನು ಹೇಳಿದ್ರು?'

'ಕರ್ನಾಟಕ ಜೂಟ್ ಪಾರ್ಟಿ ಅಂತಾವ' ಅಂತ ಕತ್ತು ಬಗ್ಗಿಸಿಕೊಂಡು ಗೊಣಗಿದೆ. ಅವರ ಮುಖ ನೋಡುವ ಧೈರ್ಯ ಬರಲಿಲ್ಲ, ಹಾಗೇ ಮುಂದುವರೆಸಿದೆ.

'ಯಡ್ಯೂರಪ್ನೋರು ಭಾಜಪಾದಲ್ಲೇ ಅವ್ರಲ್ಲ ಸಾ.'

'ಅಲ್ಲಿದ್ದುಕೊಂಡೇ ಇಲ್ಲಿ ಸಕ್ರಿಯ ಆಗಿದಾರೆ' ಅಂದ್ರು!

ಸತ್ತ ಪಾರ್ಟಿಲಿದ್ದುಕೊಂಡು ಇಲ್ಲಿ ಸಕ್ರಿಯ ಆಗಿದ್ದಾರಂತೆ!

ಇದು ಹೆಂಗಿದೆ ಅಂದ್ರೆ ಒಬ್ಬರಿಗೆ ತಾಳಿ ಕಟ್ಟಿ ಇನ್ನೊಬ್ಬರ ಜೊತೆ ಸಂಸಾರ ಮಾಡಿದಂಗೆ ಅನ್ನೋ ಈಶ್ವರಪ್ಪನವರ ಮಾತು ನೆನಪಿಗೆ ಬಂತು. ಅದನ್ನ ನನ್ನ ಭಾಷೆಯಲ್ಲೇ ಹೇಳಿದೆ. ಹೊಡೆಯುವುದಕ್ಕೆ ಬಂದರು. ಎಚ್ಚರ ಆಯಿತು. ಹಾಳಾದ ಕನಸು.

*****

'ಯಡ್ಯೂರಪ್ಪ ಪಕ್ಷ ಕಟ್ಟಿದ್ದು ಒಳ್ಳೆಯದಾಯ್ತು.'

ಯಾರು ಹೇಳಿದರು?

ಸಿದ್ಧಲಿಂಗಸ್ವಾಮಿ!

ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಇವನಿಗೆ ಯಾವ ಪ್ರಯೋಜನಾನೂ ಇಲ್ಲ, ಮೇಕೆ ಹಾಲು ಕುಡಿಯೋದು ತಪ್ಪಲ್ಲ, ಆದರೂ ಅವನಿಂದ ಈ ಮಾತು!

ಕಲ್ಬುರ್ಗಿ ಯೂನಿವರ್ಸಿಟಿ ಬದ್ಧಿಮಕ್ಕಳು. ಜಾತಿ ಬ... ಎಲ್ಲಿ ಬಿದ್ದವೆ ಅಂದುಕೊಂಡೆ.

'ಯಾಕೆ ಬೇಕಿತ್ತು ಅದು' ಅಸಹನೆಯಿಂದಲೇ ಕೇಳಿ...

'ಗೋರಿ ಗುದ್ದೆ ಹಾಕಿರೋ ದುಡ್ಡ ಹಿಂಗಾರ ಹಂಚ...' ಅಂದ ಅವ!

ಲಿಂಗಾಯತರನ್ನೇ ನಂಬಿರೋ ಯಡ್ಯೂರಪ್ಪನವ... ದೇವರೇ ಗತೀನಾ!

ಗೌರ್ಮೆಂಟ್ ಕೆಲ್ಸ ಇದ್ದಂಗೆ ಸಾ

ಕ್ಯಾತ ಬಂದ. ಗರಿಗರಿ ಬಟ್ಟೆ ತೊಟ್ಟಿದ್ದ ಕಳಕಳಿಯಾಗಿ...

'ಏನೋ ಹೊಸ ಸ್ಟೈಲು' ಅಂದೆ.

'ಎಲಕ್ಷನ್‌ಗೆ ನಿಲ್ತಿನಿ ಸಾ' ಅಂದ.

'ಯಾವ ಪಾರ್ಟಿಯಿಂದ?'

'ಪಾರ್ಟಿಗೇನು ಸಾ. ಕಾಸಿಗೊಂದು ಕೊಸರಿಗೊಂದ... ಅವೆ.'

ನಿಜ. ರಾಷ್ಟ್ರೀಯ ಪಕ್ಷಗಳು ಮೂರು. ಪ್ರಾದೇಶಿ... ಪಕ್ಷಗಳಿಗೆ ಲೆಕ್ಕವೇ ಇಲ್ಲ, ಹಣಬೆಗಳಂತೆ ಹುಟ್ಟುತ್ತ... ಇವೆ.

'ಅದು ಸರಿ ಕ್ಯಾತ. ಪಾರ್ಟಿ ಅಂತ ಒಂದು ಬೇಕ... ಯಾವ ಪಾರ್ಟಿ ಸೇರ್ತಿ? ಜೆಡಿಎಸ್?'

'ಥೂ ಥೂ ಅದು ಅಪ್ಪಮಕ್ಕಳ ಪಾರ್ಟಿ ಸಾ.'

ಆಂತರಿಕ ಪ್ರಜಾಪ್ರಭುತ್ವ ಇಲ್ಲ ಅಂತ ಒಳಗಿರೋ... ನರಳ್ತ ಇದಾರೆ.

'ಕೆಜೆಪಿ?' ಕೇಳಿದೆ

'ಅದೂ ಜೆಡಿಎಸ್ ಇದ್ದಂಗೇಯ ಸಾ.'

ಸತ್ಯಾನೆ ಹೇಳಿದ್ದ. ಅಲ್ಲಿ ಯಡ್ಯೂರಪ್ಪ ಬಾಯಿಂ... ಬಂದದ್ದೇ ತೀರ್ಥ. ಕೊಂಚ ಅದೇನಾದರೂ ಚಿಗುರಿಕೊಂಡ... ವಿಜಯೇಂದ್ರ, ರಾಘವೇಂದ್ರ ಹಂಚಿದ್ದೇ ಪ್ರಸಾದ.

'ಹಂಗಾರೇನು ಮಾಡ್ತಿ?'

'ಬಡವರ ಶ್ರಮಿಕರ ರೈತರ ಪಕ್ಷ ಸೇರ್ತೀನಿ ಸಾ.'

'ಅಂದ್ರೆ ಬಿಎಸ್‌ಆರ್ ಪಾರ್ಟೀನಾ?'

'ಹೂಂ ಸಾ.'

'ಹೋಗಿಹೋಗಿ ಗಣಿಕಳ್ಳನ ಪಾರ್ಟಿ ಸೇರ್ತಿಯೇನೋ...'

'ನಿಮ್ಗೇನೂ ತಿಳಿಯಾಕಿಲ್ಲ ಬುಡಿ ಸಾ. ಅದಕ್ಕೆ ಸೇರಿ... ಗೌರ್ಮೆಂಟ್ ಕೆಲ್ಸಕೆ ಸೇರ್ದಂಗೆ ಗೊತ್ತ ಸಾ?'

'ಅದೆಂಗ್ಲ ಕ್ಯಾತ?'

'ಹೆಂಗೆ ಅಂದ್ರೆ? ತಿಂಗಳಾ ತಿಂಗಳಾ ಸಂಬಳ ಕೊಡ್ತಾ... ಸಾ' ಅಂತ ಬೀಗಿದ!


ಠಾಕ್ರೆ ಮಹಾರಾಷ್ಟ್ರಕ್ಕೆ ಸೀಮಿತಗೊಂಡಿದ್ದು ದೇಶಕ್ಕಾದ ಬಹುದೊಡ್ಡ ಲಾಭ

ಭಾರತ ಒಂದು ವಿಶಿಷ್ಟ ಸಂಸ್ಕೃತಿಯ ನಾಡು. ಆಯಾಯ ಪ್ರದೇಶಕ್ಕೆ ಆಯಾಯ ಸಂಸ್ಕೃತಿಗಳಿಗೆ ತಕ್ಕಂತೆ ಹಲವಾರು ಸಮೃದ್ಧ ಭಾಷೆಗಳು, ಅನೇಕ ಆಚಾರ ವಿಚಾರಗಳು ಸೇರಿಕೊಂಡು ವಿವಿಧ ವೈವಿಧ್ಯತೆಗಳ ನಡುವೆಯೂ ನಾವೆಲ್ಲ ಭಾರತೀಯರಾಗೇ ಮುಂದೆ ಸಾಗುತ್ತಿದ್ದೇವೆ.

ಸ್ವಾತಂತ್ರ್ಯ ನಂತರ ಭಾಷಾವಾರು ಪ್ರಾಂತ್ಯಗಳ ವಿಂಗಡನೆಯಾಯಿತಾದರೂ ಈ ವಿಂಗಡನೆಯಲ್ಲಿ ಪರಿಪೂರ್ಣತೆಯೇನೂ ಇದ್ದಿರಲಿಲ್ಲ. ಅಲ್ಲದೇ ಈ ಪರಿಪೂರ್ಣತೆ ಸುಲಭದ ಮಾತೂ ಆಗಿರಲಿಲ್ಲ. ಯಾಕೆಂದರೆ ದೇಶಾದ್ಯಂತ ಎಲ್ಲಾ ಭಾಷಿಕರೂ ಹಂಚಿಹೋಗಿದ್ದರು (ಮಹಾರಾಷ್ಟ್ರದ ರತ್ನಗಿರಿ ವೆಂಗುರ್ಲಾ ಮೊದಲಾದೆಡೆ ಇಂದಿಗೂ ಕನ್ನಡದ ಕುರುಹುಗಳನ್ನು ಕಾಣಬಹುದು). ಭಾಷಾ ಬಾಹುಳ್ಯದ ಆಧಾರದಲ್ಲಿ ಈ ವಿಭಜನೆ ನಡೆಯಿತಾದರೂ ಪ್ರತಿಯೊಂದು ರಾಜ್ಯವೂ ಅನ್ಯಭಾಷಿಗರನ್ನು ಹಿಂದೆಯೂ ಹೊಂದಿತ್ತು, ಇದೇರೀತಿ ಮುಂದೆಯೂ ಕೂಡ ಹೊಂದಿರುವುದು ಸ್ವಾಭಾವಿಕ. ಅಲ್ಲದೇ ಎಲ್ಲಾ ರಾಜ್ಯದವರು ಮೂಲತಃ ಭಾರತೀಯರೇ ಆಗಿರುವ ಕಾರಣ ಕನ್ನಡಿಗ ದೂರದ ಅಸ್ಸಾಂನಲ್ಲೂ ನೆಲೆಸುವುದು ಕಾನೂನುಬಾಹಿರ ಸಂಗತಿಯೇನೂ ಆಗಿರುವುದಿಲ್ಲ.

ಆರಂಭದಲ್ಲಿ ಹೆಸರಿಲ್ಲದ ಸಣ್ಣ ಊರಾಗಿದ್ದ ಮುಂಬೈ ಆಂಗ್ಲರ ವ್ಯಾಪಾರ ವಹಿವಾಟಿನ ಸಂಬಂಧ ದೇಶದ ಅತ್ಯಂತ ಆರ್ಥಿಕ ಚಟುವಟಿಕೆಯ ನಗರವಾಗಿ ಬೆಳೆಯಿತು. ದೆಹಲಿ ಈ ದೇಶದ ರಾಜಕೀಯ ರಾಜಧಾನಿಯಾಗಿದ್ದರೆ, ಸಿನಿಮಾ ಜಗತ್ತಿನ ಥಳುಕ್-ವ್ಯಾಪಾರ-ವಹಿವಾಟು ಇನ್ನಿತರ ವೃತ್ತಿ ವಿಷಯಗಳಿಗೆ ಸಂಬಂಧಿಸಿ ಜನರು ಮಾನಸಿಕವಾಗಿ ಮುಂಬೈಯನ್ನೇ 'ರಾಜಧಾನಿ'ಯನ್ನಾಗಿಸಿಕೊಂಡಿದ್ದಾರೆ. ಮುಂಬೈ ಮಹಾನಗರ ಈ ರೀತಿ ಬೆಳೆಯುವಲ್ಲಿ ಮರಾಠಿಗರಿಗಿಂತ ಅನ್ಯಭಾಷಿಗರ ಕೊಡುಗೆಯೇ ಅಧಿಕ. ಮುಂಬೈಯೇನೋ ದೈತ್ಯವಾಗಿ ಬೆಳೆಯುತ್ತಾಹೋಯಿತು. ಬೆಳೆಯುವತನಕ ಸುಮ್ಮನಿದ್ದ ಕೆಲ ವಿಭಾಜಕ ಪ್ರತ್ಯೇಕತಾವಾದಿ ಮನಸ್ಸುಗಳಿಗೆ ಮುಂಬೈ ಭಾಷಿಗರ ಪಾಲಿಗಿಂತ ಮುಂಬೈ ಕಟ್ಟಿದವರ ಪಾಲೇ ಕೆಲವೆಡೆ ಸ್ಥಾನ ಗಿಟ್ಟಿಸುತ್ತಿರುವುದು ಕಣ್ಣಿಗೆ ಎದ್ದು ತೋರತೊಡಗಿತು. ಇದನ್ನೇ ಒಂದು 'ಮಹಾಸಮಸ್ಯೆ' ಎಂದು ತಿದಿಯೊತ್ತಿ ಒಂದು ವ್ಯಕ್ತಿ ಸೆಟೆದು ನಿಂತಿತು. ಅದೇ ಠಾಕ್ರೆ. ಬಾಳಾ ಸಾಹೇಬ್ ಠಾಕ್ರೆ.

ಭಾಷಾವಾರು ಪ್ರಾಂತ್ಯಗಳ ರಚನೆಗೂ ಮುನ್ನ ಕರಾವಳಿ ಕನ್ನಡಿಗರಿಗೆ ಬೆಂಗಳೂರಿಗಿಂತ ಬಾಂಬೆಯೇ ಹತ್ತಿರವಾಗಿತ್ತು. ಇದಕ್ಕೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ಎರಡೂ ಕೂಡ ಇಲ್ಲಿನವರು ಒಗ್ಗಿಸಿಕೊಂಡ ಸಮುದ್ರ ಕರಾವಳಿ ಪ್ರದೇಶವೇ ಆಗಿತ್ತಲ್ಲದೇ ಆವತ್ತು ದಕ್ಷಿಣ ಕನ್ನಡ ಜಿಲ್ಲೆ ಮಂದ್ರಾಸ್ ಸರಕಾರಕ್ಕೆ ಸೇರಿದ್ದರೆ ಪಕ್ಕದ ಭಟ್ಕಳದಿಂದಾರಂಭವಾಗುವ ಉತ್ತರ ಕನ್ನಡ ಜಿಲ್ಲೆ ಮುಂಬೈ ಪ್ರಾಂತ್ಯಕ್ಕೆ ಸೇರಿಕೊಂಡಿತ್ತು. ಹಾಗಾಗಿ ಮುಂಬೈ ಎಂದರೆ ಏನೋ ಭಾರೀ ದೂರದ ನಾಡೆಂಬ ಭಾವನೆ ಇಲ್ಲಿನವರಿಗೆ ಇದ್ದಿರಲಿಲ್ಲ. ಆ ಕಾಲದಲ್ಲಿ 'ಸ್ಟೀಮರ್' ಎಂಬ ಹಡಗಿನ ಮೂಲಕ ಜನರು ಮುಂಬೈಗೆ ಹೋಗಿಬರುತ್ತಿದ್ದರು. ಮೂಲತಃ ಊರಲ್ಲಿರಲು ಇಷ್ಟಪಡದೇ ಸಾಹಸಮಯ ಬದುಕನ್ನೇ ಆರಿಸಿಕೊಳ್ಳುವ ಕರಾವಳಿಗರು ಮುಂಬೈಗೆ ತೆರಳಲು ತುದಿಗಾಲಲ್ಲಿ ನಿಲ್ಲುತ್ತಿದ್ದರು. ಹೀಗಾಗಿ ಇಲ್ಲಿಂದ ಲೋಟ ತೊಳೆಯಲು ಹೋದ ಜನರು ಸಾಹುಕಾರರಾಗಿ ಬೆಳೆದ ಉದಾಹರಣೆಗಳೂ ಸಾಕಷ್ಟಿದ್ದವು. ಇದು ಕೇವಲ ದಕ್ಷಿಣ ಕನ್ನಡಿಗರ ಮಾತಷ್ಟೇ ಅಲ್ಲ, ಇನ್ನಿತರ ರಾಜ್ಯದ ಜನರನ್ನೂ ಮಾಯಾವಿ ಮುಂಬೈ ಆಕರ್ಷಿಸಿತ್ತು. ತಮ್ಮದೇ ದೇಶದ ಭಾಗವಾಗಿದ್ದರಿಂದ ದುಡಿಮೆಗಾಗಿ ಎಲ್ಲಾ ರಾಜ್ಯದಿಂದಲೂ ಜನರು ಮುಂಬೈಯನ್ನು ಸೇರಿಕೊಂಡು ಅದನ್ನೊಂದು ಮಾಯಾಬಜಾರನ್ನಾಗಿಸಿದ್ದರು.



ಆದರೆ ಆ ನಂತರ ಕಾಲ ಮೊದಲಿನಂತಿರಲಿಲ್ಲ. ಮುಂಬೈ ಮಹಾರಾಷ್ಟ್ರಿಗರದ್ದೆಂಬುದರಲ್ಲಿ ಎರಡು ಮಾತಿಲ್ಲ, ಆದರೆ ಇಲ್ಲಿಗೆ ದುಡಿಮೆಗೆಂದು ಬಂದ ದೇಶದ ಜನರನ್ನೇ ವೈರಿಗಳಂತೆ ಕಾಣುವ ಚಾಳಿಯೊಂದು ಮೊಳಕೆಯೊಡೆಯಿತು. ಅದಕ್ಕೆ ನೀರೆರೆದು ಪೋಷಿಸಿದವರೇ ಈ ಬಾಳಾಠಾಕ್ರೆ. ಅನ್ಯ ಭಾಷಿಗರ ವಿರುದ್ಧ ಮರಾಠಿಗರನ್ನು ಭಾವನಾತ್ಮಕವಾಗಿ ಎತ್ತಿಕಟ್ಟಿ ಶಿವಸೇನೆ ಎಂಬ ಪುಂಡರ ಪಡೆಯನ್ನು ಕಟ್ಟಿದ ಠಾಕ್ರೆ ಈ ಮೂಲಕ ಮರಾಠಿಗರಿಗೆ ಕೊಟ್ಟ ಕೊಡುಗೆಯನ್ನು ಮಾತ್ರ ಭೂತಕನ್ನಡಿ ಹಿಡಿದು ಹುಡುಕಬೇಕಷ್ಟೆ. ಆರಂಭಕಾಲದಲ್ಲಿ ಗುಜರಾತಿಗಳು ಹಾಗೂ ಕರಾವಳಿ ಕನ್ನಡಿಗರ ಮೇಲೆ ದಾಳಿಗಿಳಿದ ಶಿವಸೇನೆ ಎಂಬ ಪುಂಡರ ಪಡೆ ಮಾಡಿದ ಹಾನಿ ಅಷ್ಟಿಷ್ಟಲ್ಲ. 'ಲುಂಗಿ ಹಟಾವೋ ಪುಂಗಿ ಬಜಾವೋ' ಎಂಬುದು 'ಮದ್ರಾಸಿ'ಗಳ ವಿರುದ್ಧದ ಇವರ ರಣಕಹಳೆಯಾಗಿತ್ತು.

ಮುಂಬೈಗೆ ಹೊಟ್ಟೆಪಾಡಿಗಾಗಿ ಬಂದ ಬಿಹಾರಿಗಳು, ಉತ್ತರಪ್ರದೇಶದವರ ವಿರುದ್ಧ ದೇಶದ ಏಕತ್ವವನ್ನು ವಿರೋಧಿಸುವಂತಹ ಠಾಕ್ರೆಯ ಕೀಳುಮಾತುಗಳು ಆತ ಎಂತಹ ಪ್ರತ್ಯೇಕತಾವಾದಿ ಮನಸ್ಥಿತಿಯವನು ಎಂಬುದನ್ನ... ಎತ್ತಿ ತೋರಿಸುತ್ತದೆ. (ಟಿವಿಯಲ್ಲಿ, ಪತ್ರಿಕೆಗಳಲ್ಲಿ ಈತನನ್ನ... ಮಹಾನ್ ದೇಶಪ್ರೇಮಿಯೆಂದು ಉಲ್ಲೇಖಿಸುತ್ತಿರುವುದನ್ನ... ನೋಡಿದರೆ ನಗು ಬರುತ್ತದೆ. ವಾಸ್ತವವಾಗಿ ಈತ ಮರಾ... ಪ್ರೇಮಿ ಕೂಡ ಆಗಿರಲಿಲ್ಲ, ಮರಾಠಿಗರ ಕುರಿತ ಈತ... ಅಂದಾಭಿಮಾನವನ್ನೇ ಪ್ರೇಮ ಎನ್ನಲಾಗದು.) 'ಏಕ್ ಬಿಹಾ... ಸೌ ಭಿಮಾರೀ' (ಒಬ್ಬ ಬಿಹಾರಿ ನೂರು ಕಾಯಿಲೆಗಳಿ... ಸಮ) ಎಂದು ಕಟಕಿಯಾಡುವ ಈತನನ್ನೇ ಮರಾಠಿಗರ... ಮುಂಬೈಯಿಂದ ಓಡಿಸಬೇಕಿತ್ತು. ಯಾಕೆಂದರೆ ಠಾ... ವಿಷಯದಲ್ಲಿ ಇದು ಸತ್ಯದ ಮಾತು ಕೂ... ಆಗಿತ್ತು. ಮೂಲತಃ ಬಿಹಾರಿಯೇ ಆಗಿ... ಠಾಕ್ರೆ (ಠಾಕ್ರೆಯ ಪೂರ್ವಜರು ಬಿಹಾರಿಗಳು...) ನೂರಲ್ಲ ಸಾವಿರ ಕಾಯಿಲೆಗಳಿ... ಸಮನಾಗಿದ್ದ.

ಹಿಟ್ಲರನ ಪರಮಭಕ್ತನಾಗಿದ್ದ ಠಾಕ್ರೆ ಆತನಂತೆ ಅಪ್ರತಿ... ಮಾತುಗಾರನಾಗಿದ್ದ. ಹಿಟ್ಲರ್‌ನ ಆತ್ಮಕಥೆ 'ಮೇನ್ ಕೆಂಫ್...' ಆತನಿಗೆ ಆದರ್ಶವಂತೆ. ಪರಮ ಜನಾಂಗೀಯವಾದಿಯಾ... ಹಿಟ್ಲರ್ ತನ್ನ ಕಾರ್ಯಸಾಧನೆಗಾಗಿ ಏನನ್ನೂ ಕೂಡ ಮಾಡಲ... ಹೇಸಲಾರದಂತವ. ಆತನೂ ಕೂಡ ಜನಾಂಗದ ಹೆಸರ... ಲಕ್ಷಾಂತರ ಸಂಖ್ಯೆಯಲ್ಲಿ ತನ್ನವರನ್ನು ಭಾವನಾತ್ಮಕವಾ... ಪ್ರಚೋದಿಸಿ ಒಲಿಸಿಕೊಂಡಿದ್ದ. ಠಾಕ್ರೆ ಕೂಡ ಇತ್ತೀಚೆ... 'ನನಗೆ ಸೈನ್ಯ ಕೊಡಿ. ಕೆಲವೇ ದಿನಗಳಲ್ಲಿ ದೇಶವನ್ನ... ನೇರ ಮಾಡುವೆ' ಎಂದಿದ್ದ.

ಕರ್ನಾಟಕವೆಂದರೆ ಠಾಕ್ರೆಗೆ ಪಾಕಿಸ್ತಾನಕ್ಕಿಂತಲೂ ಹೆಚ್ಚ... ಸಿಟ್ಟು. ಅದನ್ನು ಹಲವು ಬಾರಿ ಆತ... ಬಹಿರಂಗಪಡಿಸಿದ್ದುಂಟು. ನಮ್ಮ ಭಾಷೆ, ನಡೆನುಡಿಗ... ಬಗ್ಗೆಯೂ ಆತ ಕೀಳಾಗಿ ಮಾತಾಡಿದ್ದನಲ್ಲದೇ ಜ್ಞಾನಪೀ... ಪ್ರಶಸ್ತಿ ವಿಜೇತ ಸಾಹಿತಿ ಚಂದ್ರಶೇಖರ ಕಂಬಾರರ ವಿರುದ್ಧವ... ಕೀಳಾಗಿ ಮಾತಾಡಿ ತನ್ನ ನೀಚತನವನ್ನು ತೋರಿಸಿಕೊಂಡಿದ್ದ... ಒಂದುವೇಳೆ ಮಹಾರಾಷ್ಟ್ರಕ್ಕೆ ಕರ್ನಾಟಕದ ಬದಲ... ತಮಿಳುನಾಡೇ ನೆರೆಯ ರಾಜ್ಯವಾಗಿದ್ದರೆ ಭಾಷಾಭಿಮಾ...



ರೈತ ಶಿವಣ್ಣ



ಶಿವರಾಜ್‌ಕುಮಾರ್ ಮುಂದಿನ ಬಾರಿ ರೈತನ ಪಾತ್ರದಲ್ಲಿ ಕಾಣಿಸಿಕೊಳ್ಳಲು ನಿರ್ಧರಿಸಿದ್ದಾರಂತೆ. ರೈತ ಅಂದಾಕ್ಷಣ ಎಲ್ಲರಿಗೂ ನೆನಪಾಗುವುದೇ ಡಾ.ರಾಜ್‌ಕುಮಾರ್ ನಟಿಸಿದ್ದ 'ಬಂಗಾರದ ಮನುಷ್ಯ'. "ನೀವು ಈ ಚಿತ್ರದ ರೀಮೇಕ್‌ನಲ್ಲಿ ನಟಿಸುತ್ತೀರಾ?" ಎಂದು ಪತ್ರಕರ್ತರು ಶಿವಣ್ಣನವರನ್ನು ಕೇಳಿದಾಗ ಅವರು "'ಬಂಗಾರದ ಮನುಷ್ಯ' ಚಿತ್ರವನ್ನು ರೀಮೇಕ್ ಮಾಡಲು ಕೆಲವರು ಬಂದಿದ್ದರು ನಿಜ! ಆದರೆ ಕೆಲವು ಚಿತ್ರಗಳನ್ನು ರೀಮೇಕ್ ಮಾಡುವ ಗೋಜಿಗೆ ಹೋಗದೆ ಅವನ್ನು ನಾವು ನೋಡಿ ಆನಂದಿಸಬೇಕು ಅಷ್ಟೆ. ಹೀಗಾಗಿ 'ಬಂಗಾರದ ಮನುಷ್ಯ' ಚಿತ್ರದ ರೀಮೇಕ್‌ನಲ್ಲಿ ನಾನು ನಟಿಸುವ ಪ್ರಶ್ನೆಯೇ ಇಲ್ಲ" ಸ್ಪಷ್ಟಪಡಿಸಿದರು.

"ಈಗಾಗಲೇ ಹಳ್ಳಿಯ ಕಥಾವಸ್ತುವನ್ನು ಹೊಂದಿರುವ ಚಿತ್ರದಲ್ಲಿ ನಟಿಸದೆ ಬಹಳ ಗ್ಯಾಪ್ ಆಯಿತು. ರೌಡಿಸಂ ಮತ್ತು ಲಾಂಗು ಮಚ್ಚಿನ ಆರ್ಭಟದ ನಡುವೆ ಒಂದು ಹಳ್ಳಿ ಕಥಾವಸ್ತುವಿನ ಚಿತ್ರದಲ್ಲಿ ನಟಿಸಬೇಕು ಎಂದೆನಿಸಿತ್ತೇ ವಿನಃ ಇದರ ಹಿಂದೆ ಬೇರೇನೂ ವಿಶೇಷ ಅರ್ಥವಿಲ್ಲ" ಎಂದು ಶಿವಣ್ಣ ಹೇಳಿದರು.

ಈ ಹಿಂದೆ ಶಿವಣ್ಣ ಹಳ್ಳಿ ಹೀರೋ ಆಗಿ ನಟಿಸಿರುವ ಅನೇಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಭಾರಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದರಲ್ಲೂ 'ತವರಿಗೆ ಬಾ ತಂಗಿ' ಮತ್ತು 'ಜನುಮದ ಜೋಡಿ' ಚಿತ್ರಗಳು ಅಪೂರ್ವ ಯಶಸ್ಸನ್ನು ಕಂಡಿದ್ದವು. ಹೀಗಾಗಿ ಶಿವಣ್ಣ ರೈತನಾಗಿ ಕಾಣಿಸಿಕೊಳ್ಳಲು ನಿರ್ಧರಿಸಿರುವುದು ಬಹುಶಃ ಅವರ ಅಭಿಮಾನಿಗಳಿಗೆ ಒಂದು ರೀತಿಯ ಖುಷಿ ನೀಡಿದರೂ ಆಶ್ಚರ್ಯವೇನಿಲ್ಲ.

'ಅಡ್ಡ'ಕ್ಕೆ ಬಿದ್ದ ಹಂಚಿಕೆದಾರರು

'ಪ್ರೇಮ್ ಅಡ್ಡ' ಚಿತ್ರದ ಮೂರು ಹಾಡುಗಳು ಈಗಾಗಲೇ ಸೂಪರ್ ಹಿಟ್ ಆಗಿವೆ. ಬಹುತೇಕ ಎಲ್ಲ ಪಡ್ಡೆ ಹುಡುಗರ ಬಾಯಲ್ಲಿ ಆ ಹಾಡುಗಳು



ನಲಿಸುತ್ತಿವೆ. ಈ ಹಾಡುಗಳು ಹಿಟ್ ಆದಕೂಡಲೇ ಈ ಚಿತ್ರದ ಹಂಚಿಕೆಯನ್ನು ಖರೀದಿಸಲು ಬಾಜಿದಾರರು ಮುಂದೆ ಬಂದಿದ್ದಾರೆ.

ಪ್ರೇಮ್ ನಾಯಕನಾಗಿ ನಟಿಸಿರುವ ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುತ್ತೋ, ಸೋಲುತ್ತೋ ಅದು ಬೇರೆ ವಿಷಯ. ಆದರೆ ಇದನ್ನು ಖರೀದಿಸಲು ಹಂಚಿಕೆದಾರರು ಪೈಪೋಟಿ ನಡೆಸುತ್ತಿರುವುದು ಪ್ರೇಮ್‌ಗೆ ಹೊಸ ತಾರಾಮೌಲ್ಯವನ್ನಂತೂ ತಂದುಕೊಟ್ಟಿದೆ. ಇದಕ್ಕೆಲ್ಲ ಮುಖ್ಯ ಕಾರಣ ಹರಿಕೃಷ್ಣ ನೀಡಿರುವ ಮೂರು ಸುಂದರವಾದ ಟ್ಯೂನ್‌ಗಳು ಎಂಬುದರಲ್ಲಿ ಎರಡು ಮಾತಿಲ್ಲ, ಆದರೆ ಚಿತ್ರ ಬಿಡುಗಡೆಯಾದ ನಂತರ ನಾಯಕ ಪ್ರೇಮ್‌ರ ಅದೃಷ್ಟ ಖುಲಾಯಿಸುತ್ತದೋ? ಅಥವಾ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದ ತರಹ ಮುದುಡುತ್ತದೋ? ನೋಡಬೇಕು.

'ನೋ' ಎಂದು ಸುದ್ದಿ ಮಾಡಿದ ರಾಗಿಣಿ




ಕಳೆದೆರಡು ತಿಂಗಳಿನಿಂದ ನಟಿ ರಾಗಿಣಿ ಇತರೆ ತಾರೆಯರಿಗಿಂತ ಹೆಚ್ಚು ಸುದ್ದಿ ಮಾಡುತ್ತಿದ್ದಾಳೆ. ಉದಾಹರಣೆಗೆ ಹಲವು ವಾರಗಳ ಹಿಂದೆ ರಾಗಿಣಿ 'ಪ್ರೇಮ್ ಅಡ್ಡ' ಚಿತ್ರದ ಐಟಂಸಾಂಗ್‌ನಲ್ಲಿ ಕುಣಿಯುತ್ತಾಳೆ ಎಂಬ ಸುದ್ದಿ ಗಾಂಧಿನಗರದಲ್ಲಿ ಹಾರಿದಾಡಿತ್ತು, ಆದರೆ ಕೆಲದಿನಗಳ ನಂತರ ರಾಗಿಣಿ ಸ್ಪಷ್ಟೀಕರಣ ಕೊಟ್ಟು "ನಾನು 'ಪ್ರೇಮ್ ಅಡ್ಡ' ಚಿತ್ರದ ಐಟಂಸಾಂಗ್‌ನಲ್ಲಿ ಕಾಣಿಸಿಕೊಳ್ಳುವುದಿಲ್ಲ, ಅದೆಲ್ಲ ಸುಳ್ಳು" ಎಂದಿದ್ದಳು. ಈಗ ರಾಗಿಣಿ ಬದಲಾಗಿ ಐಂದ್ರಿತಾ ರೈ ಅರೆಬಟ್ಟೆಯಲ್ಲಿ 'ಪ್ರೇಮ್ ಅಡ್ಡ'ದಲ್ಲಿ ಕಾಣಿಸಿಕೊಂಡಿದ್ದಾಳೆ.

ಇದಾದನಂತರ ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿರುವ 'ಲಕ್ಷ್ಮಿ' ಚಿತ್ರದಲ್ಲಿ ರಾಗಿಣಿ ಐಟಂಸಾಂಗ್‌ನಲ್ಲಿ ಕಾಣಿಸಿಕೊಳ್ಳುತ್ತಾಳೆ ಎಂಬ ಸುದ್ದಿ ತೇಲಿಬಂದಿತ್ತು, ಆದರೆ ಇದೀಗ ಬಂದಿರುವ ಸುದ್ದಿಯ ಪ್ರಕಾರ 'ಲಕ್ಷ್ಮಿ' ಚಿತ್ರತಂಡಕ್ಕೂ ರಾಗಿಣಿ ಕೈಕೊಟ್ಟಿದ್ದಾಳಂತೆ. ಆದ್ದರಿಂದ ಆ ಚಿತ್ರದ ನಿರ್ದೇಶಕ ರಾಘವ ಲೋಕಿ ಅವರು ಐಟಂ ಡ್ಯಾನ್ಸರ್ ಸ್ನೇಹ ಪ್ರಧಾನ್ ಎಂಬ ಬೆಡಗಿಯನ್ನು ಮುಂಬೈನಿಂದ ಕರೆತರುತ್ತಿದ್ದಾರಂತೆ.

ಹೀಗೆ ಎರಡೆರಡು ಐಟಂಸಾಂಗ್‌ಗಳನ್ನು ಮಾಡು ತ್ತೇನೆ ಎಂದು ಭರವಸೆ ಕೊಟ್ಟಿದ್ದ ರಾಗಿಣಿ ಆನಂತರ ಅದರಿಂದ ಹಿಂದೆ ಸರಿದದ್ದು ಏಕೆ? "ಈಗ ಮಲಯಾಳಂನಲ್ಲಿ ಮಮ್ಮುಟ್ಟಿ ಜೊತೆ ನಟಿಸುತ್ತಿರುವುದರಿಂದ ಆಕೆಯ ಅಭಿರುಚಿ ಬದಲಾಗಿರ ಬಹುದು" ಎಂಬುದು ಕೆಲವರ ಅನಿಸಿಕೆ. ಆದರೆ ಇನ್ನೂ ಕೆಲವರು ಹೇಳುವ ಪ್ರಕಾರ "ಹೀಗೆ ಆಫರ್ ಗಳನ್ನು ಒಪ್ಪಿ ಆನಂತರ ತಿರಸ್ಕರಿಸುವುದು ಕೂಡ ಒಂದು ರೀತಿಯಲ್ಲಿ ಬೇಡಿಕೆ ಯಲ್ಲಿದ್ದಂತೆ!"

ಆದರೆ ನಿಜಾನಾ ರಾಗಿಣಿ?

ಸಾರಾ ಗೋವಿಂದು ಕಣ್ಣೀರು



ಕನ್ನಡ ಹೋರಾಟಗಾರ ಮತ್ತು ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾರಾ ಗೋವಿಂದು ಅವರ ಪುತ್ರ ಅನುಪ್ ನಾಯಕ ನಟನಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದು ನಮ್ಮ ಪತ್ರಿಕೆ ಸುಮಾರು ಮೂರು ತಿಂಗಳ ಹಿಂದೆಯೇ ಪ್ರಕಟಿಸಿತ್ತು. ಇತ್ತೀಚೆಗೆ ನಿರ್ಮಾಪಕ ಶ್ರೀನಿವಾಸ್ ಮತ್ತು ನಿರ್ದೇಶಕ ವಸಂತು ಜಂಟಿ ಪತ್ರಿಕಾಗೋಷ್ಠಿಯಲ್ಲಿ "ನಮ್ಮ 'ಡವ್' ಚಿತ್ರದ ನಾಯಕ ಸಾರಾಗೋವಿಂದು ಅವರ ಪುತ್ರ ಅನುಪ್" ಎಂದು ಘೋಷಿಸಿದ್ದಾರೆ.

ಇದಾದ ಒಂದು ವಾರದನಂತರ ಸ್ವತಃ ಗೋವಿಂದು ಪತ್ರಿಕಾಗೋಷ್ಠಿ ಕರೆದು ತಮ್ಮ ಮಗನನ್ನು ಪತ್ರಕರ್ತರಿಗೆ ಪರಿಚಯಿಸಿದರು. ಅಂದಿನ ಸಂತೋಷಕೂಟದಲ್ಲಿ ಸಾರಾ ಗೋವಿಂದು ಮೊದಲ ಬಾರಿಗೆ ಎಮೋಷನಲ್ ಆಗಿದ್ದನ್ನು ನೋಡಿ ಪತ್ರಕರ್ತರು ದಂಗಾದರು. ತಮ್ಮ ಮಗನ ಬಗ್ಗೆ ಮಾತನಾಡುತ್ತ "ಈತ ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡವನು" ಎಂದು ಹೇಳಿದಾಗ ಗೋವಿಂದು ಭಾವೋದ್ವೇಗಕ್ಕೆ ಒಳಗಾದರು. ಅವರಲ್ಲಿದ್ದ ಪುತ್ರವ್ಯಾಮೋಹದ ಜೊತೆಗೆ ಪತ್ನಿಯ ಅಗಲಿಕೆಯ ನೋವೂ ಬೆರೆತಿತ್ತು. ಒಂದು ಕಡೆ ಪುತ್ರನನ್ನು ಹೀರೋ ಮಾಡುವ ಸಂತೋಷ, ಮತ್ತೊಂದು ಕಡೆ ಈ ಹರ್ಷದಾಯಕ ಕ್ಷಣಗಳಲ್ಲಿ ಆತನ ತಾಯಿ ಇಲ್ಲವಲ್ಲ ಎಂಬ ನೋವು ಅವರನ್ನು ಭಾವುಕರನ್ನಾಗಿಸಿತ್ತು.

ಐಟಮ್‌ಸಾಂಗ್ ಇಲ್ಲದೆ ಸಿನಿಮಾ ಇಲ್ಲ



ಬರುವ ದಿನಗಳಲ್ಲಿ ಐಟಂಸಾಂಗ್ ಇಲ್ಲದೇ ಕನ್ನಡ ಸಿನಿಮಾ ಬರುವುದಿಲ್ಲವೋ ಎಂಬ ಗುಮಾನಿ ಶುರುವಾಗುತ್ತಿದೆ. ಇತ್ತೀಚಿನತನಕ ಹೊಸ ಹೀರೋಗಳ ಚಿತ್ರಗಳಲ್ಲಿ ಗ್ಲಾಮರ್‌ಗೋಸ್ಕರ ಐಟಂ ಸಾಂಗ್‌ಅನ್ನು ನಿರ್ದೇಶಕರು ಹಾಕುತ್ತಿದ್ದರು. ಆದರೆ ಈಗ ದೊಡ್ಡ ದೊಡ್ಡ ನಾಯಕ ನಟರುಗಳ ಚಿತ್ರಗಳಲ್ಲೂ ಐಟಂ ಸಾಂಗ್ ಅನಿವಾರ್ಯ ಎಂಬಂತಾಗಿದೆ. ಇದಕ್ಕೆ ತಾಜಾ ಉದಾಹರಣೆ ಸುದೀಪ್ ಅಭಿನಯದ 'ಬಚನ್' ಚಿತ್ರ.

ಶಶಾಂಕ್ ನಿರ್ದೇಶಿಸುತ್ತಿರುವ, ಸುದೀಪ್ ನಾಯಕನಾಗಿ ನಟಿಸುತ್ತಿರುವ 'ಬಚನ್' ಚಿತ್ರದ ಐಟಂ ಸಾಂಗ್‌ನಲ್ಲಿ ಡೈಸಿ ಶಾ ಎಂಬ ನಟಿ ಕಾಣಿಸಿಕೊಂಡಿದ್ದಾಳೆ. ಈಕೆ ಈ ಹಿಂದೆ ಪ್ರಜ್ವಲ್ ದೇವರಾಜ್ ನಟಿಸಿದ್ದ 'ಭದ್ರ' ಮತ್ತು ಜಗ್ಗೇಶ್ ನಟಿಸಿದ್ದ 'ಬಾಡಿಗಾರ್ಡ್' ಚಿತ್ರಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಳು. ಆದರೆ ಆ ಎರಡು ಚಿತ್ರಗಳಲ್ಲೂ ನಟನೆಯ ಒಂದೇ ಒಂದು ಸಣ್ಣ ಝಲಕ್‌ನ್ನು ತೋರಿಸದಿದ್ದ ಆಕೆಗೆ ಹೆಚ್ಚಿನ ಅವಕಾಶಗಳು ಸಿಕ್ಕಿರಲಿಲ್ಲ. ಅಂತಹ ಡೈಸಿ ಈಗ ಸುದೀಪ್ ಚಿತ್ರದಲ್ಲಿ ಐಟಂ ಸಾಂಗ್‌ನಲ್ಲಿ ಮಾದಕವಾಗಿ ಹೆಜ್ಜೆ ಹಾಕಿದ್ದಾಳಂತೆ.

"ನೀವು ಎರಡು ಸಿನಿಮಾಗಳಲ್ಲಿ ನಾಯಕಿ ಆಗಿದ್ದವರು. ನಿಮಗೆ ಐಟಂ ಸಾಂಗ್ ಮಾಡಲು ಸಂಕೋಚವಾಗುವುದಿಲ್ಲವೇ?" ಎಂದು ಕೇಳಿದರೆ "ಸೋ ವಾಟ್? ಐ ಆಮ್ ರೆಡಿ ಫಾರ್ ಎನಿ ಟೈಪ್ ಆಫ್ ರೋಲ್ಸ್" ಎಂದು ಇಂಗ್ಲಿಷಿನಲ್ಲಿ ಉಲಿಯುತ್ತಾಳೆ. ಬಹುಶಃ ನಮ್ಮ ರಾಗಿಣಿಯಂತ ನಟಿಯರು ಡೈಸಿ ಶಾಳಿಂದ ಈ ಬಗ್ಗೆ ಪಾಠ ಕಲಿಯಬೇಕೋ ಏನೊ?

● ಶೆಣೈ



...ಳಾದ ತಮಿಳರು ಯಾವತ್ತೋ ಠಾಕ್ರೆಯ ಟಕ್ಕುತನಕ್ಕೆ ಸಿದ್ಧರೆಯುತ್ತಿದ್ದರು.

ಮಹಾರಾಷ್ಟ್ರ ಸಂತರ ನಾಡು. ಸಂತ ತುಕಾರಾಮ, ಜ್ಞಾನದೇವ, ರಾಮದಾಸ ಮೊದಲಾದವರು ಹುಟ್ಟಿ ಬೆಳೆದ ನಾಡು. ಸ್ವಯಂ ಠಾಕ್ರೆಯ ತಂದೆ ಸೀತಾರಾಮ್ ಠಾಕ್ರೆಯೇ ಮನುಷ್ಯತೆಯ ಪ್ರತಿಪಾದಕ. ವ್ಯಂಗ್ಯಚಿತ್ರಕಾರನಾಗಿ ಸಮಾಜದ ಹೊಂಕುಗಳನ್ನು ತಿಳಿ ಹೇಳುವವನಾಗಿರಬೇಕಿದ್ದ ಬಾಳಾ ಠಾಕ್ರೆ (ಠಾಕ್ರೆಯ ಹಳೆಯ ವ್ಯಂಗ್ಯಚಿತ್ರಗಳ ಸಂಗ್ರಹ ನನ್ನಲ್ಲಿದೆ) ಹೊಡಿಬಡಿ ತತ್ವದಲ್ಲೇ ನಂಬಿಕೆಯಿರಿಸಿ ಮುಂದಡಿಯಿರಿಸಿದ್ದು ಮಾತ್ರ ಖೇದಕರ.

ದಿಲೀಪ್ ಕುಮಾರ್ ಪಾಕಿಸ್ತಾನದ ಪ್ರಶಸ್ತಿಯನ್ನು ಸ್ವೀಕರಿಸಬಾರದು, ಆಶಾ ಭೋಸ್ಲೆ ಅಂತವರೊಂದಿಗೆ ಹಾಡಬಾರದು ಎಂದೆಲ್ಲ ಕ್ಷುಲ್ಲಕದ ಮಾತುಗಳನ್ನಾಡಿದ ಠಾಕ್ರೆ ಯಾವತ್ತಿಗೂ ಆದರ್ಶನೆನಿಸಿಕೊಳ್ಳಲಾರ. ಫಿರೋಜ್ ಷಾ ಕೋಟ್ಲಾ ಮೈದಾನದ ಪಿಚ್ ಅಗೆಯುವುದು, ತೆಂಡೂಲ್ಕರ್ ಕೈಬರಿ ಮೇಲೆ ದಾಳಿ ಮಾಡಿಸುವುದು ಸಾರ್ವಭೌಮತ್ವ ವ್ಯವಸ್ಥೆಗೆ ಯಾವ ರೀತಿಯಿಂದಲೂ ಮೇಳ್ಮಾಡಿಸಿದಂತಹ ಸಡಿಲಿಕೆಗಳಲ್ಲ. ಇಂತಹ ತುಂಬ ಠಾಕ್ರೆ, ಮಹಾರಾಷ್ಟ್ರಕ್ಕೆ ಸೀಮಿತವಾಗಿದ್ದು ದೇಶದ ಅದೃಷ್ಟ.

-ಶಿ ಪುತ್ತೂರು, ದಕ

ಸಂಗೊಳ್ಳಿ 'ಸೂಪರ್' ಸಿನಿಮಾ ಅಲ್ಲ

ಪತ್ರಿಕೆಯ ಖಾಯಂ ಓದುಗನಾದ ನನಗೆ ಇತ್ತೀಚಿನ ಸಿನಿಮಾ ಸಂಬಂಧಿ ವರದಿಗಳು ಬೇಸರ ಉಂಟುಮಾಡುತ್ತಿವೆ.

ಏಕೆಂದರೆ, ಕನ್ನಡದಲ್ಲಿ ಅಪರೂಪಕ್ಕೊಂದು ಅದ್ಧೂರಿ ವೆಚ್ಚದ ಐತಿಹಾಸಿಕ ಚಿತ್ರ ಬಂದಿದೆಯೆಂಬ ಕಾರಣಕ್ಕೆ ಅನೇಕ ನ್ಯೂನತೆಗಳ ಆಗರವಾಗಿರುವ ಚಿತ್ರವನ್ನು 'ಸೂಪರ್ ಸಂಗೊಳ್ಳಿ ರಾಯಣ್ಣ' ಎಂದು ವೈಭವೀಕರಿಸಿ ವರದಿ ಮಾಡಿರುವುದು ಸಮಂಜಸವೆನಿಸುವುದಿಲ್ಲ. ನಾನೂ ಅಪ್ಪಟ ಕನ್ನಡಾಭಿಮಾನಿಯೇ. ಹಾಗೆಂದಾಕ್ಷಣ ಸಾಮಾನ್ಯ ದರ್ಜೆಯ ಸಿನಿಮಾವನ್ನು ಕನ್ನಡ ಎನ್ನುವ ಕಾರಣಕ್ಕೆ 'ಸೂಪರ್' ಎಂದು ಒಪ್ಪಲಾರೆ. ಕಥೆ ಚಿತ್ರಕಥೆ ಸಂಭಾಷಣೆ ನಿರ್ದೇಶನದಾದಿಯಾಗಿ ಅನೇಕ ಲೋಪಗಳುಳ್ಳ ಈ ಚಿತ್ರವನ್ನು ತೆಲುಗಿನ 'ಮಗಧೀರ' ಚಿತ್ರಕ್ಕಿಂತಲೂ ಒಂದು ಹೆಜ್ಜೆ ಮುಂದಿದೆ ಎಂದು ಹೊಗಳಿರುವುದು (ಅದನ್ನೂ ತಮಿಳಿನ 'ಮಗಧೀರ' ಎಂದು ತಪ್ಪಾಗಿ ಬರೆಯಲಾಗಿದೆ), ಭಾವಾಭಿನಯದ ಗಂಧವನ್ನೇ ಅರಿಯದವನಂತೆ ಕೇವಲ ಅರಚಾಡುವುದು, ವೀರಾವೇಶದಿಂದ ವೈರಿ ರುಂಡ ಚೆಂಡಾಡುವುದೇ ಸಂಗೊಳ್ಳಿ ರಾಯಣ್ಣನ ಪಾತ್ರದ ಪರಕಾಯಪ್ರವೇಶ ಮಾಡುವಿಕೆ ಎಂಬಂತೆ ಅಭಿನಯಿಸಿರುವ (ಅಥವಾ ನಿರ್ದೇಶಕರ ಅಪೇಕ್ಷೆಯಂತೆ) ದರ್ಶನ್‌ರ ಪ್ರತಿಭೆಯನ್ನು ಕೊಂಡಾಡಿರುವುದು ಉತ್ಪ್ರೇಕ್ಷೆ ಎನಿಸುತ್ತದೆ.

ಇನ್ನು ನೀನಾಸಂ ಕಲಾವಿದ ಸತ್ಯ 'ಗುಂಡ್ರಗೋವಿ' ಮತ್ತು 'ಬೀರ' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕನಾಗಿ ಅಭಿನಯಿಸಿರುವ ವಿಚಾರ ಸಾಮಾನ್ಯ ಸಿನಿಮಾಸಕ್ತರಿಗೂ ತಿಳಿದಿದೆ ಹಾಗೂ ಪವನ್ ಕುಮಾರ್ ನಿರ್ದೇಶನದ 'ಲೂಸಿಯಾ' ಚಿತ್ರ ಬಿಡುಗಡೆಯೇ ಆಗಿಲ್ಲ, ಹೀಗಿರುವಾಗ 'ಸತೀಶ್ ನಾಯಕನಾಗಿ ಕಾಣಿಸಿಕೊಂಡಿದ್ದ 'ಲೂಸಿಯಾ' ಚಿತ್ರದ ಪಾತ್ರ ಕಮರ್ಷಿಯಲ್ ಆಗಿ ಮೂಡಿಬಂದಿರಲಿಲ್ಲ' ಮತ್ತು 'ನೀನಾಸಂನಿಂದ ಬಂದವರಲ್ಲಿ ಪೂರ್ಣ ಪ್ರಮಾಣದ ನಾಯಕನಾಗಿ ಕಾಣಿಸಿಕೊಳ್ಳುತ್ತಿರುವ ಮೊದಲಿಗ ಸತೀಶ್' ಎಂಬಂತೆ ವರದಿ ಮಾಡಿರುವುದು ಈಗಾಗಲೇ ಸಿನಿಮಾ ನಿರ್ದೇಶಕರಾಗಿ, ಸಿನಿಮಾ ಸಂಬಂಧಿ ವಿಚಾರವನ್ನೇ ವರದಿ ಮಾಡುವ ಶೇಖರರು ಕಾಟಾಚಾರಕ್ಕೆ ಸಿನಿಮಾ ವರದಿ ಮಾಡುತ್ತಿದ್ದಾರೇನೊ ಎಂಬ ಅನುಮಾನ ಹುಟ್ಟು ಹಾಕುತ್ತಿದೆ.

-ಅಳ್ಳಿಮಾರನಹಳ್ಳಿ ಹರೀಶ, ಬೆಂಗಳೂರು

ಬಿ. ಚಂದ್ರೇಗೌಡರ 'ಕಟ್ಟೆಪುರಾಣ'ದಲ್ಲಿ 'ಸಂಗೊಳ್ಳಿ ರಾಯಣ್ಣ'ನ ಬಗ್ಗೆ ವಾಟಿಸ್ಸೆಯ ಅನಿಸಿಕೆ ಸರಿಯಾಗಿದೆ. ಚಿತ್ರದಲ್ಲಿ ನಟ ದರ್ಶನ್‌ನ ಸಂಭಾಷಣೆ ಆತನ ದೇಹ ಭಾಷೆಯ ಜೊತೆ ಬೆರೆತಿಲ್ಲ, ನಟನೆಯಲ್ಲಿ ಕಿಡಿಯಿಲ್ಲ, ಮುಖ್ಯವಾಗಿ ದರ್ಶನ್‌ನ ಧ್ವನಿಯೇ ಆ ಪಾತ್ರಕ್ಕೆ ಸಮಸ್ಯೆ. ಇಂತಹ ಪಾತ್ರಗಳು ಡಾ.ರಾಜ್‌ಕುಮಾರ್ ಅವರ ರಕ್ತದಲ್ಲಿಯೇ ಸೇರಿಕೊಂಡಿದೆ. ಅವರ ಇಂತಹ ಚಿತ್ರಗಳನ್ನು ದರ್ಶನ್ ಮತ್ತು ಚಿತ್ರದ ನಿರ್ದೇಶಕರು ಕನಿಷ್ಟ ಐದು ಬಾರಿಯಾದರೂ ನೋಡಬೇಕಿತ್ತು.

- ರವಿ, ಮೂಡಬಿದರೆ

ನೀನಾಸಂ ಮತ್ತು ಹೀರೋಗಳು

ಕಳೆದ ವಾರದ 'ಲಂಕೇಶ್' ವಾರಪತ್ರಿಕೆಯಲ್ಲಿ ನೀನಾಸಮ್‌ನ ಮೊದಲ ಹೀರೊ ಅಂತ ಸತೀಶ್ ಅವರನ್ನು ವಿಪರೀತವೆನ್ನುವಷ್ಟು ಹೊಗಳಿದ್ದು 'ಲಂಕೇಶ್' ಇಷ್ಟಪಡುವ ನನಗಂತೂ ಸ್ವಲ್ಪವೂ ಸರಿಕಂಡಿಲ್ಲ, ಸತೀಶ ನನ್ನ ಗೆಳೆಯ. ಆತನ ಯಶಸ್ಸು ಆತನದ್ದು. ಯಾವುದೋ ಒಂದು ಸಿನಿಮಾದಲ್ಲಿ ಆತ ಹೀರೋ ಆಗಿದ್ದೇ ಅದು ನೀನಾಸಮ್‌ಗೆ ಕೋಡು ಅನ್ನುವ ಹಾಗೆ ಬರೆಯುವುದು ಸರಿಯಲ್ಲ ಮತ್ತು ಆ ಸಿನಿಮಾ ಪಥೇರ್ ಪಾಂಚಾಲಿ, ಸಂಸ್ಕಾರ, ಚಾರುಲತಾದ ಸಾಲಿಗೆ ಸೇರುವಂತಾದರೆ ಬೇರೆ.

ನೀವು ಬರೆದಂತೆ ಸತೀಶ ಮೊದಲ ಹೀರೋ ಕೂಡ ಅಲ್ಲ, ಈ ಹಿಂದೆ ಸತ್ಯ, ಎಂ.ಎಸ್.ಜಹಾಂಗೀರ್ ಸಿನಿಮಾಕ್ಕೆ ಹೀರೋ ಆದವರಿದ್ದಾರೆ. ಸಿದ್ದರಾಜ ಕಲ್ಯಾಣಕರ್, ಅಚ್ಯುತ ಕುಮಾರ್, ಮಂಡ್ಯ ರಮೇಶ್‌ರಂತಹ ಅದ್ಭುತ ನಟರು ಯಾವ ಹೀರೋಗೂ ಕಡಿಮೆಯಿಲ್ಲದವರು. ಹಾಗೆ ನೋಡಿದರೆ ದರ್ಶನ್ ಕೂಡ ಕೆಲವೊಂದು ಕಾಲ ನೀನಾಸಮ್‌ನಲ್ಲಿ ಕಲಿತು ಬಂದವರೆ. ನೀನಾಸಮ್ ಯಾವಾಗಲೂ ಹೀರೋ. ನೀನಾಸಮ್ ಹೆಮ್ಮೆ ಪಡುವಂತೆ ಅದರ ಹಲವಾರು ಹಳೆ ವಿದ್ಯಾರ್ಥಿಗಳು ಅವರವರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ, ಮಾಡುತ್ತಲೂ ಇದ್ದಾರೆ.

'ಲಂಕೇಶ್' ನನ್ನ ಮೆಚ್ಚಿನ ಪತ್ರಿಕೆ. ಅದನ್ನು ನಾನು ಯಾಕೆ ಇಷ್ಟಪಡುತ್ತೇನೆ ಎಂದರೆ ಅದರ ನಿಷ್ಠುರತೆಗಾಗಿ. ನಾನು ಕೂಡ ನೀನಾಸಮ್ ಹಳೆ ವಿದ್ಯಾರ್ಥಿ.

-ಸಂತೋಷ ಗುದ್ದಿಯಂಗಡಿ, ನಂಜನಗೂಡು

ನೀನಾಸಂ ಸಂಸ್ಥೆಯಲ್ಲಿ ತರಬೇತಿ ಪಡೆದು ಸಿನಿಮಾರಂಗದಲ್ಲಿ ಹೀರೋ ಆದವರಲ್ಲಿ ಸತೀಶ್ ಮೊದಲನೆ ವ್ಯಕ್ತಿಯಲ್ಲ, ಬದಲಾಗಿ ದರ್ಶನ್.

-ಪ್ರಕಾಶ್ ಮೇಹು, ಬೆಂಗಳೂರು

ಮಾದರಿಯಂತಿರುವ ನಾಯಕ ಚಾವೆಜ್

ಸಮಾಜವಾದಿ ಪ್ರಜಾತಂತ್ರ ವ್ಯವಸ್ಥೆಯ ಸರ್ಕಾರಕ್ಕೆ ಪಣ ತೊಟ್ಟು ದುಡಿಯುತ್ತಿರುವ ಹ್ಯೂಗೋ ಚಾವೆಜ್ ಅವರನ್ನು ಕುರಿತು ಇಸ್ಮತ್ ಫಜೀರ್ ಅವರು ಬರೆದ ಲೇಖನ ತುಂಬಾ ಚೆನ್ನಾಗಿ ಮೂಡಿಬಂದಿದೆ. ಬಂಡವಾಳಶಾಹಿ ವಿರುದ್ಧ ಹೋರಾಟ ನಡೆಸುತ್ತಿರುವ ಇನ್ನಷ್ಟು ಜಾಗತಿಕ ವ್ಯಕ್ತಿಗಳ ಪರಿಚಯ ನಮ್ಮ ನೆಚ್ಚಿನ ಪತ್ರಿಕೆಯಿಂದ ನಿರೀಕ್ಷಿಸುತ್ತೇವೆ.

-ಕೆ.ವಿ.ಎಸ್. ಎಸ್‌ಎಂಎಸ್ ಮೂಲಕ

ವೆನೆಜುವೆಲಾ ದೇಶ ಈಗ ತೈಲ ಉತ್ಪಾದನೆಯಲ್ಲಿ ಐದನೆ ಸ್ಥಾನದಿಂದ ಸೌದಿ ಅರೆಬಿಯಾವನ್ನು ಹಿಂದಿಕ್ಕಿ ಒಂದನೇ ಸ್ಥಾನಕ್ಕೆ ಬಂದಿದೆ. ಅಮೆರಿಕಾದ ತೈಲ ಬಕಾಸುರ ಕಂಪನಿಗಳನ್ನು ವೆನೆಜುವೆಲಾದಿಂದ ಎಂದೋ ಗಂಟುಮೂಟೆ ಕಟ್ಟಿಕೊಂಡು ಹೋಗಿವೆ. ಬಲಾಢ್ಯ ಅಮೆರಿಕದಲ್ಲಿ ಬಡವರು ತೀವ್ರ ಚಳಿಗಾಲದಲ್ಲಿ ಥಂಡಿ ಹತ್ತಿ ಸಾಯುತ್ತಾರೆ. ಅವರ ನೆರವಿಗೆ ತಾನು ಉಚಿತವಾಗಿ ತೈಲ ಪೂರೈಸಲು ಸಿದ್ಧ ಎಂದು ವೆಜೆಜುವೆಲಾದ ಅಧ್ಯಕ್ಷ ಹ್ಯೂಗೋ ಚಾವೆಜ್ ಹೇಳಿದಾಗ ಪಾಪಿ ಅಮೆರಿಕದ ಸರ್ಕಾರ ನಿರಾಕರಿಸಿತ್ತು. ಎಲ್ಲಿಯ ಚಾವೆಜ್, ಎಲ್ಲಿಯ ಅಮೆರಿಕದ ನಾಯಕಮಣಿಗಳು. ಚಾವೆಜ್ ಅವರಿಗಿರುವ ಬದ್ಧತೆಯಲ್ಲಿ ಶೇಕಡ ಒಂದರಷ್ಟು ನಮ್ಮ ನಾಯಕರಿಗೆ ಇದ್ದಿದ್ದರೆ...

- ರವಿಕುಮಾರ್, ಹಾಸನ

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ತ್ರೀಡಿಯಲ್ಲಿ ಮಕ್ಕಳ ಚಿತ್ರ



ನಿರ್ಮಾಪಕ ಸೌಂದರ್ಯ ಜಗದೀಶ್‌ರವರ ಪುತ್ರ ಸ್ನೇಹಿತ ಬಾಲನಟನಾಗಿ ನಟಿಸಿರುವ, ದರ್ಶನ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿರುವ 'ಸ್ನೇಹಿತರು' ಚಿತ್ರ ಈಗಾಗಲೇ 50 ದಿನ ಪೂರೈಸಿದೆ. ಕಾಮಿಡಿ ಮತ್ತು ಆಕ್ಷನ್‌ಗಳಿಂದ ತುಂಬಿರುವ ಈ ಚಿತ್ರದ ಯಶಸ್ಸು ಸಹಜವಾಗಿಯೇ ನಿರ್ಮಾಪಕರ ಮುಖದಲ್ಲಿ ನಗುವನ್ನು ಮೂಡಿಸಿದೆ.

"ಎಷ್ಟೋ ಜನ ನಮ್ಮ ಬಗ್ಗೆ ತಪ್ಪು ತಿಳಿಯುತ್ತಾರೆ. ನಾವು ರಿಯಲ್ ಎಸ್ಟೇಟ್‌ನವರು ಬಂದು ಸಿನಿಮಾ ಉದ್ಯಮವನ್ನು ಹಾಳು ಮಾಡುತ್ತಿದ್ದೇವೆ, ಸಿನಿಮಾದ ಬಗ್ಗೆ ನಮಗೆ ಗಾಂಭೀರ್ಯ ಇಲ್ಲ ಎಂದು ಅಪಾರ್ಥ ಮಾಡಿಕೊಂಡಿದ್ದಾರೆ. ಆದರೆ ನಾನು ನನ್ನ ಮಗನನ್ನು ಹಾಕಿ ಮಾಡಿದ ಮೂರೂ ಚಿತ್ರಗಳೂ ನನಗೆ ಲಾಭ ತಂದುಕೊಟ್ಟಿವೆ. ಈ ಹಿನ್ನೆಲೆಯಲ್ಲಿ ಈಗ ಮುಂದಿನ ಬಾರಿ ಒಂದು ಮಕ್ಕಳ ತ್ರೀಡಿ ಚಿತ್ರವನ್ನು ಮಾಡುವ ಯೋಚನೆ ನಮ್ಮದು" ಎನ್ನುತ್ತಾರೆ ಸೌಂದರ್ಯ ಜಗದೀಶ್.

ಅಫ್‌ಕೋರ್ಸ್ ಈ ಚಿತ್ರದಲ್ಲೂ ಅವರ ಮಗನೇ ಮುಖ್ಯ ಪಾತ್ರದಲ್ಲಿರುತ್ತಾನಂತೆ. "ಜೊತೆಗೆ ಅನೇಕ ಬಾಲ ನಟನಟಿಯರು ಚಿತ್ರದಲ್ಲಿರುತ್ತಾರೆ" ಎಂದು ಹೇಳಲು ಅವರು ಮರೆಯಲಿಲ್ಲ. 'ಮೈ ಡಿಯರ್ ಕುಟ್ಟಿ ಚೇತನ್' ತರಹದ ಒಂದು ಮನರಂಜನೆಯ ಮಕ್ಕಳ ಚಿತ್ರಕ್ಕಾಗಿ ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಸೌಂದರ್ಯ ಜಗದೀಶ್ ಹೇಳಿದ್ದಾರೆ.

ಇತ್ತೀಚೆಗೆ ಕನ್ನಡದಲ್ಲಿ ಮಕ್ಕಳ ಚಿತ್ರಗಳು ಹೆಚ್ಚು ಹೆಚ್ಚು ನಿರ್ಮಾಣವಾಗುತ್ತಿರುವುದು ಸಂತೋಷದ ವಿಷಯ. ಅದರಲ್ಲೂ ಸೌಂದರ್ಯ ಜಗದೀಶ್‌ರಂತಹ ಶ್ರೀಮಂತ ನಿರ್ಮಾಪಕರು ಯಾವುದೇ ಹಂತದಲ್ಲೂ ರಾಜಿಯಾಗದೇ ಚಿತ್ರ ಮಾಡುತ್ತಿರುವುದು ಇನ್ನೂ ಮೆಚ್ಚುವಂತದ್ದು.



ಭಟ್ಟರ ಸಿನಿಮಾಗೂ ಬಂತು ಗನ್ನು



ಯೋಗರಾಜ್ ಭಟ್ಟರೂ ನಿಧಾನವಾಗಿ ಬದಲಾಗುತ್ತಿದ್ದಾರೆ ಎನ್ನುತ್ತಾರೆ ಗಾಂಧಿನಗರದ ಜನ.

ಯೋಗರಾಜ್ ಭಟ್ ನಿರ್ದೇಶನದ 'ಡ್ರಾಮಾ' ಚಿತ್ರ ಈ ವಾರ ತೆರೆ ಕಾಣಲಿದೆ. ಈ ಚಿತ್ರದಲ್ಲಿ ಯಶ್ ನಾಯಕ ಮತ್ತು ನೀನಾಸಂ ಸತೀಶ್ ನಾಯಕನಿಗೆ ಸರಿಸಮನಾದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಭಟ್ಟರ ಚಿತ್ರದಲ್ಲಿ ನಾಯಕಿಯಾಗಿ ರಾಧಿಕಾ ಪಂಡಿತ್ ಕಾಣಿಸಿಕೊಂಡಿದ್ದಾಳೆ.

'ಮುಂಗಾರು ಮಳೆ' ಚಿತ್ರದ ನಂತರ ಕನ್ನಡ ಚಿತ್ರರಂಗದ ದಿಗಂತದಲ್ಲಿ ದಿಢೀರನೆ ತಾರಾಮೌಲ್ಯ ಮತ್ತು ವರ್ಚಸ್ಸನ್ನು ಪಡೆದ ಯೋಗರಾಜ್ ಭಟ್ ಕಳೆದ ಬಾರಿ ಪುನೀತ್ ನಾಯಕನಾಗಿ ನಟಿಸಿದ್ದ 'ಪರಮಾತ್ಮ' ಚಿತ್ರದಲ್ಲಿ ಸ್ವಲ್ಪ ಯಾಮಾರಿದ್ದರು. 'ಪರಮಾತ್ಮ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ನಿರೀಕ್ಷಿಸಿದಷ್ಟು ಹಣ ಗಳಿಕೆಯನ್ನು ಮಾಡಲಿಲ್ಲ, ಅಷ್ಟೇ ಅಲ್ಲ ಆ ಚಿತ್ರ ಒಂದಿಷ್ಟು ಹಣ ಮಾಡಿದ್ದೂ ಕೂಡ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್‌ರವರ ನಾಮಬಲದ ಮೇಲೆಯೇ ಹೊರತು ಯೋಗರಾಜ್ ಭಟ್ಟರ ಕ್ರಿಯೇಟಿವಿಟಿಯಿಂದ ಅಲ್ಲ ಎಂದು ಗಾಂಧಿನಗರದ ಜನರು ಮಾತನಾಡಿಕೊಂಡಿದ್ದರು.



ಅದಕ್ಕೆ ಈ ಬಾರಿ ಭಟ್ಟರು ಅಷ್ಟೇನೂ ತಾರಾಮೌಲ್ಯವಿಲ್ಲದ ಯಶ್ ಮತ್ತು ನೀನಾಸಂ ಸತೀಶ್‌ರನ್ನು ನಾಯಕರನ್ನಾಗಿ ಆಯ್ಕೆ ಮಾಡಿಕೊಂಡು 'ಡ್ರಾಮಾ' ಚಿತ್ರ ತೆರೆಗೆ ಅರ್ಪಿಸುತ್ತಿದ್ದಾರೆ. ಸಾಧಾರಣವಾಗಿ ಭಟ್ಟರ ಚಿತ್ರಗಳಲ್ಲಿ ಫೈಟಿಂಗ್, ಗನ್ನು ಮೊದಲಾದವು ಇರುವುದಿಲ್ಲ, ಆದರೆ 'ಡ್ರಾಮಾ' ಚಿತ್ರದ ಮೊದಲರ್ಧದಲ್ಲಿ ಎಂದಿನಂತೆ ಯೋಗರಾಜ್ ಭಟ್ಟರ ಹಾಸ್ಯದ ಧಾಟಿಯ ನಿರೂಪಣೆ ಇದೆಯಂತೆ. ಆನಂತರ ಹೊಡೆದಾಟ, ಗನ್ನು, ಫೈಟ್ ಇವೆಲ್ಲವೂ ತುಂಬಿಕೊಂಡಿವೆಯಂತೆ. ಅಂದರೆ, ಬಾಕ್ಸ್ ಆಫೀಸ್ ಗಳಿಕೆಯ ಕಾರಣಕ್ಕಾಗಿ ಭಟ್ಟರೂ ಗಾಂಧಿನಗರದ ಸೂತ್ರಗಳಿಗೆ ಶರಣಾಗಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಚಿತ್ರ ನೋಡಿದ ನಂತರವೇ ಇದರ ಬಗ್ಗೆ ನಾವೊಂದು ತೀರ್ಮಾನಕ್ಕೆ ಬರಬಹುದು. ಅಲ್ಲಿತನಕ ಒಂದು ಸ್ಮಾಲ್ ಬ್ರೇಕ್.



ತಮಿಳಾಂಬೆಗೆ ಜಗ್ಗೇಶ್ ಶರಣು

ನವರಸ ನಾಯಕ ಜಗ್ಗೇಶ್ ಅವರ 10ನೇ ಮುಖದ ಪರಿಚಯ ಅವರ ಚೊಚ್ಚಲ ನಿರ್ದೇಶನದ 'ಗುರು' ಚಿತ್ರದ ಮುಖಾಂತರ ಪ್ರೇಕ್ಷಕರಿಗೂ, ಉದ್ಯಮದವರಿಗೂ ಆಗಿದೆ.

'ನನ್ನ ಮಗನ ಪ್ರತಿಭೆಯನ್ನು ಸರಿಯಾಗಿ ಯಾರೂ ಬಳಸಿಲ್ಲ, ಆ ಕಾರಣಕ್ಕಾಗಿ ನಾನೇ ಒಳ್ಳೆಯ ಕಥೆಯನ್ನ ಬರೆದು ಚಿತ್ರ ನಿರ್ದೇಶಿಸುತ್ತಿದ್ದೇನೆ' ಎಂದು ಚಿತ್ರದ ಮುಹೂರ್ತದ ಸಂದರ್ಭದಲ್ಲಿ ಜಗ್ಗೇಶ್ ಹೇಳಿದ್ದರು. ಅವರ ಮಾತನ್ನು ಗಂಭೀರವಾಗಿ ಪರಿಗಣಿಸಿದ್ದ ಉದ್ಯಮದ ಜನರು ಮತ್ತು ಪತ್ರಕರ್ತರು 'ಗುರು' ಚಿತ್ರವನ್ನು ಭಾರೀ ಕುತೂಹಲದಿಂದ ಎದುರು ನೋಡುತ್ತಿದ್ದರು. ಕಳೆದ ವಾರ ಈ ಚಿತ್ರ ಬಿಡುಗಡೆಯಾದ ನಂತರ ಜಗ್ಗೇಶ್ ಅವರ ಅಸಲಿ ಬಣ್ಣ ಎಲ್ಲರಿಗೂ ಗೊತ್ತಾಗಿದೆ.

ಅದೇನೆಂದರೆ, 'ಗುರು' ಚಿತ್ರ ಜಗ್ಗೇಶ್‌ರ ಸ್ವಂತ ಕಲ್ಪನೆಯ ಕಥಾವಸ್ತುವಿನ ಚಿತ್ರವಲ್ಲ, ಇದು ತಮಿಳಿನಲ್ಲಿ ಜಯಭೇರಿ ಭಾರಿಸಿದ 'ಮೌನಗುರು' ಎಂಬ ಚಿತ್ರದ ರೀಮೇಕ್. ರೀಮೇಕ್ ಮಾಡುವುದು ತಪ್ಪೇನೂ ಅಲ್ಲ, ಆದರೆ ಜಗ್ಗೇಶ್ ಈ ಸತ್ಯವನ್ನು ಯಾಕೆ ಮುಚ್ಚಿಟ್ಟರು ಎಂಬುದು ಗೊತ್ತಿಲ್ಲ. ಕನಿಷ್ಠ ತನ್ನ ಚೊಚ್ಚಲ ನಿರ್ದೇಶನದ ಚಿತ್ರಕ್ಕಾಗಿಯಾದರೂ ಈ ಕನ್ನಡಕುವರ ಕನ್ನಡದ ಕಥೆಗಾರರಿಂದ ಒಂದು ಕಥೆ ಬರೆಸಬಹುದಿತ್ತಲ್ಲವೇ? ಯಾವಾಗಲೂ ಕನ್ನಡ... ಕನ್ನಡ ಎಂದು ಕನ್ನಡಾಂಬೆಯನ್ನು ಹೊಗಳುವ ಜಗ್ಗೇಶ್ ತಮ್ಮ ಮೊದಲ ಚಿತ್ರಕ್ಕೆ ತಮಿಳಾಂಬೆಗೆ ಶರಣಾಗಬಾರದಿತ್ತು.

ಅದೆಲ್ಲ ಬದಿಗಿಟ್ಟು ನೋಡಿದರೂ 'ಗುರು' ಚಿತ್ರ ನಿರೀಕ್ಷಿಸಿದಷ್ಟು ಯಶಸ್ಸು ಕಂಡಿಲ್ಲ. ಅಪ್ಪ ಮತ್ತು ಮಗ ಇಬ್ಬರೂ ಸಾಧಾರಣವಾಗಿ ಕೆಲಸ ಮಾಡಿದ್ದಾರೆಯೇ ವಿನಃ ಅಲ್ಲಿ ಎಕ್ಸ್‌ಟ್ರಾಆರ್ಡಿನರಿ ಎಂದು ಗುರುತಿಸುವಂತಹುದ್ದು ಏನೂ ಇಲ್ಲ. ಹೀಗಾಗಿ 'ಗುರು' ಕನ್ನಡದ ಪ್ರೇಕ್ಷಕರನ್ನು ನಿರಾಸೆಗೊಳಿಸಿದ್ದಾನೆ.


ಸುಲ್ತಾನನಿಗೆ ಬಾದಷಾ ಸವಾಲು?

ಡಿಸೆಂಬರ್ 20 ರಂದು ಪುನೀತ್ ರಾಜ್‌ಕುಮಾರ್ ನಟಿಸಿರುವ 'ಯಾರೇ ಕೂಗಾಡಲಿ' ಚಿತ್ರ ಬಿಡುಗಡೆಯಾಗುವುದು ಬಹುತೇಕ ಖಾತ್ರಿಯಾಗಿದೆ. ಪವರ್‌ಸ್ಟಾರ್ ಪುನೀತ್‌ರ ಈ ಚಿತ್ರವನ್ನು ಅವರ ಅಭಿಮಾನಿಗಳು ಮಾತ್ರವಲ್ಲ, ಉದ್ಯಮದ ಉಳಿದ ತಾರೆಯರು ಮತ್ತು ಹಂಚಿಕೆದಾರರು ಕೂಡ ತುಂಬ ಕುತೂಹಲದಿಂದ ಎದುರು ನೋಡುತ್ತಿದ್ದಾರೆ.



ಇದಕ್ಕೆ ಮುಖ್ಯ ಕಾರಣ ಪುನೀತ್ ನಾಯಕನಾಗಿ ನಟಿಸಿದ್ದ 'ಪರಮಾತ್ಮ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ನಿರೀಕ್ಷಿಸಿದಷ್ಟು ಜಯಭೇರಿ ಭಾರಿಸಿಲ್ಲದಿರುವುದು.

ಸಮುದ್ರಗಣಿ ನಿರ್ದೇಶಿಸಿರುವ 'ಯ... ಕೂಗಾಡಲಿ' ತಮಿಳು ... ಚಿತ್ರವೊಂದರ ರೀಮೇ... ಇದರಲ್ಲಿ ಬೇಕಾದಷ್... ಕಮರ್ಷಿಯಲ್ ಅಂಶಗಳಿರುವುದರಿಂ... ಪುನೀತ್ ರಾಜ್‌ಕು... ಮತ್ತೆ ಬಾಕ್ಸ್ ಆಫೀಸ್‌ನ ಬಾದಷಾ ಆಗಿ ಮೆರೆಯುತ್ತಾರಾ ಎಂಬ ಕುತೂಹಲ ಎಲ್ಲೆಡೆಯಿದೆ.



ಈ ಮಧ್ಯೆ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರದ ಬಾಕ್ಸ್ ಆಫೀಸ್ ಕಲೆಕ್ಷನ್ ನಟ ದರ್ಶನ್ ಅವರಿಗೆ 'ಬಾಕ್ಸ್ ಆಫೀಸ್ ಸುಲ್ತಾನ್' ಎಂ... ಬಿರುದನ್ನು ತಂದುಕೊಟ್ಟಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4
Fax : 26604536